ಅಖಿಲ ಭಾರತ ಪತ್ರಿಕೆ

ಜೂನ್ 2026



# ಮಹೇಶ್ವರಿ

ಬೆಲೆ : 15/-




ಫೋಟೋ: ಇಮೇಜಿಂಗ್ ಸಾವಿತ್ರಿ

# ಅಖಿಲ ಭಾರತ ಪತ್ರಿಕೆ

**ಜೂನ್ 2026**

ಸಂಪುಟ: 36 ಸಂಚಿಕೆ: 06



**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com



**ಪರಿಶೀಲನಾ ಸಮಿತಿ:**
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo
complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.


## ಪರಿವಿಡಿ

## ಮಹೇಶ್ವರಿ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ದಿವ್ಯಮಾತೆಯ ನಾಲ್ಕು ಶಕ್ತಿಗಳು** 5
ಅನು: ಶ್ರೀ ಪುಟ್ಟು ಕುಲಕರ್ಣಿ

**ಪರಮೋಚ್ಚ ಪ್ರಜ್ಞೆ** 16
ಅನು: ಡಾ॥ ಮಹಾದೇವ ಸಕ್ರಿ

**ಕಾರುಣ್ಯ (ಕರುಣೆ)** 29
ಅನು: ಶ್ರೀ ಕಿಶೋರಕುಮಾರ ಕಾಸಾರ

**ಆಧ್ಯಾತ್ಮಿಕ ಪ್ರಜ್ಞೆಯ ಬೀಜಗಳು** 43
ಅನು: ಶ್ರೀ ಪುಟ್ಟು ಕುಲಕರ್ಣಿ
ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 51
ಅನು: ಜಾನ್ವಿ

**ಮುಖಪುಟದ ಕವನಗಳು** 61
ಅನು: ಶ್ರೀ ಪುಟ್ಟು ಕುಲಕರ್ಣಿ

## ಸಂಪಾದಕರ ಟಿಪ್ಪಣಿ

ಸಂರಚನೆಗೊಂಡಿರುವ ಜಗತ್ತಿಗೆಲ್ಲ ಈ 'ಜ್ಞಾನ'ವೇ ಆಧಾರವಾಗಿರುವದು. ಈ ಜ್ಞಾನದ ಮೂಲಕ ಕಾರ್ಯತತ್ಪರವಾಗುವದರ ಮೂಲಕ ಅದನ್ನು ಮತ್ತೂ ಔನ್ನತ್ಯಕ್ಕೆ ಕೊಂಡೊಯ್ಯುವದು 'ಪ್ರಜ್ಞೆ'. ಈ ವಿಷಯದಲ್ಲಿ ಆದಿಶಕ್ತಿ, ಮಹೇಶ್ವರಿಯ ಶಕ್ತಿಯು ಔನ್ನತ್ಯದಿಂದ ಧಾರೆಗೊಳ್ಳುತ್ತಿದ್ದು ಸರ್ವಸ್ವವನ್ನೂ ನಿಯತಿಬದ್ಧತೆಯಲ್ಲಿ ಸೂತ್ರೀಕರಿಸುತ್ತಿರುವ ವಿಷಯಗಳ ಕುರಿತು ಈ ಸಂಚಿಕೆ ರೂಪಿತಗೊಂಡಿದೆ. (ಎಐಎಮ್)

~~~~~~~~~~~~~~~~

## ಸಂಪಾದಕೀಯ

### ಮಹೇಶ್ವರಿ ಆಂತರ್ಯ

ಆದಿಶಕ್ತಿ ಶ್ರೀಮಾತೆಯ ನಾಲ್ಕು ಸ್ವರೂಪಗಳ – ಮ(ಮಾ)ಹೇಶ್ವರೀ, ಮಹಾಲಕ್ಷ್ಮೀ, ಮಹಾಕಾಳಿ ಮತ್ತು ಸರಸ್ವತಿ – ಶ್ರೀ ಅರವಿಂದರು ನಮ್ಮ ರಾಷ್ಟ್ರದ ಅಸ್ಮಿತೆಯಾಗಿರುವ ಮಾತೃಪ್ರಧಾನದ ಅಂತಃಶಕ್ತಿಯನ್ನು ತಮ್ಮ ಅಭಿವ್ಯಕ್ತಿಗಳಲ್ಲಿ ವಿವರವಾಗಿ ತೋರಿಸಿದ್ದಾರೆ. ಯೋಗ ಸಾಧನೆಯ ಮೂಲಕ ಈ ನಾಲ್ಕೂ ಸ್ವರೂಪಗಳ ಆರಾಧನೆಯ ಮೂಲಕ 'ಪೂರ್ಣ ಯೋಗ'ವನ್ನು ಅನುಸಂಧಾನ ಮಾಡಿಕೊಂಡು ನಮ್ಮ ಜೀವನವನ್ನು 'ದಿವ್ಯ ಜೀವನ'ವನ್ನಾಗಿಸಲು ಸೂಕ್ತ ಪಥವನ್ನು ತೋರಿದ್ದಾರೆ.

ಮಹೇಶ್ವರಿಯು ಆದ್ಯ ಸ್ವರೂಪಳಾಗಿದ್ದು ಆದಿಶಕ್ತಿಯೂ ಆಗಿದ್ದಾಳೆ. ದಹರಾಕಾಶವೇ ಅವಳಿರುವ ತಾಣ. ಆಕಾಶ, ಪರಾಕಾಶ, ದಹರಾಕಾಶಗಳು ಯೋಗದ ಹಂತದ ಮೂಲಕವಾಗಿ ಸಾಕ್ಷಾತ್ಕಾರಕ್ಕೆ ಲಭ್ಯವಾಗುತ್ತವೆ. ವೇದಾಂತ ಸೂತ್ರ(1–3–4)ವೂ ದಹರ ಉತ್ತರೇಭ್ಯ ಎಂದೇ ಹೇಳುತ್ತಿದೆ. ಹೀಗಾಗಿ ಈ ಶಕ್ತಿಯನ್ನು ದಹರಾಕಾಶರೂಪಿಣೀ ಎನ್ನುತ್ತಾರೆ. ಬ್ರಹ್ಮಾಂಡ, ಪ್ರಪಂಚ, ಜಗತ್ತು, ಆಕಾಶ, ಪರಾಕಾಶ, ಚಿದಾಕಾಶಗಳನ್ನೆಲ್ಲವನ್ನೂ ಒಳಗೊಂಡ ದಹರಾಕಾಶವು ನಿಸ್ಸೀಮವಾಗಿರುವ ಅನಂತಾನಂತವಾಗಿರುವ ಅವಕಾಶವಾಗಿದೆ. ಇದು
~~~~~~~~~~~~~~~~

ಮಹೇಶ್ವರಿಯ ಸ್ಥಾನ. ಹೀಗಾಗಿ ಸರ್ವಸ್ವವೂ ಈ ಮಹೇಶ್ವರಿಯ ಇಚ್ಛೆಯಂತೆಯೇ ನಿಯತಿಬದ್ಧತೆಯಲ್ಲಿ ಕಾರ್ಯತತ್ಪರವಾಗಿರುತ್ತದೆ. ಯೋಗ ಸಾಧನೆಯಲ್ಲಿ ರೂಪಿತವಿರುವಂತೆ, ಈ ಬ್ರಹ್ಮ ಪುರದಲ್ಲಿ (ಮಾನವ ದೇಹದಲ್ಲಿಯೂ ಸಹಿತ) ಸಣ್ಣದಾಗಿರುವ ಪುಂಡರೀಕ ಸ್ವರೂಪದ ಮನೆಯಿದೆ. ಇದರೊಳಗೆ ದಹರಾಕಾಶವಿದೆ. ಇದನ್ನು ಅರಿತುಕೊಳ್ಳಬೇಕು, ಇದಕ್ಕಾಗಿ ಜಿಜ್ಞಾಸೆ ಮಾಡಬೇಕು ಎಂದು ಛಾಂದೋಗ್ಯವು 'ಅಥ ಯದಿದಮಸ್ಮಿನ್ ಬ್ರಹ್ಮಪುರೇ ದಹರಂ ಪುಂಡರೀಕಂ ವೇಶ್ಮ ದಹರೋಽಸ್ಮಿನ್ನಂತರಾಕಾಶಸ್ತಸ್ಮಿನ್ ಯದಂತಸ್ತದನ್ವೇಷ್ಟವ್ಯಂ ತದ್ಭಾವ ವಿಜಿಜ್ಞಾಸಿತವ್ಯಮ್ (8–1–1)' ವಿವರಿಸುತ್ತದೆ.

ಪರಬ್ರಹ್ಮನಿಗೆ ನಾಲ್ಕು ರೂಪಗಳು – ಪುರುಷ, ಅವ್ಯಕ್ತ, ವ್ಯಕ್ತ ಮತ್ತು ಕಾಲ – ಇರುವಂತೆ ದೇವಿಯು ಈ ನಾಲ್ಕಕ್ಕಿಂತಲೂ ಉತ್ಕೃಷ್ಟವಾದ ರೂಪವನ್ನು ಹೊಂದಿರುವದರಿಂದ ಇವಳನ್ನು 'ಪರಮಾ' ಎಂದೂ ಅದೇ ರೀತಿ ಪರಾಕಾಶಾ ಎಂದೂ ಕರೆಯಲಾಗುತ್ತಿದೆ, ಮಾನವನು ತನ್ನ ಭಕ್ತಿಯ ಸಮರ್ಪಣೀಯ ಮೂಲಕ, ಜ್ಞಾನದ ಪಥದಲ್ಲಿ ಸಾಗುವದರ ಮೂಲಕ. ಪ್ರಜ್ಞಾ ವಿಕಾಸದಲ್ಲಿ ಅನುಭಾವಿಯಾಗುವ ಮೂಲಕ ಮತ್ತು ಚೇತನದಲ್ಲಿ ಅನುಭೂತಿಗೊಂಡು ಮಹೇಶ್ವರಿಯ ಕೃಪೆಗೆ ಪಾತ್ರವಾಗುವ ಮೂಲಕ ತನ್ನ ಗಮ್ಯವನ್ನು ಕಂಡುಕೊಳ್ಳುವ ಅತ್ಯಪರೂಪದ 'ಜ್ಞಾನ ಪಥ'ವನ್ನು ಶ್ರೀ ಅರವಿಂದರು ಈ 'ನಾಲ್ಕು ಶಕ್ತಿ'ಗಳ ಜ್ಞಾನವನ್ನು ಒದಗಿಸಿದ್ದಾರೆ.

ನಮ್ಮ ಭಾವವು ಸತತ ಪ್ರಯತ್ನದಲ್ಲಿ ಭವ್ಯತೆಯತ್ತ ಸಾಗುತ್ತಿದ್ದಲ್ಲಿ ಅಲ್ಲಿ ಪ್ರತಿ ಹೆಜ್ಜೆಗೂ ಬೆಳಕಿನ ಪಥವೇ ಒದಗಿಬರುತ್ತದೆ. ಅಲ್ಲಿ ನಮ್ಮ ಹೆಜ್ಜೆಗಳೂ ದಾಖಲಾಗುತ್ತವೆ. ಆ ಪರಮ ಸತ್ಯದ ದೇವಿಯು ಯಾವ ಗಮ್ಯವನ್ನು ಸದಾ ತೋರುತ್ತಾ, ನಾವು ಆ ದಿಸೆಯತ್ತ ಸಾಗಿ ಬರುವದಕ್ಕಾಗಿ ರಕ್ಷೆಯನ್ನೂ ಕೊಡುತ್ತಾಳೆ. ಇದು ಅತ್ಯಂತ ನವಿರಾದ ಮಾರ್ಗವೂ ಆಗಿದೆ ಅಲ್ಲದೇ ಕನಸಿನ ರೀತಿಯಲ್ಲಿ ಕುಣಿಕುಣಿದು ಮಿಂಚುತ್ತ ಇರುತ್ತದೆ. ಇದನ್ನು ಸಾಧನೆಯಲ್ಲಿ ಸಾಧಿಸಿದಲ್ಲಿ, ಆರೋಹಣದ ಕ್ರಮದಲ್ಲಿ ಭ್ರೂಮಧ್ಯದ ನೆಲೆಗೆ ಮಾಗಲೆಂದು ನಮ್ಮ ಯೋಗ ಸಾಧನೆಯು ಹಂತಗೊಂಡಲ್ಲಿ, ಜೊತೆಗೆ ಆ ತಾಣ ತಲುಪಿದಲ್ಲಿ ಅಲ್ಲಿರುವ ಆ ದಹರಾಕಾಶಾ ಮಾತೆಯು ತನ್ನ ಗಹನಾತಿಗಹನ ಸೌಂದರ್ಯ ಮತ್ತು ವರದ

ಹಸ್ತದಲ್ಲಿ ಕೃಪೆಯನ್ನು ನೀಡುತ್ತಾಳೆ. ಈ ಗೂಢವಾಗಿರುವ ಆ ವರ್ಣ ವಿನ್ಯಾಸದಲ್ಲಿ ರೂಪುಗೊಂಡಿರುವ ಚಿತ್ರ ಲಿಪಿಯಲ್ಲಿ ಜ್ಞಪ್ತಿಯು ಸಾಲು ಸಾಲಿನಲ್ಲಿ ಲಿಖಿತಗೊಳ್ಳುತ್ತದೆ. ಇದೇ ನಿತ್ಯವೂ ಪರಮ ಪಾವನದ ಹೊಂಬೆಳಗಿನಲ್ಲಿ ಆ ಮಹತ್ ದೈವ ಯಜ್ಞದ ನಿತ್ಯ ಪರಮ ಪಾವನತೆಯನ್ನು ದಿವ್ಯ ಲಿಪಿಯಲ್ಲಿ ದಾಖಲಿಸುತ್ತದೆ. ಇದು ತನ್ನನ್ನು ತಾನೇ ಅರಿಯಲು ರೂಪಿತಗೊಂಡಿರುವ ಹಂತವಾಗಿದೆ. ನಿರಾಕಾರದ ಆಂತರ್ಯದಲ್ಲಿರುವ ಸ್ವರೂಪಾತ್ಮಕವಾಗಿರುವ ಜಗತ್–ಸೃಷ್ಟಿಯ ಸರ್ವ ಸಂಗತಿಗಳೂ ಬೀಜ ಸ್ವರೂಪದಲ್ಲಿರುವದೇ ಈ ದಹರಾಕಾಶ, ಇಲ್ಲಿಯೇ ಮಹೇಶ್ವರಿಯು ಇರುವದರಿಂದ, ಅವಳೇ ಇಡೀ ಬ್ರಹ್ಮಾಂಡಕ್ಕೂ ಮಾತೆಯಾಗಿದ್ದಾಳೆ.

ನಮ್ಮ ಭಾವಗಳು ಚಿದ್ಭಾವಗಳಾಗಿ ಬಯಕೆಗಳು ಭವ್ಯ ಬೆಡಗಾಗುವ ಮೂಲಕ ನಮ್ಮ ಹೃತ್ಕಮಲವು ಅರಳಿದಾಗ, ಮಾತ್ರ ಈ ದಹರಾಕಾಶದ ಅರಿವು ತನ್ಮೂಲಕ ಮಹೇಶ್ವರಿಯ ಕೃಪೆಯು ಲಭ್ಯವಾಗುತ್ತದೆ. ಇಲ್ಲಿಂದಲೇ ಉಗಮಿಸುವ ಸ್ವರ್ಣ ಜ್ಯೋತಿಯು ಬೆಳಗಿನ ಮೂಲಕ ನಮ್ಮ ಚಕ್ಷುಗಳನ್ನು ಮುಕ್ತಗೊಳಿಸುತ್ತದೆ. ನಿಯತಿಯಂತೆಯೇ ನಿರ್ಧರಿತವಾಗಿರುವ ಯಾನವು ಸುಲಲಿತಗೊಳ್ಳುತ್ತದೆ. ನಿತ್ಯತ್ವವು ಚಲನೆಯಲ್ಲಿ ಸರ್ವವ್ಯಾಪ್ತಗೊಳ್ಳುತ್ತದೆ. ಇಲ್ಲಿಯೇ ತಾರೆಗಳು–ಗ್ರಹಗಳು–ಬೆಳಕಪುಂಜಗಳು ಸೃಷ್ಟಿಗೊಂಡು, ಮಹೇಶ್ವರಿಯು ಎಲ್ಲೆಲ್ಲಿ ಹೆಜ್ಜೆ ಇಡುವಳೋ ಅಲ್ಲೆಲ್ಲ ಜಗತ್ತು ಸಂರಚನೆಗೊಳ್ಳುತ್ತ ಸಾಗುತ್ತದೆ. ಸೂರ್ಯನೂ ಸಹಿತ ಇದೆಲ್ಲವನ್ನೂ ಗಮನಿಸಲೆಂದೇ ಸದಾ ಜ್ಯೋತಿ ಕಾಂತಿಯಲ್ಲಿ ಚಲಿಸುತ್ತಾನೆ. ಇಲ್ಲಿಯವರೆಗೂ ಗೌಪ್ಯವಾಗಿದ್ದ ಆಳದಾಳದಲ್ಲಿದ್ದ ಜ್ಞಾನವೂ ಪ್ರಕಾಶನಗೊಳ್ಳುವ ಮೂಲಕ ಪ್ರಜ್ಞೆಯಾಗಿ ಚೇತನವಾಗಿ ವಿಕಾಸ ಹೊಂದುತ್ತದೆ. ಕ್ಷಿತಿಜವೂ ಸೀಮಾತೀತವಾಗಿ ವಿಸ್ತಾರಗೊಳ್ಳುತ್ತ ಸಾಗುತ್ತದೆ.

ಶಕ್ತಿಯ ಮೂಲ, ನಿತ್ಯತ್ವ, ಶಾಶ್ವತತೆಗಳು ಈ ರೂಪಾಂತರಣದ ಮೂಲಕವೇ ಅನುಷ್ಠಾನಗೊಳ್ಳುವ ಅಭೀಪ್ಸೆ ಮಹೇಶ್ವರಿಯದಾಗಿದೆ. ತಾನೇ ಮೂಲವಾಗಿ, ಬೀಜವಾಗಿ, ವಿಕಾಸದಲ್ಲಿ ಹಲವು ಅವಸ್ಥಾಂತರಗಳಲ್ಲಿ ಪರಿಪೂರ್ಣಗೊಳ್ಳುತ್ತ ಪರಿಪಕ್ವತೆಯನ್ನು ಪ್ರತಿಯೊಂದು ಜೀವಿಯೂ ಲಭ್ಯಗೊಳಿಸಿಕೊಳ್ಳಲೇಬೇಕು ಎನ್ನುವದೇ 'ಮಹೇಶ್ವರಿ'ಯ ಆಂತರ್ಯವಾಗಿದೆ. (ಪಿಪಿಕೆ)

# ದಿವ್ಯಮಾತೆಯ ನಾಲ್ಕು ಶಕ್ತಿಗಳು

**– ಅನು: ಪುಟ್ಟು ಕುಲಕರ್ಣಿ**

ದಿವ್ಯಮಾತೆಯ ಶಕ್ತಿಯು ಸದಾ ನಮ್ಮ ರಕ್ಷಣೆಗಾಗಿಯೇ ಸಿದ್ಧವಿದೆ ಎನ್ನುವದೇ ನಾವು ಹೊಂದಿರುವ ನಮ್ಮ ಸಾಮರ್ಥ್ಯಕ್ಕೆ ಆಧಾರವಾಗಿದೆ. ಯಾವಾಗ ಅವಳು ಸ್ವರೂಪವನ್ನು ಧಾರಣೆ ಮಾಡಲು ಆಗಮಿಸುತ್ತಾಳೆಯೋ, ಆಗ ಅದು ಸಹಜವಾಗಿ ಪ್ರಗತಿ ಹೊಂದುತ್ತ ಪೂರ್ಣಗೊಳ್ಳುತ್ತದೆ.

ಶ್ರೀಮಾತೆಯ ಈ ನಾಲ್ಕು ಮಹತ್ತರವಾದ ಶಕ್ತಿಗಳು, ಅವಳ ನೇತೃತ್ವದಲ್ಲಿಯೇ ಇರುವ ಅವಳದೇ ಶಕ್ತಿಯ ನಾಲ್ಕು ರೂಪಗಳಾಗಿವೆ. ಇವೇ ನಾಲ್ಕು ಸ್ವರೂಪದಲ್ಲಿಯೇ ಅವಳೆದುರೇ ಅವೆಲ್ಲವೂ ಅಸ್ತಿತ್ವವನ್ನು ಪಡೆದುಕೊಳ್ಳುತ್ತವೆ. ಈ ಲೋಕಕ್ಕೆ ಮಾರ್ಗದರ್ಶನ ಮಾಡಲು ಸ್ಥಿತಗೊಂಡಿವೆ. ಜೊತೆಜೊತೆಗೆ ಈ ಭೌತಿಕ (ಲೌಕಿಕ) ಲೀಲೆಗಳಲ್ಲಿ ಅವಳ ಈ ವ್ಯವಹರಣೆಗಳಲ್ಲಿ ಪ್ರಕಟಗೊಳ್ಳುತ್ತವೆ. ಅವುಗಳಲ್ಲಿ ಒಂದನೇಯದು, – ಅವಳ ವ್ಯಾಪ್ತಗೊಂಡ ಪ್ರಶಾಂತ ಮತ್ತು ಸಮ್ಮಿಲಿತ ಬುದ್ಧಿಮತ್ತೆ(ಪ್ರಜ್ಞೆ)ಯಾಗಿದ್ದು, ಮತ್ತು ಘನ ಪ್ರಶಾಂತತೆಯ ಕೃಪಾ ಗುಣವನ್ನೂ ಹೊಂದಿದೆ. ಹಾಗೂ ಅಕ್ಷಯವಾಗಿರುವ ದಯಾಪರತೆಯನ್ನೂ ಮತ್ತು ಪ್ರಭುತ್ವವನ್ನು, ಅನುಪಮವಾದ ಮಹಿಮೆಯನ್ನು ಹಾಗೂ ಸರ್ವಸ್ವವನ್ನೂ ಸತ್ತಾರೂಢಗೊಳಿಸುವ ಮಹತ್ತರ ಭಾವವನ್ನೂ ಹೊಂದಿದ್ದಾಳೆ. ಎರಡನೆಯದು, ಅವಳ ಭವ್ಯಾತಿಭವ್ಯವಾದ ಸಾಮರ್ಥ್ಯವನ್ನು ಮತ್ತು ಅಜೇಯವಾದ ಉತ್ಸಾಹವು ಸಾರೂಪ್ಯಗೊಂಡಿದ್ದು, ಅವಳ ಅಪ್ರತಿಮ ಹೋರಾಟದ ಮನೋಭಾವವನ್ನು ಅವಳ ಅಗಾಧದ ಇಚ್ಛೆಯನ್ನು, ಅವಳ ತೀವ್ರ(ತೀಕ್ಷ್ಣ)ವಾದ ಶೀಘ್ರತೆಯನ್ನು ಹಾಗೂ ಇಡೀ ಜಗತ್ತನ್ನೇ ಕಂಪನಗೊಳಿಸುವ ಬಲವಾಗಿದ್ದಾಳೆ. ಮೂರನೆಯದು, ವಿವಿಧತೆಯ ಹಾಗೂ ಮಧುರಮಯ ಮತ್ತು ಆಶ್ಚರ್ಯಕರವಾಗಿ ಅವಳ ಆ ನಿಗೂಢ ಸೌಂದರ್ಯದ ರಹಸ್ಯದಿಂದ ಮತ್ತು ಮಧುರನಾದಮಯತೆಯಿಂದ ಅವಳ ಸಂಕೀರ್ಣತೆಯ ಮತ್ತು ಸೂಕ್ಷ್ಮಾತಿಸೂಕ್ಷ್ಮ ವೈಭವದ ಸಮೃದ್ಧಿಯನ್ನು, ಅವಳ ಪ್ರಬಲವಾದ ಆಕರ್ಷಣೆ ಮತ್ತು ಮೋಡಿಗೊಳಿಸುವ ಚಿತ್ತಾಕರ್ಷದ ಕೃಪೆಯಾಗಿದ್ದಾಳೆ. ನಾಲ್ಕನೇಯದಾಗಿ, ಅವಳಲ್ಲಿಯೇ ಅಂತರ್ನಿಹಿತಗೊಂಡಿರುವ ಅಂತರಂಗದ ಘನಿಷ್ಠ ಜ್ಞಾನವಾಗಿದ್ದು, ಮತ್ತು ಎಲ್ಲಿಯೂ ಅಡೆತಡೆಯಿರದ, ಅತ್ಯಂತ

ಸುರಕ್ಷತೆಯ ಕಾರ್ಯ ಹಾಗೂ ಸಂಪೂರ್ಣವಾಗಿರುವ, ಸರ್ವ ವಸ್ತು–ವಿಷಯಗಳ ನಿಖರವಾದ ಪರಿಪೂರ್ಣತೆಯಾಗಿದ್ದಾಳೆ. ಬುದ್ಧಿಮತ್ತೆ, ಸಾಮರ್ಥ್ಯ, ಸೌಷಮ್ಯತೆ, ಪರಿಪೂರ್ಣತೆಗಳು ಅವುಗಳ ಹಲವು ಗುಣಧರ್ಮಗಳಾಗಿದ್ದು ಜೊತೆಗೆ ಈ ಎಲ್ಲ ಶಕ್ತಿಗಳೂ ಅವುಗಳೊಡನೆ ಈ ಜಗತ್ತಿಗೆ ಆಗಮಿಸಿವೆ. ಜೊತೆಗೆ ಮಾನವನಲ್ಲಿ ವಿಭೂತಿ ಪುರುಷನ ಸ್ವರೂಪದಲ್ಲಿ ಆಚ್ಛಾದಗೊಂಡು ಪ್ರಕಟಗೊಳ್ಳುತ್ತಾಳೆ.

ಆ ದೈವತ್ವದ ಹಂತದಲ್ಲಿಯೇ (ಸ್ತರದಲ್ಲಿಯೇ) ಅಧಿರೋಹಗೊಂಡಿರುವ ಸ್ತರದಲ್ಲಿಯೇ ಇದ್ದು, ಯಾವುದು ಮೃಣ್ಮಯದ ಸ್ವರೂಪವನ್ನು ನೇರವಾಗಿ ತೆರೆದುಕೊಳ್ಳುತ್ತದೆಯೋ ಮತ್ತು ಶ್ರೀಮಾತೆಯ ಜೀವನ ಪ್ರೀತಿಯ ಲವಲವಿಕೆಯ/ ಸ್ವಭಾವವು ತೆರೆದುಕೊಳ್ಳುತ್ತದೆಯೋ, ಅದೂ ನೇರವಾಗಿಯೇ ತೆರೆದುಕೊಳ್ಳುತ್ತದೆಯೋ ಹಾಗೂ ಅದನ್ನು ಬಳಸಿಕೊಳ್ಳುತ್ತದೆಯೋ, ಇವೇ ಆ ನಾಲ್ಕು ಅಂಶಗಳಾಗಿವೆ. ಈ ನಾಲ್ಕು ಅಂಶಗಳಿಗೆ ನಾವು ನಾಲ್ಕು ಪ್ರಾಮುಖ್ಯವಾದ ಹೆಸರುಗಳನ್ನು ರೂಪಿಸಿದ್ದೇವೆ; (1) ಮಹಾಶಕ್ತಿ (2) ಮಹಾಕಾಳೀ (3) ಮಹಾಲಕ್ಷ್ಮೀ (4) ಮಹಾಸರಸ್ವತೀ ಅದಿತಿ; ದಿವ್ಯ ಚೈತನ್ಯ ಪರಿಶುದ್ಧತೆ, ನಿಷ್ಕಲಂಕ, ತೇಜಸ್ಸು ತುಂಬಿದ ಶಕ್ತಿಯುತವಾದದ್ದು.

**ಮಹೇಶ್ವರಿ**

ಮಹಾನ್ ಜಗದ್ಧಾತ್ರಿ ಮಹೇಶ್ವರಿಯು, ಚಿಂತನಶೀಲ ಮನೋಭೂಮಿಕೆಗಿಂತ ಮತ್ತು ಇಚ್ಛೆಗಿಂತ ಊರ್ಧ್ವದ ಆ ವ್ಯಾಪ್ತದಲ್ಲಿ ಪೀಠಸ್ಥಳಾಗಿದ್ದಾಳೆ. ಜೊತೆಗೆ ಇವುಗಳನ್ನು ಅವಳು ಮಹತ್ತರಗೊಳಿಸುತ್ತಾಳೆ, ಬೃಹದ್‌ಗೊಳಿಸುತ್ತಾಳೆ. ಅಥವಾ ಅವುಗಳಾಚೆ ವೈಭವದ ಜ್ಯೋತಿಯೊಡನೆ ಧಾರೆಗೊಳ್ಳುತ್ತಾಳೆ. ಅದಕ್ಕಾಗಿ ಅವಳು ಸಾಮರ್ಥ್ಯಶಾಲಿ ಆಗಿದ್ದು, ಮತ್ತು ಜಾಣ್ಮೆಯಿಂದಲೂ ನಮ್ಮನ್ನು ಈ ಅಧಿಮಾನಸದ ಅನಂತತೆಯಲ್ಲಿ ವ್ಯಾಪ್ತಗೊಳ್ಳುವಂತೆ ಮಾಡುತ್ತಾಳೆ. ಬೃಹದ್–ಶೋಭೆಯ ಆ ಪರಮ ಜ್ಯೋತಿ ಪ್ರಕಾಶದ ಕಡೆಗೆ ಅದ್ಭುತಾದ್ಭುತದ ಜ್ಞಾನ ಹೊಂದಿರುವ ಭಂಡಾರದ ಆಗರಕ್ಕೆ ಎಡೆಗೆ, ಶ್ರೀಮಾತೆಯ ಶಾಶ್ವತದ ಬಲಗಳು ಚಲಿಸುತ್ತಿರುವ ಎಡೆಗೆ ಕರೆದೊಯ್ಯುತ್ತಾಳೆ. ಶಿವ ಸ್ವರೂಪಿ (ಮಂಗಳ ರೂಪಿ) ಪ್ರಶಾಂತತೆಯು ಅವಳಾಗಿದ್ದಾಳೆ. ಆಶ್ಚರ್ಯಕಾರಕಳೂ ಆಗಿದ್ದಾಳೆ. ಮಹತ್ತಾಗಿ, ಮತ್ತು ಅಷ್ಟೇ ಪ್ರಶಾಂತವಾಗಿ ಎಂದೆಂದಿಗೂ ಇರುತ್ತಾಳೆ. ಇವಳಿಲ್ಲದೇ ಏನೊಂದೂ ಚಲನವನ್ನು ಹೊಂದಲು ಸಾಧ್ಯವೇ ಇಲ್ಲ. ಏಕೆಂದರೆ ಜ್ಞಾನವು (ಬುದ್ಧಿಮತ್ತೆಯು) ಇವಳಲ್ಲಿಯೇ ಇರುತ್ತದೆ. ಇವಳನ್ನು ತಪ್ಪಿಸಿ ಏನನ್ನೂ

ಮಾಡಲು ಸಾಧ್ಯವಾಗುವದಿಲ್ಲ. ಇವಳು ಸರ್ವ ವಿಷಯವನ್ನೂ, ಸರ್ವ ಜೀವಿಗಳನ್ನೂ ಹಾಗೂ ಅವುಗಳ ಸ್ವಭಾವವನ್ನು ಮತ್ತು ಯಾವುದು ಇವುಗಳನ್ನು ಸದಾ ಚಲನಶೀಲತೆಯಲ್ಲಿ ಇಡುತ್ತದೆಯೋ ಆ ವಿಶ್ವನಿಯಮ(ನಿಯತಿ)ಯನ್ನು ಸಮಾವಿಷ್ಟಗೊಳಿಸಿಕೊಂಡಿದ್ದಾಳೆ, ಇವುಗಳ ಜೊತೆಗೇ ಇವುಗಳಿಗೆ ನಿಗದಿಗೊಂಡಿರುವ ಅವಧಿ (ದಿನಗಳ) ಹಾಗೂ ಅವುಗಳ ಮೊದಲು ಯಾವ ಸ್ವರೂಪದಲ್ಲಿ ಅಲ್ಲಿ ಇದ್ದವೋ, ಆ ಸ್ವರೂಪವೇ ಈಗಲೂ ಕಡ್ಡಾಯವಾಗಿ ಇರುವಂತೆ ಪರಿಗ್ರಹಿಸುತ್ತಾಳೆ. ಪರಿಪೂರ್ಣ ಸಾಮರ್ಥ್ಯವೊಂದು ಅವಳಲ್ಲಿ ಇದ್ದು, ಇದು ಎಲ್ಲವನ್ನೂ ಸಂಪರ್ಕಿಸುತ್ತದೆ. ಎಲ್ಲವನ್ನೂ ಪ್ರಬುದ್ಧಗೊಳಿಸುತ್ತದೆ. ಅವಳ ಆ ಅದೃಶ್ಯ ರೂಪದಲ್ಲಿಯೇ ಇರುವ ಅಪಾರ ಪ್ರಜ್ಞೆಯಿಂದ ಯಾವುದೂ ನುಣುಚಿಕೊಳ್ಳದಂತೆ (ತಪ್ಪಿಸಿಕೊಳ್ಳದಂತೆ) ಹಾಗೂ ಮಹಾಮಹಿಮೆಯ ಪ್ರಶಾಂತತೆಯಿಂದ ನುಣುಚಿಕೊಳ್ಳದಂತೆ ಕಾಪಾಡುತ್ತದೆ. ಸಮಾನತೆ, ಸಹನೆ ಹಾಗೂ ವಿಚಲನೆಗೊಳ್ಳದಂತೆ ಅವಳ ಇಚ್ಛೆಯಲ್ಲಿಯೇ ಇವೆಲ್ಲವು ಅಂತರ್ಗತಗೊಂಡಿವೆ. ಅವಳು ಮಾನವರೊಡನೆ, ವಸ್ತುಗಳೊಡನೆ ಆಯಾ ಸ್ವಭಾವಕ್ಕೆ ಅನುಗುಣವಾಗಿಯೇ ವ್ಯವಹರಿಸುತ್ತಾಳೆ. ಅದರಿಂದ ಆಯಾ ಆಯಾ ಸ್ವಭಾವಗಳೂ ಸಹಿತ ಆಯಾ ಆಯಾ ಶಕ್ತಿಯನ್ನು ಅವಲಂಬಿಸಿಕೊಂಡೇ ರೂಪಿತಗೊಳ್ಳುತ್ತವೆ. ಅದರಲ್ಲೂ ಅಲ್ಲಿರುವ ಆ ಸತ್ಯದ ಪ್ರಕಾರವಾಗಿಯೇ ಅದು ಪ್ರಕಟಗೊಳ್ಳುತ್ತದೆ. ಹಾಗೆ ನೋಡಿದರೆ ಅಂಶಿಕವಾಗಿ ಅವಳು ಏನೂ ಅಲ್ಲ. ಆದರೆ ಅವಳು ಆ ಪರಾತ್ಪರದ ನಿರ್ಣಯಗಳನ್ನು ಅನುಸರಿಸುತ್ತಾಳೆ. ಆ ಮೂಲಕ ಕೆಲವು ಅಂಶಗಳನ್ನು ಊರ್ಧ್ವಮುಖಿಗೊಳಿಸುತ್ತಾ ಮತ್ತೆ ಕೆಲವನ್ನು ಅವರೋಹಣಕ್ಕೆ ಒಳಪಡಿಸುತ್ತಾಳೆ. ಇಂತಹ ಅವರೋಹಣಗೊಂಡ ವಿಷಯಗಳು ತನ್ನಿಂದ ದೂರವೇ ಇರುವಂತೆ ಅ ತಮದ ಕಡೆಗೆ ತಳ್ಳುತ್ತಾಳೆ. ಯಾವುದು ಜಾಣ್ಮೆಯಿಂದ (ಶುಭದಿಂದ) ಕೂಡಿರುತ್ತದೆಯೋ ಅದಕ್ಕೆ ಮತ್ತೂ ಉಜ್ವಲವಾದ ಕಾಂತಿಮಯ ಪ್ರಜ್ಞೆಯನ್ನು ಒದಗಿಸುತ್ತಾಳೆ. ಯಾರು ಕನಸನ್ನು (ವಿಜನ್) ಹೊಂದಿದ್ದಾರೆಯೋ ಅವರ ಆ ದೃಷ್ಟಿಕೋನವನ್ನು ಅವಳ ಚಿಂತನಕ್ಕೆ ಒಳಪಡಿಸಿಕೊಂಡು ಹರಸುತ್ತಾಳೆ. ಪ್ರತಿಕೂಲ ಸಂದರ್ಭಗಳು ಇದ್ದಲ್ಲಿ ಅವಳು ಅವರದೇ ಆದ ವಿರೋಧ ಭಾವವನ್ನೇ ಹೇರುತ್ತಾಳೆ. ಅಜ್ಞಾನಿಯಾಗಿದ್ದಲ್ಲಿ, ಮತ್ತು ಮೂರ್ಖತನದಿಂದ ಕೂಡಿದ್ದಲ್ಲಿ, ಅವಳು ಅವರ ಆಯಾ ಅಂಧತ್ವ ಗ್ರಹಿಕೆಯ ಪ್ರಕಾರವೇ ಅವರನ್ನು ಕರೆದೊಯ್ಯುತ್ತಾಳೆ. ಪ್ರತಿಯೊಬ್ಬ ಮಾನವ ಜೀವಿಯಲ್ಲಿಯೂ ಅವಳು ಉತ್ತರದಾಯಿತ್ವವನ್ನು

ಹೊಂದಿದ್ದು, ಅವರ ಸ್ವಭಾವದ ವಿಭಿನ್ನ ನೆಲೆಯ ಅಂಶಗಳನ್ನು ಅವರವರ ಬಯಕೆಯಂತೆ ಅವರವರ ಬೇಡಿಕೆಯಂತೆ ಹಾಗೂ ಅವರವರ ತುಡಿತದಂತೆಯೇ ಒಪ್ಪಿ, ಅವರು ಯಾವ ಸ್ತರದಲ್ಲಿ ಕರೆಯುತ್ತಿದ್ದಾರೆಯೋ, ಅದೇ ರೀತಿಯಲ್ಲಿ ಅವರಿಗೆ ಲಭ್ಯವಾಗುತ್ತಾಳೆ. ಅವರ ಮೇಲೆ ಅವಶ್ಯವಿದ್ದ ಒತ್ತಡವನ್ನೂ ಹಾಕುತ್ತಾಳೆ, ಅಥವಾ ಅವರನ್ನು ಅವರದೇ ಆದ ವ್ಯಕ್ತಿತ್ವದಲ್ಲಿಯೇ ವಿಕಾಸಗೊಳಿಸಿಕೊಂಡಿರುವ ಸ್ವಾತಂತ್ರ್ಯದಲ್ಲಿಯೇ, ಅಜ್ಞಾನದಲ್ಲಿದ್ದ ಪಥದಿಂದ ಮುಕ್ತರಾಗಲು ಅವರದೇ ಪಥದಲ್ಲಿ ಪ್ರವೃದ್ಧರಾಗುವಂತೆ ಮಾಡುತ್ತಾಳೇ, ಇಲ್ಲವೇ ಅಲ್ಲಿಯೇ ಕರಗಿ ಹೋಗುವಂತೆ ಮಾಡುತ್ತಾಳೆ. ಅದಕ್ಕಾಗಿಯೇ ಅವಳು ಸದಾ ಊರ್ಧ್ವದಲ್ಲಿಯೇ ಇರುತ್ತಾಳೆ. ಯಾವುದೂ ಅವಳನ್ನು ಬಂಧನಕ್ಕೆ ಒಳಪಡಿಸಿಲ್ಲ; ಯಾವುದಕ್ಕೂ ಅವಳು ಈ ವಿಶ್ವದ ಯಾವುದಕ್ಕೂ ಅವಳು ಮಮಕಾರವನ್ನು ಹೊಂದಿಲ್ಲ (ನಿರ್ಗುಣಳಾಗಿದ್ದಾಳೆ). ಆದಾಗ್ಯೂ ಸಹಿತ, ಅವಳು ವಿಶ್ವಮಾತೆಯ ಹೃದಯಕ್ಕಿಂತಲೂ ಪ್ರಮುಖವಾದ ಹಂತದಲ್ಲಿ ಇದ್ದಾಳೆ. ಅವಳಿಗೆ ಈ ಎಲ್ಲ ಆತ್ಮೀಯತೆಯು ಯಾವಾಗಲೂ ಅನಂತವಾಗಿವೆ. ಎಂದಿಗೂ ಕರಗಿ ಹೋಗುವದಿಲ್ಲ. ಈ ಎಲ್ಲವೂ ಅವಳಿಗೆ ಅವಳ ಸಂತತಿಯಂತೆಯೇ ಇದ್ದು, ಅವೆಲ್ಲವೂ ಆ "ಏಕತ್ವದ" ಅಂಶಗಳೇ ಆಗಿವೆ. ಅಸುರರಾಗಲಿ, ಪಿಶಾಚಿಗಳಾಗಲಿ ಅಥವಾ ರಾಕ್ಷಸರಾಗಲಿ ಅವರೂ ಸಹಿತ ಎಷ್ಟೇ ವಿರೋಧವನ್ನು ಹೊಂದಿದ್ದರೂ ಸಹಿತ ಅವಳ ಅಂಶವಾಗಿಯೇ ಇರುತ್ತಾರೆ. ಅವರ ಆ ರೀತಿಯ ತಿರಸ್ಕಾರ ಮತ್ತು ದ್ವೇಷಗಳು ಕೇವಲ ಫಲಿತಾಂಶದ ಮುಂದೂಡಿಕೆಯಾಗಿರುತ್ತದೆಯೇ ವಿನಾ ಬೇರೆ ಏನೂ ಇಲ್ಲ. ಅಲ್ಲದೇ ಅವಳು ಕೊಡುವ ಶಿಕ್ಷೆಯೂ ಸಹಿತ ಒಂದು ಕೃಪೆಯಂತೆಯೇ ಇರುತ್ತದೆ, ಆದರೆ ಅವಳ ಕರುಣೆ (ಸಾನುಕಂಪವು) ಎಂದಿಗೂ ಅವಳ ಜಾಣ್ಮೆಯ ದೃಷ್ಟಿಯಿಂದ ದೂರವಿರುವದಿಲ್ಲ. ಅಥವಾ ಅವಳ ಕ್ರಿಯೆಗಳು ನಿಗದಿಗೊಳಿಸಲ್ಪಟ್ಟ ಆದೇಶದಿಂದ ವಿಚಲನೆ ಹೊಂದುವದಿಲ್ಲ. ಸರ್ವವಸ್ತುಗಳ ಪರಮ ಸತ್ಯಕ್ಕೆ ಎಲ್ಲವೂ "ಏಕತ್ವವನ್ನೇ" ಹೊಂದಿವೆ. ಅವಳ ಜ್ಞಾನದ ಶಕ್ತಿಯ ಕೇಂದ್ರದಲ್ಲಿಯೇ ಅದು ಇದ್ದು, ನಮ್ಮ ಆತ್ಮದ ಸಂರಚನೆಗೆ ಹಾಗೂ ನಮ್ಮ ಸ್ವಭಾವವು ಆ ದಿವ್ಯ–ಸತ್ಯದ ಜೊತೆಗೆ ಮೇಳೈಸುವಂತೆ ಮಾಡುತ್ತಾಳೆ. ಈ ದಿವ್ಯ ಸತ್ಯವೇ ಅವಳ ಯೋಜನೆಯೂ ಹೌದು ಹಾಗೂ ಅವಳ ಶ್ರಮವೂ ಹೌದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/18–19**

**ಮಹೇಶ್ವರಿ; ಶ್ರೀಮಾತೆ ಪರಾಶಕ್ತಿ – ಮಹಾಶಕ್ತಿ (ಪರಾದ ಚೇತನ ಮತ್ತು ಶಕ್ತಿ)**

ಶ್ರೀಮಾತೆಯ ನಾಲ್ಕು ಶಕ್ತಿಗಳು ಅವಳ ಅದ್ವಿತೀಯ ವ್ಯಕ್ತಿತ್ವಗಳಾಗಿವೆ, ಅಂಶಗಳೂ ಆಗಿವೆ ಮತ್ತು ಅವಳ ದಿವ್ಯತ್ವದ ಸಾಕಾರಗಳಾಗಿವೆ. ಇವುಗಳ ಮೂಲಕವೇ ಎಲ್ಲ ಜೀವ–ಜಂತುಗಳ ಲೀಲೆಗಳಲ್ಲಿ ತೊಡಗುತ್ತಾಳೆ. ಈ ಜಗತ್ತಿನಲ್ಲಿ ಅವಳ ಸೃಷ್ಟಿಗಳನ್ನು ಸುಸಂಬದ್ಧಗೊಳಿಸುತ್ತಾ ಮತ್ತು ಸಾಮರಸ್ಯಗೊಳಿಸುತ್ತಾ, ಅವಳ ಸಾವಿರದ ಶಕ್ತಿಗಳನ್ನು ಕಾರ್ಯಪ್ರವೃತ್ತಗೊಳ್ಳುವಂತೆ ನಿರ್ದೇಶಿಸುತ್ತಾಳೆ. ಇವೆಲ್ಲವೂ ಶ್ರೀಮಾತೆಗೆ "ಏಕ ಸ್ವರೂಪದಲ್ಲಿಯೇ" ಇದ್ದರೂ, ನಮ್ಮ ಎದುರಿಗೆ ಮಾತ್ರ ಈ ವಿಧವಿಧದ ವಿನ್ಯಾಸಗಳಲ್ಲಿ ಪ್ರಕಟಗೊಳ್ಳುತ್ತಾಳೆ. ಇವುಗಳಲ್ಲಿ ಬಹುತೇಕವಾಗಿ ಅವಳ ಶಕ್ತಿಗಳು ಮತ್ತು ಅವಳ ವ್ಯಕ್ತಿತ್ವಗಳೇ ಆಗಿವೆ. ಮತ್ತೆ ಕೆಲವು ಅವಳ ಉದ್ಗಮ(ಉತ್ಪತ್ತಿ)ಗಳು ಮತ್ತು ವಿಭೂತಿಗಳಾಗಿದ್ದು, ಅವುಗಳ ಮೂಲಕವೇ ಅವಳು ಈ ವಿಶ್ವದ ಕಾರ್ಯವನ್ನು ಮಾಡುತ್ತಾಳೆ. ನಾವೆಲ್ಲರೂ ಈಗ ಆರಾಧಿಸುತ್ತಿರುವದು, ಅಸ್ತಿತ್ವದಲ್ಲಿರುವ ಸರ್ವಸ್ವವನ್ನೂ ನಿಯಂತ್ರಿಸುತ್ತಿರುವ ದಿವ್ಯ–ಚೈತನ್ಯಶಕ್ತಿಯಾಗಿರುವ ಶ್ರೀಮಾತೆಯನ್ನು. ಏಕವಾಗಿದ್ದರೂ ಸಹಿತ ಮತ್ತೆ ಹಲವು ಆಯಾಮಗಳನ್ನು ಹೊಂದಿದ್ದು, ಅತ್ಯಂತ ಕ್ರಿಯಾಶೀಲ ಸಾಮರ್ಥ್ಯ ಹೊಂಡಿರುವ ಮನಸ್ಸೂ ಸಹಿತ ಅವಳ ಚಲನವಲನಗಳನ್ನು ಮತ್ತು ವ್ಯಕ್ತಿತ್ವವನ್ನು ಹೊಂದಿದ್ದರೂ ಸಹಿತ, ಇಲ್ಲಿ ಅದೇ ಮನಸ್ಸು ಅಸಮರ್ಥವಾಗಿರುತ್ತದೆ. ಹೀಗಾಗಿ ಶ್ರೀಮಾತೆಯ ಆ ಪರಮ ಶಕ್ತಿಯೂ ಹಾಗೂ ಚೈತನ್ಯವೂ ಆಗಿದ್ದು, ಮತ್ತೆ ಅವಳೇ ಸೃಷ್ಟಿಸಿದ ಸೃಷ್ಟಿಗಳಿಗಿಂತ ಉನ್ನತೋನ್ನತ ಹಂತದಲ್ಲಿ ಅಂದರೆ ಊರ್ಧ್ವಾತಿ ಊರ್ಧ್ವದಲ್ಲಿಯೇ ಇರುತ್ತಾಳೆ. ಆದರೆ ಅವಳ ಆ ಪಥಗಳಲ್ಲಿ ಕೆಲವನ್ನು ಮಾತ್ರ ನಾವು ಕಾಣಬಹುದಾಗಿದೆ. ಜತೆಗೆ ಅವಳು ಮೂರ್ತಗೊಳ್ಳುವದನ್ನು ಅನುಭೂತಿಗೊಳಿಸಿಕೊಳ್ಳುವದರ ಮೂಲಕ ಅನುಭಾವ ಪಡೆದುಕೊಳ್ಳಬಹುದಾಗಿದೆ. ಮತ್ತೆ ಇವೆಲ್ಲಕ್ಕೂ ಮಿಗಿಲಾಗಿ ಇರುವ ವಿಷಯವೆಂದರೆ, ಅವುಗಳು ಬಹುತೇಕವಾಗಿ ಗ್ರಹಿಕೆಗೆ ದಕ್ಕುವಂತಿವೆ. ಏಕೆಂದರೆ, ಅವು ಬಹುತೇಕವಾಗಿ ಸಾಂಘಿಕವಾಗಿಯೇ ವ್ಯಾಖ್ಯಾನಿಸಲ್ಪಟ್ಟಿವೆ ಹಾಗೂ ನಿಗದಿತ ಮನೋಧರ್ಮಗಳನ್ನು ಹೊಂದಿವೆ. ಇದಲ್ಲದೇ ಆ ದೇವತೆಯ ಲೀಲೆಗಳ ಕ್ರಿಯೆಯಲ್ಲಿನ ರೂಪಗಳೂ ಆಗಿವೆ.

ಈ ಮೂಲಕವೇ ಅವಳು ತನ್ನದೇ ಸೃಷ್ಟಿಯಾಗಿರುವ ಜೀವಿಗಳಾಗಿ ರೂಪಗೊಳ್ಳಲು ಸಹಮತಿ ಹೊಂದಿದ್ದಾಳೆ. ಶ್ರೀಮಾತೆಯ ಅಭಿವ್ಯಕ್ತಿಯ ಮೂರು

ಪಥಗಳು ಶ್ರೀಮಾತೆಯು ಅಭಿವ್ಯಕ್ತಗೊಳ್ಳಲು ಮೂರು ಪಥಗಳಿವೆ. ಅವುಗಳ ಬಗೆಗೆ ನೀವು ಅರಿವು ಹೊಂದಬೇಕೆಂದರೆ, ಆ "ಏಕತ್ವದ" ಹಂತದೊಡನೆ ಸ್ಪರ್ಶಗೊಳ್ಳುವ ಮೂಲಕ ನೀವು ಅಲ್ಲಿ ಪ್ರವೇಶ ಪಡೆದುಕೊಳ್ಳಬೇಕು. ಈ ಸ್ಪರ್ಶವು ಸಂಧಿನೀ ಶಕ್ತಿ(ಚಿತ್–ಶಕ್ತಿ)ಯೊಡನೆ ಬಂಧಗೊಂಡಿರಬೇಕು. ಏಕೆಂದರೆ ಈ ಸಂಧಿನೀ–ಶಕ್ತಿಯು ನಮ್ಮನ್ನು ವಿಶ್ವಾತ್ಮಗೊಳಿಸುವತ್ತ ಊರ್ಧ್ವದೆಡೆಗೆ ಸಾಗಲು ಅನುಮತಿಸುತ್ತದೆ. ಆದ್ಯಶಕ್ತಿಯಾಗಿರುವ ಈ ಆದಿ ಪರಾಶಕ್ತಿಯು, ಸರ್ವ ಲೋಕಗಳಿಗಿಂತಲೂ ಊರ್ಧ್ವದಲ್ಲಿಯೇ ನೆಲೆಸಿರುತ್ತಾಳೆ. ಅಲ್ಲಿಂದಲೇ, ಇನ್ನೂ ಸದಾ ಪ್ರಕಟಗೊಳ್ಳದೇ ಇರುವ ಆ ಪರಮ ಗೂಢತೆಯ ಇಲ್ಲಿನ ಸೃಷ್ಟಿಯ ಜೊತೆಗೆ ಸಂಪರ್ಕದ ಸಲುವಾಗಿ ಅವಳು ಆ ಊರ್ಧ್ವದಲ್ಲಿ ನೆಲೆಸಿದ್ದಾಳೆ. ವೈಶ್ವಿಕವಾಗಿ, ಈ ಬ್ರಹ್ಮಾಂಡ ಬ್ರಹ್ಮದ ಮಹಾಶಕ್ತಿಯು ಈ ಎಲ್ಲ ಜೀವ–ಚೈತನ್ಯಗಳಲ್ಲನ್ನೂ ಸೃಷ್ಟಿಸುತ್ತಾಳೆ. ಅವುಗಳನ್ನೇ ಒಳಗೊಂಡಿದ್ದಾಳೆ ಕೂಡ. ಅವುಗಳಲ್ಲಿಯೇ ಪ್ರವೇಶವನ್ನೂ ಪಡೆದು ಅವುಗಳನ್ನು ರಕ್ಷಿಸುತ್ತಾಳೆ. ಸಲಹುತ್ತಾಳೆ. ಹೀಗೆ ಕೋಟ್ಯಾಂತರ ಪ್ರಕ್ರಿಯೆಗಳನ್ನು ಹಾಗೂ ಬಲಗಳನ್ನೂ ರೂಪಿಸುತ್ತಾಳೆ. ವೈಯಕ್ತಿಕವಾಗಿ ಅವಳು, ಅವಳದೇ ಅಸ್ತಿತ್ವದ ಈ ಎರಡು ಅಗಾಧ ವ್ಯಾಪ್ತಿಯ ಪಥಗಳ ಮೂಲಕ ಮೂರ್ತಗೊಳ್ಳುತ್ತಾಳೆ. ಆ ಮೂಲಕವೇ ಸರ್ವಸ್ವವೂ ಜೀವಿಸುವಂತೆ, ಮತ್ತು ಸಮೀಪದಲ್ಲಿಯೇ ಇರುವಂತೆ, ಮಾನವ ವ್ಯಕ್ತಿತ್ವ ಹಾಗೂ ದೈವೀ ಪ್ರಕೃತಿಯ ಮಧ್ಯದಲ್ಲಿ ಸದಾ ಧ್ಯಾನಿಸುವಂತೆ ಮಾಡುತ್ತಾಳೆ. ಏಕೈಕವಾಗಿರುವ ಆದ್ಯಶಕ್ತಿ (ಆದಿಶಕ್ತಿ) ಏಕೈಕವಾಗಿರುವ ಆದಿಮೂಲದ ಈ ಆದಿಶಕ್ತಿಯು, ಶ್ರೀಮಾತೆಯೂ ಆಗಿದ್ದಾಳೆ. ಈ ಎಲ್ಲ ಲೋಕಗಳಿಗಿಂತ ಊರ್ಧ್ವದಲ್ಲಿಯೇ ನೆಲಸಿದ್ದು ಶಾಶ್ವತದ ಚೈತನ್ಯವನ್ನು ತನ್ನಲ್ಲಿಯೇ ಧರಿಸಿಕೊಂಡು ಅವಳು 'ಪರಾಶಕ್ತಿ'ಯಾಗಿದ್ದಾಳೆ. ಏಕಾಂಗಿಯಾಗಿಯೇ, ಆ ನಿರ್ವಿಶೇಷದ ಬಲಕ್ಕೆ ಆಶ್ರಯವಿತ್ತಿದ್ದಾಳೆ. ಜೊತೆಗೆ ಅವರ್ಣನೀಯ–ಅನಿರ್ವಚನೀಯವಾದ ಸಾನಿಧ್ಯವನ್ನೂ ಹೊಂದಿದ್ದಾಳೆ. ತನ್ನಲ್ಲಿಯೇ ಅಳವಟ್ಟುಕೊಂಡಿರುವ ಅಥವಾ ಋತವನ್ನು ಪ್ರಕಟಗೊಳ್ಳಲು ಆಹ್ವಾನವನ್ನು ಕೊಡುತ್ತಿದ್ದಾಳೆ. ಅವಳ ಆ ಗುಹ್ಯ(ಗೂಢ)ದಿಂದಲೇ ಅವುಗಳನ್ನು ಅನಾವರಣಗೊಳಿಸುತ್ತಾಳೆ. ಅವುಗಳೆಲ್ಲವೂ ಅವಳದೇ ಅನಂತಾನಂತ ಚೇತನದ ಪ್ರಭೆಯಲ್ಲಿಯೇ ಅಂತರ್ಗತವಾಗಿದ್ದ ಹಂತದಿಂದಾಗಿ, ಅವಳು ಅವುಗಳಿಗೆ ತನ್ನದೇ ಸರ್ವಶಕ್ತ ಬಲದಲ್ಲಿ ರೂಪಧಾರಣೆ ಕೊಡುತ್ತಾಳೆ. ಅವಳದೇ ಚಿಂತನದ ಜೀವನವನ್ನು ಹಾಗೂ ದೇಹ(ಸಂರಚನೆಯನ್ನೂ) ನೀಡುತ್ತಾಳೆ. ಈ 'ಪರಮ'ವೇ ಅವಳಲ್ಲಿ ಪ್ರಕಟಗೊಂಡು, ಚಿರಂತನವಾಗಿ ಅಭಿವ್ಯಕ್ತಗೊಂಡು ಶಾಶ್ವತವಾದ

ಸಚ್ಚಿದಾನಂದವಾಗುತ್ತದೆ. ಇದು ಅವಳಲ್ಲಿಯೇ ಪ್ರಕಟಗೊಳ್ಳುವದರ ಮೂಲಕ ಈ ಲೋಕಗಳಲ್ಲಿ ದ್ವೈತ ಮತ್ತು ಅದ್ವೈತದ ಚೈತನ್ಯವಾಗಿ "ಈಶ್ವರ ಶಕ್ತಿ"ಯಾಗಿ, ಪುರುಷ–ಪ್ರಕೃತಿಯ ಈ ದ್ವೈತ ತತ್ತ್ವದಲ್ಲಿ ಪ್ರಕಟಗೊಳ್ಳುತ್ತದೆ. ಅವಳ ಮೂಲಕವೇ ಲೋಕಗಳ ರೂಪದಲ್ಲಿ ಮೂರ್ತಗೊಳ್ಳುತ್ತದೆ. ಅದೂ ಅಲ್ಲದೇ ಅವಕಾಶ(ಆಕಾಶ)ದ ಹಾಗೆ ಮತ್ತು ದೇವತೆಗಳ ಹಾಗೂ ಅವರ ಸಾಮರ್ಥ್ಯ–ಶಕ್ತಿಗಳಲ್ಲಿ ರೂಪಧಾರಣೆಗೊಳ್ಳುತ್ತದೆ. ಏಕೆಂದರೆ ಇವೆಲ್ಲವೂ ಜ್ಞಾತ ಲೋಕಗಳಲ್ಲಿ ಅದು ಅನ್ಯರಿಗೆ ಅಜ್ಞಾತವಾಗಿಯೇ ಇರುತ್ತದೆ. ಅವಳು ಈ ಪರಮ–ಲೀಲೆಗಳ ಜೊತೆಗೆ ರೂಪಿತಗೊಳ್ಳುತ್ತಲೇ ಇದ್ದರೂ ಇವೆಲ್ಲವೂ ಅವಳ ಆ ಶಾಶ್ವತದ ಮಾಯೆಗಳಾಗಿವೆ. ಅನಂತತೆಯ ಪವಾಡಗಳಾಗಿವೆ. ಸರ್ವಸ್ವವು ಇವಳೇ ಆಗಿದ್ದಾಳೆ. ಅವೆಲ್ಲವೂ ಈ ದಿವ್ಯ–ಸಂಧಿನೀ ಶಕ್ತಿಯ (ಚೈತನ್ಯ ಶಕ್ತಿಯ) ಎಲ್ಲ ಅಂಶಾಂಶಗಳಾಗಿವೆ. ಅವಳ ಆ ಪರಮ ಆಣತಿ, ಕೃಪೆ ಇಲ್ಲದೇ ಅಥವಾ ಎಲ್ಲಿಯೂ ಸಹಿತ ಏನೂ ಇರುವದಿಲ್ಲ! ಆದರೆ, ಯಾವುದನ್ನು ಅವಳು ನಿರ್ಧರಿಸುತ್ತಾಳೆಯೋ ಅದು ಮಾತ್ರವೇ ಅಸ್ತಿತ್ವ ಪಡೆದುಕೊಳ್ಳುತ್ತದೆ. ಅವಳ ಆ ಆನಂದದ ಸೃಷ್ಟಿಯಲ್ಲಿ ಎರಕಗೊಂಡಂತಹ ರೂಪಗಳ ಮತ್ತು ಆ ಪರಮದ ಸಮ್ಮತಿ ಇಲ್ಲದೇನೇ ಇಲ್ಲಿ ಏನೊಂದೂ ಚಲನೆ ಹೊಂದಲು ಸಾಧ್ಯವೇ ಇಲ್ಲ. ಮಹಾಶಕ್ತಿ–ಲೋಕಮಾತೆ ಈ ಮಹಾಶಕ್ತಿಯು ಲೋಕಮಾತೆಯಾಗಿದ್ದಾಳೆ. ಅವಳು ಆ ಪರಾತ್ಪರದಿಂದ ಅವಳದೇ ವಿಶ್ವೋತ್ತರ ಚೈತನ್ಯದಿಂದ, ಅದರ ವಹನದಿಂದಲೇ ಅವಳು ಸರ್ವಸ್ವದಲ್ಲೂ ಕ್ರಿಯಾಪ್ರವೃತ್ತಳಾಗಿದ್ದಾಳೆ. ಮತ್ತು ಮೂಲಕವೇ ಅವಳೇ ಸೃಷ್ಟಿಸಿದ ಲೋಕಗಳಲ್ಲಿ ಅವಳು ಪ್ರವೇಶಿಸುತ್ತಾಳೆ. ಅವಳ ಈ ಉಪಸ್ಥಿತಿಯು, ದೈವೀ ಶಕ್ತಿಯೊಡನೆ ಹಾಗೂ ಅಸ್ತಿತ್ವದಲ್ಲಿರುವ ನಿರಂತರವಾಗಿರುವ ಸರ್ವ–ಬಲಗಳಿಗೆ ಸಮರ್ಥನೆಯನ್ನು ಒದಗಿಸುತ್ತಾಳೆ. ಅವುಗಳು ಇನ್ನೂ ಅಸ್ತಿತ್ವ ಪಡೆದುಕೊಳ್ಳದಿದ್ದರೂ ಸಹಿತ ಅವು ಸದಾ ತೋಷವನ್ನೇ ಒದಗಿಸುವಂತೆ ಸಮರ್ಥನೆ ನೀಡುತ್ತಾಳೆ. ಇದನ್ನೇ ನಾವು 'ಪ್ರಕೃತಿ' ಅಥವಾ 'ಸ್ವರೂಪ'ವೆಂದು ಕರೆಯುತ್ತೇವೆ. ಇದು ಹೆಚ್ಚಾಗಿ ಅವಳ ಬಾಹ್ಯ ಸ್ವರೂಪದಲ್ಲಿ ಕಾರ್ಯಪ್ರವೃತ್ತವಾಗಿರುವ ವಿಷಯವಾಗಿರುತ್ತದೆ. ಅವಳು ತನ್ನ ಬಲಗಳ (ಶಕ್ತಿಗಳ) ಸೌಷಮ್ಯವನ್ನು ವ್ಯವಸ್ಥೀಕರಣಗೊಳಿಸುತ್ತ ಹಾಗೂ ಶ್ರೇಣಿಬದ್ಧತೆಯನ್ನೂ ರೂಪಿಸಿಕೊಂಡಿರುತ್ತಾಳೆ. ಈ ಮೂಲಕವೇ ಸರ್ವ ಪ್ರಕ್ರಿಯೆಗಳನ್ನೂ ನಡೆಸುತ್ತಾಳೆ. ಪ್ರಕೃತಿಯ ಸಂಚಾಳನೆಹೆ ಪ್ರೇರಣೆ ಕೊಡುತ್ತಾಳೆ. ಅವುಗಳ ಆಂತರ್ಯದಲ್ಲಿಯೇ ರಹಸ್ಯವಾಗಿ ಅವಳು ಚಲಿಸುತ್ತಾಳೆ. ಇಲ್ಲವೇ ಯಾವುದು ದೃಷ್ಟಗೊಳ್ಳಬೇಕಾಗಿದೆಯೋ,

ಅಲ್ಲೆಲ್ಲವೂ ರೂಪಧಾರಣೆಯಾಗಿ ಅಭಿವ್ಯಕ್ತಗೊಳ್ಳುತ್ತಾಳೆ. ಅನುಭವಕ್ಕೆ ದಕ್ಕುವಂತೆ ಅಥವಾ ಜೀವನದ ಗತಿಯು ಸಂಚಲನವನ್ನು ಹೊಂದುವಂತೆ ಮಾಡುತ್ತಾಳೆ. ಲೋಕಗಳ ಪ್ರತಿಯೊಂದು ಘಟನೆಯೂ, ಈ ಜಗತ್ತಿನ ಹಾಗೂ ಈ ಲೋಕಗಳ ವ್ಯವಸ್ಥೆಗೆ ಅವಶ್ಯವಾಗಿರುವ ಮಹಾಶಕ್ತಿಯ ಲೀಲೆಗಳಾಗಿರುತ್ತವೆ. ಇಲ್ಲಿ ಎಲ್ಲ ಕಡೆಗೂ ಈ ಆದ್ಯಶಕ್ತಿ(ಆದಿಶಕ್ತಿ)ಯ ಬ್ರಹ್ಮಾಂಡದ ಸ್ವರೂಪ ಮತ್ತು ಆತ್ಮ ಸ್ವರೂಪವೇ ಆಗಿರುತ್ತದೆ. ಪ್ರತಿ ಹಂತದಲ್ಲಿಯೂ ಅವಳದೇ ದೃಷ್ಟಾರ ದೃಷ್ಟಿಯಲ್ಲಿ, ಅವಳ ಹೃದಯದಲ್ಲಿ ಸೌಂದರ್ಯ ಮತ್ತು ಶಕ್ತಿಯಾಗಿದ್ದು ಅವಳದೇ ಆನಂದದಲ್ಲಿ ಸೃಷ್ಟಿಗೊಂಡಿರುತ್ತದೆ. ಆದರೂ ಅವಳ ಈ ಸೃಷ್ಟಿಯಲ್ಲಿ ಹಲವು ಸ್ತರಗಳೂ ಇರುತ್ತವೆ. ಈ ದೈವೀ ಶಕ್ತಿಯ ಹಲವು ಹಂತಗಳೂ ಇವೆ. ಈ ಅಭಿವ್ಯಕ್ತಿಯ ತುರೀಯಾವಸ್ಥೆಯಲ್ಲಿ (ಶೃಂಗದಲ್ಲಿ ಯಾವುದು ಅನಂತತೆಯ ಅಸ್ತಿತ್ವ ಹೊಂದಿರುವ ಲೋಕಗಳಾಗಿವೆಯೋ, ಚೈತನ್ಯವಾಗಿದೆಯೋ ಅದು ಬಲವಾಗಿಯೇ ಮತ್ತು ಕೃಪೆಯ ಮೂಲಕವೇ ಎಲ್ಲಿ ಶ್ರೀಮಾತೆಯು ಶಾಶ್ವತದ ಶಕ್ತಿಯಿಂದ ತಾನೇ ತಾನಾಗಿ ಪ್ರಕಟಗೊಳ್ಳುತ್ತಿದ್ದಾಳೆಯೋ, ಅಲ್ಲೆಲ್ಲವೂ ನಾವೂ ಸಹಿತ ಅದರ ಒಂದು ಅಂಶಾಂಶವಾಗಿಯೇ ಇದ್ದೇವೆ. ಎಲ್ಲ ಜೀವಿಗಳೂ (ಜೀವ–ಸಂಕುಲವೂ) ಅನಿರ್ವಚನೀಯವಾದ ಪೂರ್ಣತೆಯಲ್ಲಿ ಹಾಗೂ ಅಪರಿವರ್ತನೀಯ ಏಕತ್ವದಲ್ಲಿಯೇ ಜೀವಿಸುತ್ತಿದ್ದು, ಜೊತೆಗೆ ಸಂಚಲನವನ್ನು ಹೊಂದಿವೆ. ಏಕೆಂದರೆ, ಅವಳು (ಶ್ರೀಮಾತೆಯು) ಎಲ್ಲ ಜೀವ ಸಂಕುಲವನ್ನು ಸುರಕ್ಷಿತವಾಗಿಯೇ ತನ್ನ ಬಾಹುಗಳಲ್ಲಿ ರಕ್ಷಿಸಿದ್ದಾಳೆ, ನಮಗೆ ಅತೀ ಸಮೀಪದಲ್ಲಿರುವ ಜಗತ್ತುಗಳೆಂದರೆ ಪರಿಪೂರ್ಣದ ಅತಿಮಾನಸ ಸೃಷ್ಟಿಯೇ ಆಗಿದ್ದು, ಇಲ್ಲಿಯೇ ಶ್ರೀಮಾತೆಯು ಈ "ವಿಶ್ವೋತ್ತೀರ್ಣ ಮಹಾಶಕ್ತಿ"(ಆದ್ಯಶಕ್ತಿ)ಯಾಗಿದ್ದಾಳೆ. ದಿವ್ಯ ಸರ್ವಜ್ಞತ್ವದ 'ಇಚ್ಛೆ' ಮತ್ತು ಸರ್ವಶಕ್ತ ಜ್ಞಾನದೊಡನೆ ಇವು ಯಾವಾಗಲೂ ವಿಚಲನಗೊಳ್ಳದ ಕಾರ್ಯಗಳಾಗಿದ್ದು, ಜೊತೆಗೆ ಪ್ರತಿಯೊಂದು ಪ್ರಕ್ರಿಯೆಯಲ್ಲಿಯೂ ಸಹಿತ ಸ್ವತಃಸ್ಫೂರ್ತಭಾವದಲ್ಲಿ ಪರಿಪೂರ್ಣವಾಗಿರುತ್ತಾಳೆ. ಇವೆಲ್ಲವೂ ಅಲ್ಲಿ ಆ ಋತದ ಹಂತಗಳೇ ಆಗಿವೆ. ಅಲ್ಲಿರುವ ಸರ್ವ ಆತ್ಮಗಳ ಅಸ್ತಿತ್ವವು ಮತ್ತು ಶಕ್ತಿ–ಬಲಗಳ ಹಾಗೂ ದೇಹ–ರಚನೆಗಳು ಆ ದೈವೀ ಪ್ರಕಾಶವೇ ಆಗಿರುತ್ತವೆ. ಅಲ್ಲಿನ ಅನುಭವಗಳೆಲ್ಲವೂ ಅಲ್ಲಿರುವ ಆರ್ಣವ (ಸಾಗರ) ಹಾಗೂ ಪ್ರವಾಹವಾಗಿದ್ದು, ಅಲ್ಲಿ ಸದಾ ಆ ತೀವ್ರತೆಯು ತುಂಬಿದ ಆ ನಿರ್ವಿಶೇಷ ಆನಂದದ (ಸಚ್ಚಿದಾನಂದದ) ಅಲೆಗಳೇ ಆಗಿರುತ್ತವೆ. ಆದರೆ ಇಲ್ಲಿ, ನಾವು ವಾಸಿಸುತ್ತಿರುವ ಎಡೆಯಲ್ಲಿ, ಇದು

ಮಾತ್ರ ಅಜ್ಞಾನದ ಲೋಕಗಳಾಗಿವೆ. ಮನೋಲೋಕಗಳಾಚೆ, ದೇಹ ಮತ್ತು ಜೀವ(ನ)ಗಳು, ಅವುಗಳ ಮೂಲದ್ರವ್ಯವಾಗಿರುವ ಚೈತನ್ಯದಿಂದ ಭಿನ್ನವಾಗಿಯೇ (ದೂರವಾಗಿಯೇ) ರೂಪುಗೊಂಡಿರುತ್ತವೆ. ಅವುಗಳಲ್ಲಿ ನಮ್ಮ ಈ ಭೂಮಿಯೂ ಸಹಿತ ಒಂದು ಪ್ರಾಮುಖ್ಯ ಹೊಂದಿದ ಕೇಂದ್ರವಾಗಿದ್ದು, ಇದರ ವಿಕಾಸವೂ ಅತ್ಯಂತ ನಿರ್ಣಾಯಕ ಪ್ರಕ್ರಿಯೆಯಲ್ಲಿ ಇದೆ. ಇದೂ ಸಹಿತ ಅದರ ಎಲ್ಲ ಅಸ್ಪಷ್ಟತೆಯಿಂದ ಮತ್ತು ಸಂಘರ್ಷದಿಂದ ಹಾಗೂ ಅಪರಿಪೂರ್ಣತೆಯಿಂದಲೇ ಶ್ರೀಮಾತೆಯಿಂದಲೇ ರಕ್ಷಿಸಲ್ಪಡುತ್ತಿದೆ. ಇದೂ ಸಹಿತ ಈ ಮಹಾಶಕ್ತಿಯ ಗೂಢಗಮ್ಯತೆಯ ಕಡೆಗೆ ಸಾಗಲು ಪ್ರೇರಣೆಯನ್ನು ಹಾಗೂ ಮಾರ್ಗದರ್ಶನವನ್ನು ಹೊಂದಿರುತ್ತದೆ. ಅಜ್ಞಾನದಿಂದ ತುಂಬಿರುವ ಈ ತ್ರಿಪುಟೀ–ಲೋಕಗಳಲ್ಲಿ ಈ ಶ್ರೀಮಾತೆಯು ಮಹಾಶಕ್ತಿಯಾಗಿ ಮಧ್ಯಂತರದ ಒಂದು ಸ್ತರದಲ್ಲಿ ಇರುತ್ತಾಳೆ. ಅವಳು ಆ ಮೂಲಕ ಅತಿಮಾನಸ–ಪ್ರಕಾಶಕ್ಕೂ, ಪರಮ ಸತ್ಯಕ್ಕೂ ಹಾಗೂ ಋತಜೀವ(ನ)ದ ಮಧ್ಯದ ಸ್ತರದಲ್ಲಿ ಮಧ್ಯವರ್ತಿಯಾಗಿದ್ದಾಳೆ, ಅವೆಲ್ಲವನ್ನೂ ಇಲ್ಲಿಗೆ ಕ್ರಮಾನುಗತವಾಗಿಯೇ ಅವತರಣಗೊಳಿಸುವ ಮೂಲಕ, ಅವತರಣಗೊಳ್ಳುವದರ ಮೂಲಕ, ಇಲ್ಲಿರುವ ಚೈತನ್ಯದ ಸ್ತರಗಳಲ್ಲಿ ಆರೋಹ–ಅವರೋಹಣಗಳನ್ನು ಒದಗಿಸುವ ವಿಶೇಷ ವ್ಯವಸ್ಥೆಯುಳ್ಳ ಏಣಿಯ ಸ್ವರೂಪದಲ್ಲಿ ಇದ್ದು, ಅದರ ಮೂಲಕವೇ ಆ ಅವಿದ್ಯೆಯಿಂದ ಕೂಡಿದ ಭೌತಿಕ ಜಗತ್ತಿಗೆ ಬಂದು, ಮತ್ತೆ ಅದೇ ಸಾಧನದ ಮೂಲಕವೇ ಮೇಲೇರಿ ಬಂದು, ಜೀವನ–ಪುಷ್ಪದ ವಿಕಸನವನ್ನು, ಆತ್ಮದ ವಿಕಸನವನ್ನೂ, ಮನೋ ವಿಕಸನವನ್ನೂ ಆ ಅನಂತಾನಂತದವರೆಗೂ ಹಾಗೂ ಆ ಪರಮ ಆತ್ಮದ ನೆಲೆಯವರೆಗೂ ತಲುಪುವಂತೆ ಮಾಡುತ್ತಾಳೆ. ಇವೆಲ್ಲವೂ ಈ ಲೋಕದಲ್ಲಿಯೇ ಘಟಿಸಲ್ಪಡಬೇಕೆಂದು ನಿರ್ಣಿತವಾಗಿರುವದರಿಂದ, ಹಾಗೂ ಈ ಲೌಕಿಕದ ವಿಕಾಸದ ಮೂಲಕವೇ ಅವಳು ಎಲ್ಲವನ್ನೂ ಗಮನಿಸುತ್ತಾಳೆ. ಅನುಭವಿಸುತ್ತಾಳೆ. ಜೊತೆಗೆ ಅವುಗಳನ್ನೇ ಅವಳು ಧಾರಾಕಾರಗೊಳಿಸುತ್ತಾಳೆ. ದೇವತೆಗಳಿಗಿಂತಲೂ ಉನ್ನತ ಸ್ತರದಲ್ಲಿ ಅವಳು ನೆಲೆಸಿದ್ದು, ಅವಳ ಸರ್ವ ಶಕ್ತಿಗಳೂ ಹಾಗೂ ವ್ಯಕ್ತಿತ್ವಗಳು ಅವಳ ಎದುರಿಗೇ ಸ್ಥಿತಗೊಂಡಿರುತ್ತವೆ. ಅವುಗಳ ಮೂಲಕವೇ ಅವಳು ಕ್ರಿಯೆಗೆ ತೊಡಗುತ್ತಾಳೆ. ಅವುಗಳನ್ನು ಅವರೋಹಣಗೊಳಿಸಿ, ಅವುಗಳ ಉದ್ಗಮವನ್ನೇ (ಹೊರಹೊಮ್ಮುವಿಕೆಯನ್ನು) ಈ ಕೆಳಗಿನ ಸ್ತರಗಳ ಲೋಕಗಳ ಮಧ್ಯೆ ಪ್ರವೇಶಿಸುವಂತೆ, ನಿರ್ವಹಿಸುವಂತೆ, ಹೋರಾಡಲು ಹಾಗೂ ವಿಜಯ ಸಂಪಾದಿಸಲು, ಮುಂದಾಳತ್ವ ವಹಿಸಲು ಮತ್ತು ಅವುಗಳ ಚಕ್ರೀಯ ಗತಿಯನ್ನು

ಮುಂದುವರೆಸಲು, ಒಟ್ಟಿನಲ್ಲಿ, ಅವುಗಳ ಬಲಗಳನ್ನು ಪ್ರತಿ ಹಂತದಲ್ಲಿಯೂ ಪ್ರತಿ ಸ್ತರದಲ್ಲಿಯೂ ಸಮಗ್ರಗೊಳ್ಳುವಂತೆ (ಪೂರ್ಣಗೊಳ್ಳುವಂತೆ) ನಿರ್ದೇಶಿಸಲು ರೂಪಿಸುತ್ತಾಳೆ. ಈ ಉದ್ಗಮಗಳು ಹಲವು ದಿವ್ಯ ರೂಪಗಳಲ್ಲಿ ಮತ್ತು ವ್ಯಕ್ತಿತ್ವಗಳಲ್ಲಿ ಇದ್ದು, ಇವುಗಳ ಮೂಲಕವೇ ಮನುಕುಲವು ಇವಳನ್ನು ಹಲವಾರು ನಾಮ ರೂಪಗಳಲ್ಲಿ, ಹಲವಾರು ಯುಗಗಳಿಂದಲೂ ಆರಾಧಿಸುತ್ತ ಬಂದಿದ್ದಾರೆ. ಆದರೆ ಅವಳೂ ಸಹಿತ ಈ ಎಲ್ಲ ಶಕ್ತಿಗಳ ಮುಖಾಂತರವೇ ಸಾಕಾರ ಪಡೆಯುತ್ತಿದ್ದು, ಸಿದ್ಧಗೊಳ್ಳುತ್ತಿದ್ದು ಹಾಗೂ ಉದ್ಗಮಗಳೇ ಅವಳ ವಿಭೂತಿ (ಮಹಾತ್ಮ) ಸ್ವರೂಪದ ದೇಹಗಳು ಮತ್ತು ಮನಸ್ಸುಗಳಾಗಿವೆ. ಅಷ್ಟೇ ಅಲ್ಲದೇ ಅವಳು ಈಶ್ವರನ ವಿಭೂತಿ ಲಕ್ಷಣಗಳನ್ನೂ, ಅವನ ಮನೋರೂಪವನ್ನೂ ಹಾಗೂ ದೈಹಿಕ ಸ್ವರೂಪವನ್ನೂ ಸಿದ್ಧಗೊಳಿಸುತ್ತಾಳೆ. ಅಂದರೆ ಇವೆಲ್ಲವನ್ನೂ ಅವಳು ಈ ಭೌತಿಕ (ಲೌಕಿಕ) ಜಗತ್ತಿನಲ್ಲಿ ಅಭಿವ್ಯಕ್ತಗೊಳಿಸುತ್ತಾಳೆ. ಅಲ್ಲದೇ ಮಾನವನ ಚೈತನ್ಯದಲ್ಲಿ (ಪ್ರಜ್ಞೆಯಲ್ಲಿ) ಅದೃಶ್ಯ ರೂಪದಲ್ಲಿ ಅವಳ ಕೆಲವೊಂದು ಶಕ್ತಿಯ ಕಿರಣದಲ್ಲಿ, ಗುಣದಲ್ಲಿ ಮತ್ತು ಸಾರೂಪ್ಯದಲ್ಲಿ ಪ್ರಕಟಗೊಳಿಸುತ್ತಾಳೆ. ಹೀಗಾಗಿ ಈ ಭೂಮಿಯ ಮೇಲಿನ ಎಲ್ಲ ಘಟನಾವಳಿಗಳೂ, ದೃಶ್ಯಗಳೂ ಸಹಿತ ಅವಳ ಆ ವಿಶ್ವ ವಿರಾಟ್–ಸ್ವರೂಪದ ದೇವ ಗಣಗಳನ್ನು ಅವಳ ಸಹಾಯಕರನ್ನಾಗಿಸಿಕೊಂಡು ರೂಪಿಸಿ ನಿರ್ದೇಶಿಸುತ್ತಿರುವ ಹಾಗೂ ವ್ಯವಸ್ಥೆಗೊಳಿಸುತ್ತಿರುವ ರಂಗಲೀಲೆಗಳಾಗಿವೆ. ಇಲ್ಲಿ ಅವಳೂ ಸಹಿತ ಅಪ್ರತ್ಯಕ್ಷವಾಗಿಯೇ ಪಾತ್ರಧಾರಿಯೂ ಆಗಿದ್ದಾಳೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/14–17 – ಶ್ರೀ ಅರವಿಂದರು**

ಈ ಶ್ರೀಮಾತೆಯು ಆ ಊರ್ಧ್ವದಿಂದಲೇ ಎಲ್ಲವನ್ನೂ ಆಡಳಿತಕ್ಕೆ ಒಳಪಡಿಸುತ್ತಾಳೆ, ಅದೇ ರೀತಿ ನಿರ್ವಹಿಸುತ್ತಿದ್ದಾಳೆ. ಅಲ್ಲದೇ ಅವಳು ಈ ಕೆಳಗಿನ ಸ್ತರದಲ್ಲಿರುವ ತ್ರೈಗುಣದಿಂದ ಕೂಡಿರುವ ಲೋಕದೆಡೆಗೆ ಅವತರಣಗೊಳ್ಳುತ್ತಾಳೆ. ಇಲ್ಲಿರುವ ಎಲ್ಲವೂ ಸಹಿತ, ಅಜ್ಞಾನದ ಸಂಚಲನದಲ್ಲಿಯೂ ಸಹಿತ, ಅವಳದೇ ಆದ ಆಚ್ಛಾದಿತ ಸ್ವರೂಪದಲ್ಲಿ ಇದ್ದು, ನಿರಾಕಾರ ಸ್ವರೂಪದಲ್ಲಿರುತ್ತದೆ. ಜೊತೆಗೆ ಅವಳದೇ ಸೃಷ್ಟಿಯಾಗಿದ್ದರೂ ಸಹಿತ, ಕ್ಷೀಣಗೊಂಡ ಪದಾರ್ಥಗಳಲ್ಲಿ, ಅವಳ ಪ್ರಾಕೃತಿಕ ಸಂರಚನೆ (ಪ್ರಕೃತಿ ಸ್ವರೂಪದ ದೇಹ) ಹಾಗೂ ಪ್ರಕೃತಿಯ ಬಲಗಳಲ್ಲಿ ಜೊತೆಗೇ ಅವುಗಳು ಅಸ್ತಿತ್ವದಲ್ಲಿವೆ. ಏಕೆಂದರೆ, ಇವೆಲ್ಲವೂ ಆ 'ಪರಮ'ದ ನಿಗೂಢವಾದ ನಿಯೋಜನೆಯೇ ಆಗಿದೆ. ಇದು ಆ ಮೂಲಕವೇ ಕಾರ್ಯಪ್ರವೃತ್ತವಾಗುತ್ತಿದ್ದು,

ಅದು ಆ ಅನಂತತೆಯ ಸಂಭಾವ್ಯತೆಯಲ್ಲಿಯೇ ಸ್ಥಿತವಿದ್ದುದಾಗಿತ್ತು. ಅವಳು ಸದಾ ಮಹತ್–ತ್ಯಾಗಕ್ಕೆ ಅನುಮತಿಸುತ್ತಿದ್ದು, ಜೊತೆಗೆ ಅದಕ್ಕಾಗಿ ಆತ್ಮಕ್ಕೆ, ಅಜ್ಞಾನದ ರೂಪಗಳ ಮೇಲೆ ಮತ್ತು ಆತ್ಮಕ್ಕೆ ಹೊದಿಸಿರುವ ಹೊದಿಕೆಯನ್ನೂ ರೂಪಿಸಿದ್ದಾಳೆ. ಆದರೆ ವೈಯಕ್ತಿಕವಾಗಿಯೂ ಅವಳು, ಇಲ್ಲಿ ಈ ತಮೋಪ್ರಧಾನ ಸ್ತರದೆಡೆಗೆ ಅವತರಣಗೊಳ್ಳಲೆಂದು ಬಾಗುತ್ತಾಳೆ. ಏಕೆಂದರೆ ಆ ಮೂಲಕವೇ ಪ್ರಕಾಶವನ್ನೂ ನೀಡಿ ಮುಂದಾಳತ್ವ ವಹಿಸಬೇಕಾಗಿದೆ. ಅನೃತವಾದುದನ್ನು, (ಮಿಥ್ಯೆಗಳನ್ನು) ಹಾಗೂ ತಪ್ಪುಗಳನ್ನು ಪರಿವರ್ತಗೊಳಿಸುತ್ತ ಪರಮ ಸತ್ಯಕ್ಕೆ ತರುತ್ತಾಳೆ. ಈ ಮೃತಸದೃಶವಾಗಿರುವದನ್ನು, ಅವಳು ಅದನ್ನು ದೇವಸದೃಶ ಜೀವವನ್ನಾಗಿಸಿ ಪರಿವರ್ತಿಸುತ್ತಾಳೆ. ಈ ನೋವುಗಳಿಂದ, ಯಾತನೆಗಳಿಂದ, ಕೂಡಿದ ಜಗತ್ತಿಗೆ, ಹಠಮಾರಿತನದಿಂದಾಗಿ ರೂಪಿತಗೊಂಡ ದುಃಖದಿಂದ ಹಾಗೂ ಬಳಲುವಿಕೆಯಿಂದ ಇದ್ದುದನ್ನು ಅವಳು ಅದೆಲ್ಲಕ್ಕೂ ಮುಕ್ತಾಯ ರೂಪಿಸಿ, ಅಲ್ಲಿ ಅವಳ ಮಹೋನ್ನತವಾದ ಆನಂದದಲ್ಲಿಯೇ ರೂಪಾಂತರಣಗೊಳಿಸುತ್ತಾಳೆ. ಅವಳ ಆತ್ಮೀಯ, ಗಾಢ ಹಾಗೂ ಮಹದ್–ಪ್ರೇಮ ಭಾವವು ಯಾವಾಗಲೂ ಅವಳ ಸಂತತಿಯ ಮೇಲೆಯೇ ಇದ್ದು, ಅದಕ್ಕಾಗಿಯೇ ಈ ಅಸ್ಪಷ್ಟತೆಯ ಅವಧಿಯಿಂದ ಹೊರಬರಲು ತನಗೆ ತಾನೇ ಸಮ್ಮತಿಸಿಕೊಂಡು, ಅಲ್ಲಿ ಸ್ಥಿತಗೊಳ್ಳುತ್ತಾಳೆ. ತಮದ ಹಾಗೂ ಮಿಥ್ಯಾಲೋಕದ ಶಕ್ತಿಗಳಿಂದಾಗಿ ಆಗಮಿಸುವ (ಉದ್ಭವಿಸುವ) ವೇದನಾಪೂರ್ಣ ಪ್ರಭಾವಗಳನ್ನು ಹಾಗೂ ಆಘಾತಗಳನ್ನು ಸಹಿಸಿಕೊಳ್ಳುವದರ ಸಲುವಾಗಿ ಅವಳು ತನ್ನನ್ನು ತಾನೇ ದಯಾಶೀಲಗೊಳಿಸಿಕೊಳ್ಳುತ್ತಾಳೆ. ಜನ್ಮ ಜನ್ಮಗಳ ಹಲವು ದ್ವಾರಗಳಿಂದಲೇ ಅವಳು ಸಂಚಲಿಸುತಿದ್ದು, ಅದು ಸಾವನ್ನೂ ಸಹಿತ ಒಳಗೊಂಡಿದೆ. ಅವಳು ತನ್ನಲ್ಲಿಯೇ ಈ ಎಲ್ಲ ನೋವುಗಳನ್ನೂ ಹಾಗು ದುಃಖಗಳನ್ನು ಮತ್ತು ಸೃಷ್ಟಿಯ ಎಲ್ಲ ಕ್ಲೇಶಗಳನ್ನು ಸ್ವೀಕರಿಸುತ್ತಾಳೆ. ಹೀಗಾಗಿಯೇ ಇದೆಲ್ಲವೂ, ಸರ್ವಸ್ವವೂ ಏಕಾಂಗಿಯಾಗಿಯೇ ಆ ಪ್ರಕಾಶದ ಕಡೆಗೆ ಎತ್ತಲ್ಪಟ್ಟಂತೆ ಕಾಣುತ್ತದೆ. ತೋಷದೆಡೆಗೆ ಮತ್ತು ಆ ಋತದ ಹಾಗೂ ಶಾಶ್ವತದ ಜೀವನದ ಎಡೆಗೆ ಊರ್ಧ್ವಗೊಳಿಸಿದಂತೆ ಇರುತ್ತದೆ. ಇದನ್ನೇ ಮಹತ್ತರವಾದ ತ್ಯಾಗವೆಂದೂ ಕರೆಯಲಾಗಿದೆ. ಕೆಲವೊಂದು ಸಾರಿ ಇದು 'ಪುರುಷನ ತ್ಯಾಗ'ವೆಂದು ಕರೆಯಲಾಗಿದೆ. ಆದರೆ, ಇದು ಬಹುತೇಕವಾಗಿ, ಪ್ರಕೃತಿಯ ಪ್ರಳಯಸ್ವರೂಪಿ(ಪೂರ್ಣಾಹುತಿ) ಯಾಗಿರುತ್ತದೆ. ಇದೇ ಈ ದಿವ್ಯಮಾತೆಯ ತ್ಯಾಗವೂ ಆಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/17 – ಶ್ರೀ ಅರವಿಂದರು**



**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

ಭರವಸೆ ಇರುವಂಥ ಮನುಷ್ಯರು ಈರ್ವರು, ದೇವರ ಸ್ಪರ್ಶವನ್ನು ಅನುಭವಿಸಿ ಮತ್ತು ಆ ಸ್ಪರ್ಶದೆಡೆಗೆ ಸೆಳೆಯಲ್ಪಟ್ಟಂಥ ಮನುಷ್ಯ ಮತ್ತು ಸಂದೇಹ ಪಡುವಂಥ ಅನ್ವೇಷಕ ಹಾಗೂ ಮನವರಿಕೆಯಾದಂಥ ನಾಸ್ತಿಕ; ಆದರೆ ಎಲ್ಲ ಧರ್ಮಗಳ ಶುಷ್ಕ ಪಂಡಿತರಿಗೆ ಹಾಗೂ ಮುಕ್ತ ವಿಚಾರದ ಪಠಿಕರಿಗೆ, ಜೀವನವೆಂದು ಕರೆಯುವ ಒಂದು ಅಂತ್ಯವನ್ನು ಅನುಸರಿಸುವಂಥರಿಗೆ ಅವುಗಳು ನಿರ್ಜೀವ ಆತ್ಮಗಳು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/441 – ಶ್ರೀ ಅರವಿಂದರು**

## ಪರಮೋಚ್ಚ ಪ್ರಜ್ಞೆ

**ವಿವೇಕ**

ಬೇರೆಯರು ಪ್ರಯಾಸ ಪಡುವುದನ್ನು ನಾನು ನೋಡಿದಾಗ, ನಾನು ನತದೃಷ್ಟ ಎಂದು ಅನ್ನಿಸುತ್ತದೆ, ಆದರೆ ನನ್ನದಲ್ಲದ ವಿವೇಕವು, ಆಗಮಿಸುತ್ತಿರುವ ಒಳ್ಳೆಯದನ್ನು ಕಾಣುತ್ತದೆ ಮತ್ತು ಅನುಮೋದಿಸುತ್ತದೆ.

*ಈ “ವಿವೇಕ” ಎಂದರೆ ಏನು?*

ಅದು ಅತ್ಯುನ್ನತ ವಿವೇಕವಾಗಿದೆ, ಪರಮಶಕ್ತನ ವಿವೇಕವಾಗಿದೆ. ಈ ವಿವೇಕದಿಂದ ವರ್ತಮಾನ, ಭೂತ ಮತ್ತು ಭವಿಷ್ಯಗಳನ್ನು ಸರಿಸಮನಾಗಿ ನೋಡಲಾಗುತ್ತದೆ. ವಿವೇಕವು ಎಲ್ಲ ಪರಿಣಾಮಗಳ ಕಾರಣಗಳನ್ನು (ಕಾರಣವೆಂದರೆ

ದೈವೀ ಉದ್ದೇಶ ಅಥವಾ ಮೂಲ) ಮತ್ತು ಎಲ್ಲ ಕಾರಣಗಳ ಪರಿಣಾಮಗಳನ್ನು ತಿಳಿದಿದೆ. ಎಲ್ಲ ಸಂದರ್ಭಗಳ, ಅವುಗಳ ಪೂರ್ಣತೆಯಲ್ಲಿ, ಏಕಕಾಲದಲ್ಲಿ ಗ್ರಹಿಸಲಾದ ಒಟ್ಟು ಮೊತ್ತವನ್ನು, ದೈವಿಕವನ್ನು ಹಂತಹಂತವಾಗಿ ವ್ಯಕ್ತಪಡಿಸಲು ಪ್ರಕೃತಿಯ ಉದಾತ್ತ ಪ್ರಯತ್ನವೆಂದು, ದೈವೀ ಪರಿಪೂರ್ಣತೆಯ ಕಡೆಗಿನ ಅವಳ ಆರೋಹಣ ನಡಿಗೆ ಎಂದು ಕಾಣಲಾಗುತ್ತದೆ. ಅಂದರೆ, "ಒಳ್ಳೆಯದು ಬರುತ್ತಿದೆ", ಎಲ್ಲವೂ ಅದರೆಡೆಗೆ ಒಲವು ತೋರುತ್ತದೆ; ಮತ್ತು ನಿಜವಾದ ವಿವೇಕವು ಅನುಮೋದಿಸುವುದು ಅದಕ್ಕಾಗಿ.

ಯಾಕೆಂದರೆ ನಮ್ಮ ದೂರದೃಷ್ಟಿ, ನಮ್ಮ ತೀರಾ ಸೀಮಿತ ಗ್ರಹಿಕೆ ಮತ್ತು ನಮ್ಮ ದಾರಿ ತಪ್ಪಿದ ಸಂವೇದನೆಗಳು ಮಾತ್ರ ನಮಗೆ ಪ್ರಗತಿಗೆ ಸಾಧ್ಯತೆಯಾಗಿರುವ ಒಂದು ಅವಕಾಶವನ್ನು ದುಃಖವಾಗಿ ಬದಲಾಯಿಸುತ್ತವೆ.

ಮತ್ತು ನಾವು ಅರ್ಥಮಾಡಿಕೊಂಡ ಮತ್ತು ಸಹಕರಿಸಿದ ತಕ್ಷಣ, ದುಃಖವು ಕಣ್ಮರೆಯಾಗುತ್ತದೆ ಎಂಬ ಅಂಶದಿಂದ ಇದು ಸಾಧಿಸಲ್ಪಡುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/49–50**

ಕಾರಣವು ಇಲ್ಲವಾದಾಗ (ಅಂತ್ಯವಾದಾಗ) ವಿವೇಕವು ಜನ್ಮತಾಳಿತು ಎನ್ನುವುದನ್ನು ನಾನು ತಡವಾಗಿ ಗ್ರಹಿಸಿದೆ; ಆ ವಿಮೋಚನೆಯ ಮೊದಲು, ನಾನು ಜ್ಞಾನವನ್ನು ಮಾತ್ರ ಹೊಂದಿದ್ದೆ.

ಮನಸ್ಸಿಗೆ ಒಂದು ಸಣ್ಣ ಆಘಾತವನ್ನು ಕೊಡುವ ಸಲುವಾಗಿ ಮತ್ತು ಅದು ತಿಳಿದುಕೊಳ್ಳಲು ಒಂದು ಪ್ರಯತ್ನ ಮಾಡಲೆಂದು ಅದನ್ನು ಸಾಕಷ್ಟು ಜಾಗೃತಗೊಳಿಸುವ ಸಲುವಾಗಿ ಈ ಸೂಕ್ತಿಗಳ ಸ್ವರೂಪವು ಉದ್ದೇಶಪೂರ್ವಕವಾಗಿ ವಿರೋಧಾಭಾಸವಾಗಿದೆ ಎನ್ನುವುದನ್ನು ನಾನು ಮತ್ತೊಮ್ಮೆ ಪುನರುಚ್ಚಿಸಲೇಬೇಕಾಗಿದೆ. ಈ ಸೂಕ್ತಿಯನ್ನು ನಾವು ಅಕ್ಷರಶಃ ತೆಗೆದುಕೊಳ್ಳಬೇಕಾಗಿಲ್ಲ. ನಾವು ಜಾಣರಾಗಲು ಕಾರಣವು ಕಣ್ಮರೆಯಾಗಲೇಬೇಕು ಎನ್ನುವ ಕಲ್ಪನೆಯಿಂದ ಕೆಲವು ಜನರು ಚಿಂತೆಗೀಡಾದಂತೆ ತೋರುತ್ತದೆ. ಅದು ಹಾಗಲ್ಲ, ಅದು ಹಾಗೆ ಅಲ್ಲವೇ ಅಲ್ಲ.

ಕಾರಣವು ಎಂದಿಗೂ ಪರಾಕಾಷ್ಠೆಯಾಗಿರಬಾರದು ಮತ್ತು ಯಜಮಾನನಾಗಿಬಾರದು.

ಜೀವನದಲ್ಲಿ ದೀರ್ಘ ಸಮಯದವರೆಗೆ, ಜ್ಞಾನವನ್ನು ಹೋಲುವಂಥ ಯಾವುದಾದರನ್ನು ನಾವು ಹೊಂದುವವರೆಗೆ, ಕಾರಣವು ಯಜಮಾನನಾಗಿರುವುದು ಅವಶ್ಯವಾಗಿದೆ, ಇಲ್ಲದಿದ್ದರೆ ನಾವು ನಮ್ಮ ಪ್ರಚೋದನೆಗಳ, ನಮ್ಮ ಬಯಕೆಗಳ, ಹೆಚ್ಚು ಕಡಿಮೆ ನಮ್ಮ ಅವ್ಯಸ್ಥಿತ ಭಾವನಾತ್ಮಕ ಕಲ್ಪನೆಗಳ ಆಟಿಕೆಯಾಗುತ್ತೇವೆ. ಮತ್ತು ಜ್ಞಾನದಿಂದ ಮಾತ್ರವಲ್ಲದೆ ನಮ್ಮನ್ನು ನಾವು ಸ್ವೀಕಾರಾರ್ಹವಾಗಿ ಸಂಭಾಳಿಸಲು ಬೇಕಾದ ಜ್ಞಾನದಿಂದಲೂ ಸಹ ಬಹಳ ದೂರವಿರುವ ಅಪಾಯದಲ್ಲಿ ನಾವಿರುತ್ತೇವೆ. ಆದರೆ ಸಾಧಾರಣ ಮಾನವ ಬುದ್ಧಿಮತ್ತೆಯ ಪರಾಕಾಷ್ಠೆಯಾದಂಥ ಕಾರಣದ ಸಹಾಯದಿಂದ ನಾವು ಪುರುಷನ ಎಲ್ಲ ನಿಮ್ನ ಭಾಗಗಳನ್ನು ನಿಯಂತ್ರಿಸಲು ಸಫಲವಾದಾಗ, ಈ ಹಂತದಿಂದಾಚೆ ನಾವು ಹೋಗಬೇಕಾದರೆ, ನಮ್ಮನ್ನು ನಾವು ಸಾಮಾನ್ಯ ಜೀವನದಿಂದ, ಸಾಧಾರಣ ಚಿಂತನೆಯಿಂದ, ವಸ್ತುಗಳ ಸಾಧಾರಣ ದೃಷ್ಟಿಕೋನದಿಂದ ಮುಕ್ತಗೊಳಿಸಿಕೊಳ್ಳಬೇಕಾದರೆ, ನಾವು ಕಾರಣವನ್ನು ಉಪೇಕ್ಷಿಸಿ ಅದನ್ನು ಕೆಳಗೆ ತುಳಿದು ಹಾಕದೆ, ಅದನ್ನು ಉನ್ನತಕ್ಕಾಗಿ, ಇನ್ನೂ ಅದರಾಚೆ ಇರುವುದಕ್ಕಾಗಿ, ಕಾರಣದ ವಿಧಿಗಳೊಂದಿಗೆ ಅತಿ ಕಡಿಮೆ ಸಂಬಂಧ ಹೊಂದಿದಂಥ ಏನೋ ಒಂದನ್ನು ಪಡೆಯಲು; ಅದೊಂದು ಉನ್ನತ ತರ್ಕಹೀನತೆ ಆಗಿದ್ದರಿಂದ ತನ್ನನ್ನು ತಾನು ವಿಚಾರಹೀನವಾಗಿರಲು ಅನುಮತಿಸುವಂಥ ಏನೋ ಒಂದನ್ನು ಪಡೆಯಲು; ಸಾಧಾರಣ ಜ್ಞಾನದಾಚೆ ಇರುವಂಥ ಮತ್ತು ಮೇಲಿನಿಂದ, ದೈವೀ ಪ್ರಜ್ಞೆಯಿಂದ ತನ್ನ ಪ್ರೇರಣೆಗಳನ್ನು ಸ್ವೀಕರಿಸುವಂಥ ಏನೋ ಒಂದನ್ನು ಪಡೆಯಲು; ಕಾರಣವನ್ನು ಒಂದು ಮೆಟ್ಟಿಲನ್ನಾಗಿ ಬಳಸಿಕೊಂಡು ಅದರ ಮೇಲೆ ನಿಲ್ಲಲೇಬೇಕು.

ಅದಕ್ಕೆ ಅರ್ಥ ಇದಾಗಿದೆ.

ಜ್ಞಾನಕ್ಕೆ ಸಂಬಂಧಿಸಿದಂತೆ ಇಲ್ಲಿ ಶ್ರೀ ಅರವಿಂದರು ಹೀಗೆ ಹೇಳುತ್ತಾರೆ: ಅದು ಸಾಧಾರಣ ಜ್ಞಾನವಾಗಿದೆ, ಅಸ್ಮಿತೆಯ ದೃಷ್ಟಿಯಿಂದ ಅದು ಜ್ಞಾನವಲ್ಲ; ಚಿಂತನೆಯ ಮುಖಾಂತರ, ಸಾಮಾನ್ಯ ಸಾಧನಗಳ ಮುಖಾಂತರ ಬುದ್ಧಿಶಕ್ತಿಯಿಂದ ಸಂಪಾದಿಸಬಹುದಾದಂಥ ಜ್ಞಾನವು ಅದಾಗಿದೆ.

ಆದರೆ ಯಾವುದೇ ಸಂದರ್ಭದಲ್ಲಿ ನಾವು ಮುಂದಿನ ಸೂಕ್ತಿಯನ್ನು ಅಭ್ಯಾಸ ಮಾಡುವಾಗ ಇದಕ್ಕೆ ಮತ್ತೊಮ್ಮೆ ಹಿಂತಿರುಗುವ ಸಂದರ್ಭವು ನಮಗಿದೆ. ನೀವು ತಕ್ಷಣ ವಿವೇಕವನ್ನು ಹೊಂದುವಿರಿ ಎಂಬ ನಂಬಿಕೆಯಲ್ಲಿ ಕಾರಣವನ್ನು ತ್ಯಜಿಸಲು

ಆತುರಪಡಬೇಡಿ, ಏಕೆಂದರೆ ನೀವು ವಿವೇಕಕ್ಕೆ ಸಿದ್ಧರಾಗಿರಬೇಕು; ಇಲ್ಲದಿದ್ದರೆ, ಕಾರಣವನ್ನು ತ್ಯಜಿಸುವ ಮೂಲಕ, ನೀವು ಅಸಮಂಜಸತೆಗೆ ಬೀಳುವ ದೊಡ್ಡ ಅಪಾಯವನ್ನು ಎದುರಿಸುತ್ತೀರಿ, ಅದು ನಿಜವಾಗಿಯೂ ಅಪಾಯಕಾರಿ.

ಶ್ರೀ ಅರವಿಂದರು ತಮ್ಮ ಬರವಣಿಗೆಗಳಲ್ಲಿ ಹಲವಾರು ಬಾರಿ, ವಿಶೇಷವಾಗಿ ಯೋಗ ಸಮನ್ವಯದಲ್ಲಿ (Synthesis of Yoga) ಕಠಿಣವಾದ ಸ್ವನಿಯಂತ್ರಣವಿಲ್ಲದೆ ಸಾಧನೆಯನ್ನು ಮಾಡಬಹುದು ಎಂದು ನಂಬುವವರ ಕಲ್ಪನೆಗಳ ವಿರುದ್ಧ ಮತ್ತು ಎಲ್ಲ ರೀತಿಯ ಪ್ರೇರಣೆಗಳಿಗೆ ಗಮನ ಕೊಡುವವರ ವಿರುದ್ಧ ನಮ್ಮನ್ನು ಎಚ್ಚರಿಸುತ್ತಾರೆ. ಇದು ಅವರನ್ನು ಅಪಾಯಕಾರಿ ಅಸಮತೋಲನಕ್ಕೆ ನೂಕುತ್ತದೆ, ಅಲ್ಲಿ ಅವರ ಎಲ್ಲಾ ದಮನಿತ, ಗುಪ್ತ, ರಹಸ್ಯ ಬಯಕೆಗಳು ಸಾಮಾನ್ಯ ಕಾರಣದಿಂದ ಮುಕ್ತವಾಗಿ ಹೊರಬರುತ್ತವೆ.

ಮಾನವ ಉದ್ವೇಗಗಳಿಗಿಂತ ಎತ್ತರಕ್ಕೆ ಏರುವ ಮೂಲಕ ಮಾತ್ರ ನಾವು ಸ್ವತಂತ್ರರಾಗಬಹುದು. ಒಬ್ಬರು ಉನ್ನತ ನಿಸ್ವಾರ್ಥ ಸ್ವಾತಂತ್ರ್ಯವನ್ನು ಸಾಧಿಸಿದಾಗ ಮತ್ತು ಎಲ್ಲಾ ಆಸೆಗಳನ್ನು ಮತ್ತು ಪ್ರಚೋದನೆಗಳನ್ನು ತೊಡೆದು ಹಾಕಿದಾಗ ಮಾತ್ರ ಸ್ವತಂತ್ರವಾಗಿರಲು ಹಕ್ಕನ್ನು ಹೊಂದಿರುತ್ತಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/14–16**

**ನಿಜವಾದ ವಿವೇಕದ ಮಾನ**

ಆದರೆ ಅತ್ಯಂತ ಸಮಂಜಸವಾದ, ಸಾಮಾನ್ಯ ಸಾಮಾಜಿಕ ಕಾನೂನುಗಳ ಪ್ರಕಾರ ಅತ್ಯಂತ ನೈತಿಕವಾಗಿರುವ ಜನರು ತಮ್ಮನ್ನು ತಾವು ಬುದ್ಧಿವಂತರೆಂದು ಭಾವಿಸಬಾರದು, ಏಕೆಂದರೆ ಅವರ ಬುದ್ಧಿವಂತಿಕೆಯು ಭ್ರಮೆಯಾಗಿದೆ ಮತ್ತು ಗಹನವಾದ ಸತ್ಯವನ್ನು ಹೊಂದಿರುವುದಿಲ್ಲ.

ಕಾನೂನನ್ನು ಉಲ್ಲಂಘಿಸುವವನು ಕಾನೂನಿಗಿಂತ ಮೇಲಿರಬೇಕು. ಸಂಪ್ರದಾಯಗಳನ್ನು ನಿರ್ಲಕ್ಷಿಸುವವನು ಸಂಪ್ರದಾಯಗಳಿಗಿಂತ ಮೇಲಿರಬೇಕು. ಎಲ್ಲ ನಿಯಮಗಳನ್ನು ಧಿಕ್ಕರಿಸುವವನು ಎಲ್ಲ ನಿಯಮಗಳಿಗಿಂತ ಮೇಲಿರಬೇಕು. ಮತ್ತು ಈ ವಿಮೋಚನೆಯ ಉದ್ದೇಶವು ಎಂದಿಗೂ ವೈಯಕ್ತಿಕ, ಅಹಂಕಾರ–ಯುಕ್ತವಾಗಿರಬಾರದು: ಮಹತ್ವಾಕಾಂಕ್ಷೆಯನ್ನು ತಣಿಸುವ ಬಯಕೆಯ, ಶ್ರೇಷ್ಠತೆಯ

ಭಾವನೆಯ ಮೂಲಕ ಒಬ್ಬರ ವ್ಯಕ್ತಿತ್ವವನ್ನು ಹೆಚ್ಚಿಸುವುದು, ಇತರರ ಬಗ್ಗೆ ತಿರಸ್ಕಾರದಿಂದ ತನ್ನನ್ನು ತಾನು ಮಂದೆಯ ಮೇಲೆ ಎಂದು ಪರಿಣಿಸುವುದು ಮತ್ತು ಅದನ್ನು ಸಮಾಧಾನದಿಂದ ನೋಡುವುದು. ನೀವು ನಿಮ್ಮನ್ನು ಶ್ರೇಷ್ಠರು ಎಂದು ಭಾವಿಸಿದಾಗ ಮತ್ತು ಇತರರನ್ನು ವ್ಯಂಗ್ಯವಾಗಿ ನೋಡಿದಾಗ, "ನಾನು ಇಂತಹ ವಿಷಯಗಳಿಂದ ಮಾಡಲ್ಪಟ್ಟಿಲ್ಲ" ಎಂದು ಹೇಳುವಂತೆ ನಿಮ್ಮ ಎಚ್ಚರಿಕೆಯಲ್ಲಿರಿ. ಆಗ ನೀವು ಆ ದಾರಿಯಿಂದ ಹೊರಟು ಪ್ರಪಾತಕ್ಕೆ ಬೀಳುವ ಅಪಾಯದಲ್ಲಿ ಇರುತ್ತೀರಿ.

ಒಬ್ಬನು ನಿಜವಾಗಿಯೂ ವಿವೇಕವನ್ನು ಹೊಂದಿದಾಗ, ಶ್ರೀ ಅರವಿಂದರು ಇಲ್ಲಿ ಮಾತನಾಡುತ್ತಿರುವ ನಿಜವಾದ ವಿವೇಕವು ಇನ್ನು ಮುಂದೆ ಉನ್ನತವಾದ್ದೂ ಅಲ್ಲ ಕೆಳಮಟ್ಟದ್ದೂ ಅಲ್ಲ; ಅಲ್ಲಿ ಪ್ರತಿಯೊಂದು ವಸ್ತುವಿಗೆ ಅದರ ಸ್ಥಾನ ಮತ್ತು ಪ್ರಾಮುಖ್ಯತೆ ಇರುವ ಶಕ್ತಿಗಳ ಲೀಲೆ ಮಾತ್ರ ಇದೆ. ಮತ್ತು ಅಲ್ಲಿ ಕ್ರಮಾನುಗತವಿದ್ದರೆ ಅದು ಪರಮಾತ್ಮನಿಗೆ ಶರಣಾಗತಿಯ ಶ್ರೇಣಿಯಾಗಿದೆ. ಕೆಳಗೇನಿದೆಯೋ ಅದಕ್ಕೆ ಸಂಬಂಧಿಸಿದಂತೆ ಇದು ಶ್ರೇಷ್ಠತೆಯ ಶ್ರೇಣಿಯಲ್ಲ.

ಮಾನವ ತಿಳುವಳಿಕೆ, ಮಾನವ ವಿವೇಚನೆ, ಮಾನವ ಜ್ಞಾನದಿಂದ ಈ ಕ್ರಮಾನುಗತವನ್ನು ವಿವೇಚಿಸಲು ಸಾಧ್ಯವಾಗುವುದಿಲ್ಲ. ಜಾಗೃತ ಆತ್ಮ ಮಾತ್ರ ಮತ್ತೊಂದು ಜಾಗೃತ ಆತ್ಮವನ್ನು ಗುರುತಿಸಬಲ್ಲದು, ನಂತರ ಶ್ರೇಷ್ಠತೆಯ ಪ್ರಜ್ಞೆಯು ಸಂಪೂರ್ಣವಾಗಿ ಕಣ್ಮರೆಯಾಗುತ್ತದೆ.

ಅಹಂಕಾರವು ಕಣ್ಮರೆಯಾದಾಗ ಮಾತ್ರ ನಿಜವಾದ ವಿವೇಕವು ಬರುತ್ತದೆ ಮತ್ತು ಯಾವುದೇ ವೈಯಕ್ತಿಕ ಉದ್ದೇಶವಿಲ್ಲದೆ ಮತ್ತು ಯಾವುದೇ ಲಾಭದ ನಿರೀಕ್ಷೆಯಿಲ್ಲದೆ ನೀವು ಪರಮಾತ್ಮನಿಗೆ ನಿಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳಲು ಸಿದ್ಧರಾದಾಗ ಮಾತ್ರ ಅಹಂಕಾರವು ಕಣ್ಮರೆಯಾಗುತ್ತದೆ – ನೀವು ಬೇರೆ ರೀತಿ ಮಾಡದೇ ಇದ್ದದ್ದಕ್ಕಾಗಿ ಹಾಗೆ ಮಾಡುವಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/16**

**ನಿಜವಾದ ಪರಿವರ್ತನೆಗೆ ಬೀಗದ ಕೈ**

ಮನುಷ್ಯನು ಜ್ಞಾನ ಎಂದು ಕರೆಯುವುದು ತಪ್ಪು ತೋರಿಕೆಗಳ ತರ್ಕಬದ್ಧ ಸ್ವೀಕೃತಿಯಾಗಿದೆ. ವಿವೇಕವು ಮುಸುಕಿನಾಚೆ ನೋಡುತ್ತದೆ ಮತ್ತು ಗಮನಿಸುತ್ತದೆ.

ಕಾರಣವು ವಿಭಜಿಸುತ್ತದೆ, ವಿವರಗಳನ್ನು ಸರಿಪಡಿಸುತ್ತದೆ ಮತ್ತು ಅವುಗಳನ್ನು ವ್ಯತಿರಿಕ್ತಗೊಳಿಸುತ್ತದೆ; ವಿವೇಕವು ಒಂದು ಮಾಡುತ್ತದೆ, ಒಂದೇ ಸಾಮರಸ್ಯದಲ್ಲಿ ವ್ಯತಿರಿಕ್ತತೆಯನ್ನು ಒಂದುಗೂಡಿಸುತ್ತದೆ.

ಶ್ರೀ ಅರವಿಂದರು ಜ್ಞಾನ, ಕಾರಣ, ವಿವೇಕದ ಬಗ್ಗೆ ಬರೆದ ಎಲ್ಲವೂ, ನಮ್ಮನ್ನು ಸಾಂಪ್ರದಾಯಿಕ ಚಿಂತನೆಯಿಂದ ಹೊರತರಲೆಂದು, ಮತ್ತು ಸಾಧ್ಯವಾದರೆ, ತೋರಿಕೆಗಳ ಹಿಂದಿನ ವಾಸ್ತವತೆಯನ್ನು ನಾವು ಗ್ರಹಿಸುವಂತೆ ಮಾಡಲು ಎಂದು ಹೇಳಲಾಗುತ್ತದೆ.

ಸಾಮಾನ್ಯ ನಿಯಮದ ಪ್ರಕಾರ, ಕೆಲವು ಅಪರೂಪದ ವಿನಾಯಿತಿಗಳನ್ನು ಬಿಟ್ಟರೆ, ಪುರುಷರು ತಮ್ಮ ಸುತ್ತಲೂ ಮತ್ತು ಕೆಲವೊಮ್ಮೆ ತಮ್ಮೊಳಗೆ ನಡೆಯುವ ಎಲ್ಲವನ್ನೂ ಹೆಚ್ಚು–ಕಮ್ಮಿ ನಿಖರವಾಗಿ ಅವಲೋಕಿಸಿಲು ಮತ್ತು ಈ ಎಲ್ಲಾ ಅವಲೋಕನಗಳನ್ನು ತರ್ಕದ ಒಂದು ಬಾಹ್ಯ ವ್ಯವಸ್ಥೆಯ ಪ್ರಕಾರ ಅಥವಾ ಇನ್ನೊಂದರ ಪ್ರಕಾರ ವರ್ಗೀಕರಿಸಲು ತೃಪ್ತರಾಗಿರುತ್ತಾರೆ. ಅವರು ಈ ಸಂಘಟನೆಯನ್ನು, ಈ ವ್ಯವಸ್ಥೆಗಳನ್ನು "ಜ್ಞಾನ"ವೆಂದು ಕರೆಯುತ್ತಾರೆ. ಇದು ಅವರಿಗೆ ಎಂದಿಗೂ ಸಂಭವಿಸಿಲ್ಲ, ಅವರು ನೋಡುವ, ಸ್ಪರ್ಶಿಸುವ, ಭಾವಿಸುವ, ಅನುಭವಿಸುವ ಎಲ್ಲವೂ ಸುಳ್ಳು ತೋರಿಕೆಗಳೆ ಹೊರತು ವಾಸ್ತವವಲ್ಲ ಎಂದು ಅವರು ಗ್ರಹಿಸಲು ಇನ್ನೂ ಪ್ರಾರಂಭಿಸಿಲ್ಲ.

"ಆದರೆ ನಾನು ಅದನ್ನು ನೋಡುತ್ತೇನೆ, ನಾನು ಅದನ್ನು ಸ್ಪರ್ಶಿಸುತ್ತೇನೆ, ನಾನು ಅದನ್ನು ಅನುಭವಿಸುತ್ತೇನೆ – ತತ್ಪರಿಣಾಮವಾಗಿ ಅದು ಸತ್ಯವಾಗಿದೆ," ಎನ್ನುವುದು ನಿರಂತರವಾದ, ಸಾಮಾನ್ಯವಾದ ವಾದವಾಗಿದೆ.

ಇದಕ್ಕೆ ವ್ಯತಿರಿಕ್ತವಾಗಿ, "ನಾನು ಕಾಣುತ್ತೇನೆ, ನಾನು ಅದನ್ನು ಸ್ಪರ್ಶಿಸುತ್ತೇನೆ, ನಾನು ಅದನ್ನು ಭಾವಿಸುತ್ತೇನೆ – ಪರಿಣಾಮವಾಗಿ ಅದು ಮಿಥ್ಯೆಯಾಗಿದೆ," ಎಂದು ಅವರು ತಮ್ಮಷ್ಟಕ್ಕೆ ತಾವು ಹೇಳಿಕೊಳ್ಳಬೇಕು. ನಾವು ವಿರುದ್ಧವಾದ ಧ್ರುವಗಳಲ್ಲ ಮತ್ತು ಒಂದು ತಿಳುವಳಿಕೆಗೆ ಬರುವ ಮಾರ್ಗ ಅಲ್ಲಿಲ್ಲ.

ಶ್ರೀ ಅರವಿಂದರಿಗೆ, ನಿಜವಾದ ಜ್ಞಾನವು ಅಸ್ಮಿತೆಯಿಂದ ನಿಖರವಾಗಿ ಜ್ಞಾನವಾಗಿದೆ ಮತ್ತು ಬುದ್ಧಿವಂತಿಕೆಯು ಈ ನಿಜವಾದ ಜ್ಞಾನದಲ್ಲಿ ಒಬ್ಬ ವ್ಯಕ್ತಿಯು ಸಾಧಿಸುವ ಸ್ಥಿತಿಯಾಗಿದೆ. ಅವರು ಇಲ್ಲಿ ಹೇಳುತ್ತಾರೆ: ವಿವೇಕವು ಸುಳ್ಳು

ತೋರಿಕೆಗಳ ಮುಸುಕಿನ ಹಿಂದೆ ನೋಡುತ್ತದೆ ಮತ್ತು ಅದರ ಹಿಂದಿರುವ ವಾಸ್ತವತೆಯನ್ನು ಕಾಣುತ್ತದೆ. ಒಬ್ಬರು ಮೇಲ್ನೋಟಕ್ಕೆ, ಬಾಹ್ಯ ಜ್ಞಾನದಿಂದ ಏನನ್ನಾದರೂ ವ್ಯಾಖ್ಯಾನಿಸಿದಾಗ, ಅದು ಯಾವಾಗಲೂ ಬೇರೆಯದಕ್ಕೆ ವಿರುದ್ಧವಾಗಿರುತ್ತದೆ ಎಂದು ಶ್ರೀ ಅರವಿಂದರು ಒತ್ತಿ ಹೇಳುತ್ತಾರೆ; ಒಬ್ಬನು ನೋಡುವ, ಅನುಭವಿಸುವ, ಸ್ಪರ್ಶಿಸುವ–ಮತ್ತು ಅರ್ಥವಾಗದಿರುವುದನ್ನು ಯಾವಾಗಲೂ ವಿಭಿನ್ನತೆಯ ಮೂಲಕ ವಿವರಿಸುತ್ತಾರೆ.

ಕಾರಣವು ಯಾವಾಗಲೂ ಒಂದು ವಿಷಯವನ್ನು ಇನ್ನೊಂದರ ವಿರುದ್ಧ ವಿನ್ಯಾಸಗೊಳಿಸುತ್ತದೆ ಮತ್ತು ಆಯ್ಕೆ ಮಾಡಲು ನಿಮ್ಮನ್ನು ಒತ್ತಾಯಿಸುತ್ತದೆ. ಆಲೋಚನೆ ಮತ್ತು ಕಾರಣ ಸ್ಪಷ್ಟವಾಗಿರುವ ಜನರು ವಸ್ತುಗಳ ನಡುವಿನ ಎಲ್ಲಾ ವ್ಯತ್ಯಾಸಗಳನ್ನು ಕಾಣುತ್ತಾರೆ. ಕಾರಣವು ವ್ಯತ್ಯಾಸಗಳ ಮೂಲಕ ಮಾತ್ರ ಕಾರ್ಯನಿರ್ವಹಿಸುತ್ತದೆ ಎಂಬುದು ಗಮನಾರ್ಹವಾಗಿದೆ; ಏಕೆಂದರೆ, ನಾವು ಇದರ ಹಾಗೂ ಅದರ ನಡುವಿನ, ಒಂದು ಕ್ರಿಯೆ ಮತ್ತು ಇನ್ನೊಂದು ಕ್ರಿಯೆಯ, ಒಂದು ವಸ್ತು ಮತ್ತು ಇನ್ನೊಂದರ ನಡುವಿನ ವ್ಯತ್ಯಾಸವನ್ನು ಒಬ್ಬರು ಗ್ರಹಿಸುವುದರಿಂದ ಒಬ್ಬರು ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ ಮತ್ತು ಆ ಕಾರಣವು ಕಾರ್ಯನಿರ್ವಹಿಸುತ್ತದೆ.

ಆದರೆ ಇದು ನಿಖರವಾಗಿ ನಿಜವಾದ ಜ್ಞಾನವಾಗಿದೆ, ಅಸ್ಮಿತೆಯ ಜ್ಞಾನ ಮತ್ತು ಅದರಿಂದ ಉಂಟಾಗುವ ಬುದ್ಧಿವಂತಿಕೆಯು ಯಾವಾಗಲೂ ಎಲ್ಲಾ ಸ್ಪಷ್ಟ ವಿರೋಧಾತ್ಮಕವಾದ ವಿಷಯಗಳು ಸಮನ್ವಯಗೊಳ್ಳುವ, ಪರಸ್ಪರ ಪೂರಕವಾಗಿ, ಸಂಪೂರ್ಣವಾಗಿ ಸುಸಂಬದ್ಧವಾದ, ಸಮನ್ವಯವಾದ ಸಂಪೂರ್ಣತೆಯನ್ನು ರೂಪಿಸುವ ಹಂತವನ್ನು ನೋಡುತ್ತದೆ. ಮತ್ತು ಸ್ವಾಭಾವಿಕವಾಗಿ ಅದು ದೃಷ್ಟಿಕೋನ, ಗ್ರಹಿಕೆ ಮತ್ತು ಕ್ರಿಯೆಯಲ್ಲಿನ ಪರಿಣಾಮಗಳನ್ನು ಸಂಪೂರ್ಣವಾಗಿ ಬದಲಾಯಿಸುತ್ತದೆ.

ಮೊದಲ ಸಂಪೂರ್ಣ ಅನಿವಾರ್ಯ ಹಂತವೆಂದರೆ, ಹೆಚ್ಚು ಕಡಿಮೆ ಯಾಂತ್ರಿಕವಾಗಿ ಮತ್ತು ನೀವು ಏನು ಹೇಳುತ್ತಿದ್ದೀರಿ ಎನ್ನುವುದನ್ನು ತಿಳಿಯದೆ, "ತೋರಿಕೆಗಳು ಸುಳ್ಳು" ಎಂದು ಹೇಳುವುದು ಪುನರಾವರ್ತನೆಯಾಗಬಾರದು. ನೀವು ಅದನ್ನು ಹೇಳುವಿರಿ, ಏಕೆಂದರೆ ಶ್ರೀ ಅರವಿಂದರು ನಮಗೆ ಹಾಗೆ ಹೇಳಿದ್ದರಿಂದ – ಆದರೆ ಅದನ್ನು ನಿಜವಾಗಿಯೂ ಅರ್ಥಮಾಡಿಕೊಳ್ಳದೆ. ಆದಾಗ್ಯೂ, ನೀವು ಏನನ್ನಾದರೂ ಅರ್ಥಮಾಡಿಕೊಳ್ಳಲು ಬಯಸಿದಾಗ, ನೀವು

ನೋಡುವುದನ್ನು, ಗಮನಿಸುವುದನ್ನು, ಸ್ಪರ್ಶಿಸಲು, ರುಚಿ ನೋಡಲು ಮತ್ತು ಅನುಭವಿಸುವುದನ್ನು ಮುಂದುವರೆಸುತ್ತೀರಿ, ಏಕೆಂದರೆ ಗಮನಿಸುವ ಬೇರೆ ಯಾವುದೇ ವಿಧಾನಗಳಿಲ್ಲ ಎನ್ನುವುದನ್ನು ನೀವು ನಂಬುತ್ತೀರಿ. ನೀವು "ಪ್ರಜ್ಞೆಯ ಹಿಮ್ಮುಖ"ದ ಅನುಭವವನ್ನು ಹೊಂದಿದ್ದಾಗ ಮಾತ್ರ, ನೀವು ಈ ವಿಷಯಗಳ ಹಿಂದೆ ಹೋದಾಗ, ನೀವು ಭಾವಿಸಿದಾಗ, ಅನುಭವಿಸಿದಾಗ, ಅತ್ಯಂತ ನಿಶ್ಚಿತ ರೀತಿಯಲ್ಲಿ, ಅವುಗಳ ಭ್ರಮೆಯ ತೋರಿಕೆಯನ್ನು ನೀವು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಆದರೆ, ನೀವು ಅನುಭವವನ್ನು ಹೊಂದಿಲ್ಲದ ಹೊರತು, ನೀವು ಎಲ್ಲಾ ಸೂಕ್ತಿಗಳನ್ನು ಓದಬಹುದು, ಪುನರಾವರ್ತಿಸಬಹುದು ಮತ್ತು ಅವುಗಳನ್ನು ಕಲಿಯಬಹುದು, ಅವುಗಳಲ್ಲಿ ನಂಬಿಕೆಯನ್ನು ಹೊಂದಿರಬಹುದು ಮತ್ತು ಇನ್ನೂ ಗ್ರಹಿಸಲು ಆಗದೇ ಇರಬಹುದು: ಅವುಗಳು ನಿಮಗಾಗಿ ಯಾವುದೇ ವಾಸ್ತವತೆಯನ್ನು ಹೊಂದಿಲ್ಲ. ಈ ಎಲ್ಲಾ ತೋರಿಕೆಗಳು ಹೊರಗಿನ ಪ್ರಪಂಚದೊಂದಿಗೆ ಸಂಪರ್ಕಕ್ಕೆ ಬರಲು ಮತ್ತು ಅದು ಏನೆಂದು ಅರಿವನ್ನು ಹೊಂದುವ ಏಕೈಕ ಮಾರ್ಗವಾಗಿ ಉಳಿಯುತ್ತವೆ. ಮತ್ತು ಕೆಲವೊಮ್ಮೆ ನೀವು ಎಲ್ಲವನ್ನೂ ವಿವರವಾಗಿ ಗಮನಿಸಿದಾಗ ಮತ್ತು ನೀವು ಗಮನಿಸಿದ ಅಥವಾ ಕಲಿತ ಎಲ್ಲವನ್ನೂ ನೆನಪಿನಲ್ಲಿಟ್ಟುಕೊಂಡಾಗ, ವಿಷಯಗಳು ಅವುಗಳ ತೋರಿಕೆಯಲ್ಲಿ ಹೇಗೆ ಇರುತ್ತವೆ ಎಂಬುದನ್ನು ಕಲಿಯಲು ಇಡೀ ಜೀವಿತಾವಧಿಯನ್ನು ಕಳೆಯಬಹುದು ಮತ್ತು ಬಹಳ ಸುಸಂಸ್ಕೃತ, ಅತ್ಯಂತ ಬುದ್ಧಿವಂತ, ಹೆಚ್ಚು ಜ್ಞಾನವುಳ್ಳವರೆಂದು ಪರಿಗಣಿಸಬಹುದು.

ನಿಷ್ಠುರವಾಗಿ ಹೇಳುವುದಾದರೆ, ನೀವು ಕಷ್ಟಪಟ್ಟು ಕೆಲಸ ಮಾಡಿದಾಗ, ಈ ತೋರಿಕೆಗಳ ಮೇಲೆ ಸ್ವಲ್ಪ ಪರಿಣಾಮ ಬೀರಬಹುದು, ಅವುಗಳನ್ನು ಸ್ವಲ್ಪ ಬದಲಾಯಿಸಬಹುದು – ಈ ರೀತಿಯಾಗಿ ವಿಜ್ಞಾನದ ಮೂಲಕ ನೀವು ಭೌತ ವಸ್ತುವನ್ನು ಕುಶಲತೆಯಿಂದ ಕಲಿಯುತ್ತೀರಿ – ಆದರೆ ಅಲ್ಲಿ ನಿಜವಾದ ಬದಲಾವಣೆ ಇಲ್ಲ ಮತ್ತು ನಿಜವಾದ ಪ್ರಭಾವವಿಲ್ಲ. ಮತ್ತು ನೀವು ಆ ಸ್ಥಿತಿಯಲ್ಲಿರುವಾಗ, ನಿಮ್ಮ ಸ್ವಭಾವವನ್ನು ಬದಲಾಯಿಸಲು ನೀವು ಏನನ್ನೂ ಮಾಡಲಾರಿರಿ ಎನ್ನುವ ಸಂಗತಿಯನ್ನು ನೀವು ಸಂಪೂರ್ಣವಾಗಿ ಮನವರಿಕೆ ಮಾಡಿಕೊಳ್ಳುತ್ತೀರಿ. ನಿಮ್ಮ ಮೌಲ್ಯವನ್ನು ಕುಂದಿಸುವ ಒಂದು ರೀತಿಯ ಮಾರಣಾಂತಿಕವಾದ ಬಲೆಯಲ್ಲಿ ನೀವು ಸಿಲುಕಿರುವಿರೆಂದು ನಿಮಗನ್ನಿಸುವುದು, ಅದು ಹೇಗೆ ಅಥವಾ ಎಲ್ಲಿಂದ ಬಂತು ಅಂತ ನಿಮಗೆ ಗೊತ್ತಿಲ್ಲ; ಇಂತಹ ಸ್ಥಳದಲ್ಲಿ, ಇಂತಹ ಪರಿಸರದಲ್ಲಿ, ಇಂತಹ

ಚಾರಿತ್ರ್ಯದೊಂದಿಗೆ ನೀವು ಹೀಗೆ ಈ ರೀತಿಯಾಗಿ ಜನ್ಮ ತಾಳಿರುವಿರಿ, ಎಷ್ಟು ಸಾಧ್ಯವೋ ಅಷ್ಟು ಉತ್ತಮವಾದ ಜೀವನವನ್ನು ನೀವು ಹೊಂದುವಿರಿ, ಜೀವನದ ಸಂಗತಿಗಳ ಮೇಲೆ ಹೆಚ್ಚು ಪ್ರಭಾವ ಬೀರದೆ ಅವುಗಳೊಂದಿಗೆ ಹೊಂದಿಕೊಳ್ಳುವಿರಿ, ಮತ್ತು ನಿಮ್ಮ ಸ್ವಂತ ಚಾರಿತ್ರ್ಯದ ಕೊರತೆಗಳನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತೀರಿ, ಆದರೆ ಅವುಗಳನ್ನು ಮಾರ್ಪಡಿಸುವ ಸಾಮರ್ಥ್ಯವನ್ನು ನೀವು ಹೊಂದಿರುವುದಿಲ್ಲ. ನೀವು ಬಲೆಯಲ್ಲಿ ಸಿಕ್ಕಿಹಾಕಿಕೊಂಡಿದ್ದೀರಿ, ನಿಮಗೆ ತಿಳಿಯದ ಯಾವುದೋ ಒಂದು ಸಂಗತಿಯ ಗುಲಾಮರಾಗಿದ್ದೀರಿ ಎಂದು ನಿಮಗನ್ನಿಸುತ್ತದೆ. ನೀವು ಸಂದರ್ಭಗಳ, ಅಪರಿಚಿತ ಶಕ್ತಿಗಳ, ನೀವು ನಿವೇದಿಸಿಕೊಳ್ಳದ ಇಚ್ಛೆಯ ಆಟದ ವಸ್ತುವಾಗಿದ್ದೀರಿ, ಆದರೆ ಅದು ನಿಮ್ಮನ್ನು ಕಟ್ಟಿಹಾಕುತ್ತದೆ. ಅತ್ಯಂತ ಬಂಡಾಯಗಾರರೂ ಕೂಡ ಗುಲಾಮರಾಗಿರುತ್ತಾರೆ, ಯಾಕೆಂದರೆ ನಿಮ್ಮನ್ನ ಮುಕ್ತಗೊಳಿಸುವಂಥ ಏಕೈಕ ವಿಷಯವು ಪರದೆಯ ಹಿಂದೆ ಹಾದುಹೋಗುವ ಮತ್ತು ಅದರ ಆಚೆಗೆ ಏನಿದೆ ಎಂಬುದನ್ನು ಕಂಡುಹಿಡಿಯುದಾಗಿದೆ. ಒಮ್ಮೆ ನೀವು ನೋಡಿದ ನಂತರ, ನೀವು ಯಾರೆಂದು ನಿಮಗೆ ತಿಳಿಯುತ್ತದೆ ಮತ್ತು ಒಮ್ಮೆ ನೀವು ನಿಮ್ಮ ನಿಜವಾದ ಗುರುತನ್ನು ಪುಷ್ಟೀಕರಿಸಿದ ನಂತರ, ನಿಜವಾದ ಪರಿವರ್ತನೆಗೆ ಕೀಲಿಕೈ ನಿಮ್ಮ ಬಳಿ ಇರುತ್ತದೆ.

ನಾವು ಓದುತ್ತೇವೆ, ನಾವು ಅರ್ಥಮಾಡಿಕೊಳ್ಳಲು ಪ್ರಯತ್ನಮಾಡುತ್ತೇವೆ, ನಾವು ವಿವರಿಸುತ್ತೇವೆ, ನಾವು ತಿಳಿದುಕೊಳ್ಳಲು ಪ್ರಯತ್ನಿಸುತ್ತೇವೆ. ಆದರೆ ಒಂದು ನಿಮಿಷದ ನೈಜ ಅನುಭವವು ಲಕ್ಷಾಂತರ ಪದಗಳನ್ನು ಮತ್ತು ನೂರಾರು ವಿವರಣೆಗಳನ್ನು ನಮಗೆ ಕಲಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/17–19**

**ಪರಮಾತ್ಮನ ಬುದ್ಧಿವಂತಿಕೆ**

ಮೊದಲ ಪ್ರಶ್ನೆ: "ಅನುಭವವನ್ನು ಹೊಂದುವುದು ಹೇಗೆ?"

ನಿಮ್ಮಂತರಂಗವನ್ನು ಪ್ರವೇಶಿಸುವುದು ಮೊದಲ ಹೆಜ್ಜೆಯಾಗಿದೆ.

ಮತ್ತು, ಒಮ್ಮೆ ನೀವು ನಿಮ್ಮೊಳಗೆ ಆಳವಾಗಿ ಹೋಗುವಲ್ಲಿ ಸಫಲವಾದ ಮೇಲೆ ನಿಮ್ಮೊಳಗಿರುವಂಥ ಆ ಸತ್ಯವನ್ನು ಅನುಭವಿಸುವುದು, ಹಂತ ಹಂತವಾಗಿ,

ವ್ಯವಸ್ಥಿತವಾಗಿ ನಿಮ್ಮನ್ನು ನೀವು ವಿಸ್ತಾರಗೊಳಿಸಿಕೊಳ್ಳುವುದು, ಬ್ರಹ್ಮಾಂಡದಷ್ಟು ವಿಶಾಲವಾಗುವುದು ಮತ್ತು ಇತಿಮಿತಿಯ ಪ್ರಜ್ಞೆಯನ್ನು ಕಳೆದುಕೊಳ್ಳುವುದು.

ಇವು ಮೊದಲ ಎರಡು ಪೂರ್ವ ಸಿದ್ಧತಾ ಕ್ರಿಯೆಗಳಾಗಿವೆ.

ಮತ್ತು ಈ ಎರಡು ಕೆಲಸಗಳನ್ನು ಸಾಧ್ಯವಾದಷ್ಟು ಸ್ಥಿರತೆಯಿಂದ, ಶಾಂತಿಯಿಂದ ಮತ್ತು ನೆಮ್ಮದಿಯಿಂದ ಮಾಡಬೇಕು. ಈ ಶಾಂತಿ, ಈ ನೆಮ್ಮದಿಯು ಮನಸ್ಸಿನಲ್ಲಿ ಮೌನವನ್ನು ಮತ್ತು ಪ್ರಾಣದಲ್ಲಿ ನಿಶ್ಚಲತೆಯನ್ನು ತರುತ್ತದೆ.

ಈ ಯತ್ನ, ಈ ಪ್ರಯತ್ನವನ್ನು ಬಹಳ ನಿಯಮಿತವಾಗಿ, ನಿರಂತರವಾಗಿ ಮುಂದುವರೆಸಬೇಕು. ಮತ್ತು ಸಮಯದ ಒಂದು ನಿರ್ದಿಷ್ಟ ಅವಧಿಯ ನಂತರ, ಅದು ಹೆಚ್ಚು ಅಥವಾ ಕಡಿಮೆ ಇರಬಹುದು, ನೀವು ಸಾಮಾನ್ಯ, ಬಾಹ್ಯ ಪ್ರಜ್ಞೆಯಲ್ಲಿ ಗ್ರಹಿಸಿದ ವಾಸ್ತವಕ್ಕಿಂತ ಭಿನ್ನವಾದ ಸತ್ಯವನ್ನು ಗ್ರಹಿಸಲು ಪ್ರಾರಂಭಿಸುವಿರಿ.

ಸ್ವಾಭಾವಿಕವಾಗಿ, ಅನುಗ್ರಹದಿಂದ, ಮುಸುಕನ್ನು ಒಳಗಿನಿಂದ ಇದ್ದಕ್ಕಿದ್ದಂತೆ ಹರಿದು ಹಾಕಬಹುದು, ಮತ್ತು ನೇರವಾಗಿ ನೀವು ನೈಜ ಸತ್ಯವನ್ನು ಪ್ರವೇಶಿಸಬಹುದು; ಆದರೆ ಅದು ಸಂಭವಿಸಿದಾಗಲೂ ಕೂಡ, ಅನುಭವದ ಸಂಪೂರ್ಣ ಮೌಲ್ಯ ಮತ್ತು ಸಂಪೂರ್ಣ ಪರಿಣಾಮವನ್ನು ಪಡೆಯಲು, ನೀವು ಆಂತರಿಕ ಗ್ರಹಿಕೆಯ ಸ್ಥಿತಿಯಲ್ಲಿ ನಿಮ್ಮನ್ನು ಕಾಪಾಡಿಕೊಳ್ಳಬೇಕು ಮತ್ತು ಅದನ್ನು ಮಾಡಲು, ಪ್ರತಿ ದಿನವೂ ನೀವು ನಿಮ್ಮ ಅಂತರಂಗದೊಳಗೆ ಹೋಗುವುದು ಅನಿವಾರ್ಯವಾಗಿದೆ.

*

ನಾಸ್ತಿಕರೂ ಸಹ, ಈಗ ಸೃಷ್ಟಿಯು ಅದರ ಸ್ವಭಾವದಲ್ಲಿಯೇ ವಿಕಸನವು ಊಹಿಸುವಂಥ ಕೆಲವು ಅನಂತ ಮತ್ತು ಪ್ರಬಲ ಉದ್ದೇಶದ ಕಡೆಗೆ ಸಾಗುತ್ತಿರುವುದನ್ನು ನೋಡಲು ಸಾಧ್ಯವಾಗುತ್ತದೆ. ಆದರೆ ಅನಂತ ಉದ್ದೇಶ ಮತ್ತು ನೆರವೇರಿಕೆಯು, ಅಣಿಗೊಳಿಸುವ, ದಾರಿ ತೋರುವ, ರೂಪ ಕೊಡುವ, ರಕ್ಷಿಸುವ ಮತ್ತು ಸಮರ್ಥಿಸುವಂಥ ಅನಂತ ಬುದ್ಧಿವಂತಿಕೆಯನ್ನು ಮೊದಲೇ ಊಹಿಸುತ್ತದೆ. ಆ ಬುದ್ಧಿವಂತಿಕೆಯನ್ನು ಪ್ರೀತಿ ಗೌರವಗಳಿಂದ ಕಾಣು ಮತ್ತು ಅದನ್ನು ದೇವಾಲಯದಲ್ಲಿ ಧೂಪ ದ್ರವ್ಯದಿಂದ ಪೂಜಿಸದಿದ್ದರೂ ನಿನ್ನಾತ್ಮದಲ್ಲಿ ಪೂಜಿಸು, ನೀನು ಅದಕ್ಕೆ ಅನಂತ ಪ್ರೇಮದ ಹೃದಯ ಹಾಗೂ ಅನಂತ ಸ್ವಯಂಪ್ರಕಾಶಿಸುವ ಮನಸ್ಸನ್ನು ನಿರಾಕರಿಸಿದರೂ ಸಹ. ಆಗ ಅದು ನಿನಗೆ ಗೊತ್ತಿಲ್ಲದಿದ್ದರೂ ಸಹ

ನೀನು ಅತ್ಯಂತ ಪೂಜನೀಯ ಎಂದು ಭಾವಿಸುವ ಮತ್ತು ಅತಿಯಾಗಿ ಪೂಜಿಸುವವನು ಕೃಷ್ಣನೇ ಆಗಿದ್ದಾನೆ.

ಪದಗಳನ್ನು ಮೀರಿ, ಆಲೋಚನೆಗಳನ್ನು ಮೀರಿ, ಸರ್ವೋಚ್ಚ ಅಸ್ತಿತ್ವವು ತನ್ನನ್ನು ತಾನೇ ಅನುಭವಿಸುವಂತೆ ಮಾಡುತ್ತದೆ ಮತ್ತು ನಮ್ಮ ವಿಸ್ಮಯವನ್ನು ಪ್ರೇರೇಪಿಸುತ್ತದೆ.

ಮಿತಿಗೊಳಿಸುವ ಮತ್ತು ವಿರೂಪಗೊಳಿಸುವ ಎಲ್ಲಾ ಮಾನಸಿಕ ರಚನೆಗಳ ಬಗ್ಗೆ ಎಚ್ಚರದಿಂದ ಇರೋಣ. ಸಂಬಂಧವನ್ನು ಶುದ್ಧವಾಗಿಡಲು ಪ್ರಯತ್ನಿಸೋಣ.

*

ಇರುವುದೊಂದೇ ನಿಜವಾದ ವಿವೇಕ, ಪರಮಾತ್ಮನ ವಿವೇಕ. ಹೀಗಾಗಿ, ಎಲ್ಲಾ ವೈಯಕ್ತಿಕ ಇಚ್ಛೆಯನ್ನು ಬಿಟ್ಟುಕೊಡುವುದು ಮತ್ತು ಪರಮಾತ್ಮನು ಬಯಸಿದ್ದನ್ನು ಮಾತ್ರ ಬಯಸುವುದು ನಿಜವಾದ ಬುದ್ಧಿವಂತರಾಗಲು ಏಕೈಕ ಮಾರ್ಗವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/349–50**

## ಜ್ಞಾನ ಮತ್ತು ವಿವೇಕ

ಮನುಷ್ಯನಲ್ಲಿ ಎರಡು ಸಂಬಂಧಿತ ಸಾಮರ್ಥ್ಯಗಳಿವೆ; ಜ್ಞಾನ ಮತ್ತು ವಿವೇಕ. ಜ್ಞಾನವೆಂದರೆ ಮನಸ್ಸಿನ ಮೂಲಕ ನೋಡಿದಾಗ ತಿರುಚಿದ ಮಾಧ್ಯಮದಲ್ಲಿ ಕಾಣುವ ಸತ್ಯದ ಹಾಗೆ, ದಿವ್ಯ ದೃಷ್ಟಿಯ ಕಣ್ಣು ಚೇತನದಲ್ಲಿ ಏನನ್ನು ಕಾಣುತ್ತದೆಯೋ ಅದು ವಿವೇಕ.

*

ಸ್ಫೂರ್ತಿಯು, ವಿಶಾಲ ಹಾಗೂ ಅನಂತ ಜ್ಞಾನದದಿಂದ ಚಿಮ್ಮುವ ಕ್ಷೀಣ ಹರಿವಾಗಿದೆ, ಕಾರಣವು ಇಂದ್ರಿಯಗಳ ಜ್ಞಾನವನ್ನು ಮೀರುವುದಕ್ಕಿಂತ ಅದು ಕಾರಣವನ್ನು ಹೆಚ್ಚು ಪರಿಪೂರ್ಣವಾಗಿ ಮೀರುತ್ತದೆ.

*

ನಾನು ಮಾತನಾಡುವಾಗ, ಕಾರಣವು ಹೇಳುತ್ತದೆ, “ನಾನು ಇದನ್ನು ಹೇಳುತ್ತೇನೆ”; ಆದರೆ ನಾನು ಹೇಳಬೇಕಾಗಿದ್ದನ್ನು ದೇವರು ನನ್ನ ಬಾಯಿಯಿಂದ

ತೆಗೆದುಕೊಳ್ಳುತ್ತಾನೆ ಮತ್ತು ತುಟಿಗಳು ಬೇರೆ ಏನನ್ನೋ ಹೇಳುತ್ತವೆ, ಅದಕ್ಕೆ ಕಾರಣವು ಕಂಪಿಸುತ್ತದೆ.

ನಾನು ಜ್ಞಾನಿಯಲ್ಲ, ಏಕೆಂದರೆ ದೇವರು ತನ್ನ ಕಾರ್ಯಕ್ಕಾಗಿ ನನಗೆ ನೀಡಿದ ಜ್ಞಾನ ಹೊರತುಪಡಿಸಿ ನನಗೆ ಬೇರೆ ಯಾವುದೇ ಜ್ಞಾನವಿಲ್ಲ. ನಾನು ನೋಡಿದ್ದು ಕಾರಣವೋ ಅಥವಾ ಮೂರ್ಖತನವೋ ಅಂತಾ ನಾನು ಹೇಗೆ ತಿಳಿಯುವುದು? ಇಲ್ಲ, ಅದು ಯಾವುದೂ ಅಲ್ಲ; ಏಕೆಂದರೆ ನೋಡಿದ ವಿಷಯ ಸರಳವಾಗಿದೆ ಮತ್ತು ಕಾರಣವೂ ಅಲ್ಲ ಅಥವಾ ಮೂರ್ಖತನವೂ ಅಲ್ಲ.

*

ಮನುಷ್ಯನು ಒಂದು ಕ್ಷಣದ ಅನುಭವದಲ್ಲಿ ನೋಡಲು ಸಾಧ್ಯವಾದರೆ, ನಮ್ಮ ಪ್ರಾಣಿ ವಿಕಸನವು ಇನ್ನೂ ಜಯಿಸಲಾಗದ ಪ್ರದೇಶಗಳಲ್ಲಿ ನಮಗಾಗಿ ಕಾಯುತ್ತಿರುವ ಅನಂತ ಉಲ್ಲಾಸಗಳನ್ನು, ಪರಿಪೂರ್ಣ ಶಕ್ತಿಗಳನ್ನು, ಸ್ವಪ್ರಚೋದಿತ ಜ್ಞಾನದ ಕಾಂತಿಯುತವಾದ ಕ್ಷೇತ್ರಗಳನ್ನು, ನಮ್ಮ ಇರುವಿಕೆಯ ವಿಶಾಲ ಪ್ರಶಾಂತತೆಗಳನ್ನು ನೋಡಿದರೆ, ಅವರು ಎಲ್ಲವನ್ನೂ ಬಿಟ್ಟುಬಿಡುತ್ತಾರೆ ಮತ್ತು ಈ ಸಂಪತ್ತನ್ನು(ನಿಧಿ) ಪಡೆಯುವವರೆಗೂ ವಿಶ್ರಮಿಸುವುದಿಲ್ಲ. ಆದರೆ ದಾರಿ ಕಿರಿದಾಗಿದೆ, ಬಾಗಿಲುಗಳು ತೆರೆಯುವುದು ಕಷ್ಟ, ಮತ್ತು ಹೆದರಿಕೆ, ಅಪನಂಬಿಕೆ ಹಾಗೂ ಸಂದೇಹಗಳು ಅಲ್ಲಿವೆ, ಪ್ರಕೃತಿಯ ಪಹರೆಗಳು ನಮ್ಮ ಪಾದಗಳನ್ನು ಅವಳ ಸಾಮಾನ್ಯ ಹುಲ್ಲುಗಾವಲುಗಳಿಂದ ದೂರವಿಡಲು ಬಿಡುವುದಿಲ್ಲ.

*

ಕಾರಣವು ಸತ್ತಾಗ, ಬುದ್ಧಿವಂತಿಕೆಯು ಹುಟ್ಟಿತು ಎಂದು ನಾನು ತಡವಾಗಿ ಅರಿತುಕೊಂಡೆ; ಆ ವಿಮೋಚನೆಯ ಮೊದಲು, ನಾನು ಕೇವಲ ಜ್ಞಾನವನ್ನು ಹೊಂದಿದ್ದೆ.

*

ಮನುಷ್ಯರು ಯಾವುದನ್ನು ಜ್ಞಾನವೆಂದು ಕರೆಯುತ್ತಾರೋ, ಅದು ತಪ್ಪು ತೋರಿಕೆಗಳ ತರ್ಕಬದ್ಧ ಒಪ್ಪಿಕೊಳ್ಳುವಿಕೆಯಾಗಿದೆ. ವಿವೇಕವು ಮುಸುಕಿನ ಹಿಂದೆ ನೋಡುತ್ತದೆ ಮತ್ತು ಕಾಣುತ್ತದೆ.

*

ಕಾರಣವು ವಿಭಾಗಿಸುತ್ತದೆ, ವಿವರಗಳನ್ನು ಗೊತ್ತುಪಡಿಸುತ್ತದೆ ಮತ್ತು ಅವುಗಳನ್ನು ವ್ಯತಿರಿಕ್ತಗೊಳಿಸುತ್ತದೆ; ವಿವೇಕವು ಒಂದುಗೂಡಿಸುತ್ತದೆ, ವ್ಯತಿರಿಕ್ತಗಳನ್ನು ಸಾಮರಸ್ಯದಲ್ಲಿ ಒಂದಾಗಿಸುತ್ತದೆ.

*

ಒಂದೋ ನಿಮ್ಮ ನಂಬಿಕೆಗಳಿಗೆ ಜ್ಞಾನದ ಹೆಸರನ್ನು ನೀಡಬೇಡಿ ಮತ್ತು ಇತರರ ನಂಬಿಕೆಗಳಿಗೆ ದೋಷ, ಅಜ್ಞಾನ ಅಥವಾ ಅಳಲೇಕಾಯಿ ಪಾಂಡಿತ್ಯವನ್ನು ನೀಡಬೇಡಿ ಅಥವಾ ಪಂಥಗಳ ಸಿದ್ಧಾಂತ ಮತ್ತು ಅವರ ಅಸಹಿಷ್ಣುತೆಗೆ ಧಕ್ಕೆ ತರಬೇಡಿ.

*

ಆತ್ಮವು ಏನನ್ನು ನೋಡುತ್ತದೆ ಮತ್ತು ಅನುಭವಿಸಿದೆ, ಎನ್ನುವುದು ಅದಕ್ಕೆ ತಿಳಿದಿದೆ; ಉಳಿದದ್ದು ತೋರಿಕೆ, ಪೂರ್ವಾಗ್ರಹ ಮತ್ತು ಅಭಿಪ್ರಾಯವಾಗಿದೆ.

*

ನನ್ನ ಆತ್ಮಕ್ಕೆ ತಾನು ಅಮರವೆಂದು ಗೊತ್ತು. ಆದರೆ ನೀವು ಮೃತ ದೇಹವನ್ನು ತುಂಡುತುಂಡು ಮಾಡಿ “ನಿಮ್ಮ ಆತ್ಮವೆಲ್ಲಿ ಮತ್ತು ನಿಮ್ಮ ಅಮರತ್ವವೆಲ್ಲಿ?” ಎಂದು ಕೂಗಾಡುವಿರಿ.

*

ಅಮರತ್ವವೆಂದರೆ, ಸಾವಿನ ನಂತರ ಮನೋವ್ಯಕ್ತಿತ್ವದ ಅಸ್ತಿತ್ವದಲ್ಲಿರುವಿಕೆ ಅಲ್ಲ, ಆದರೂ ಅದು ನಿಜ, ಆದರೆ ಅದು ಜನಿಸದ ಮತ್ತು ಅಚ್ಯುತ ಆತ್ಮನ ಜಾಗೃತ ಅನುಭೋಗ, ಇದರಲ್ಲಿ ದೇಹವು ಕೇವಲ ಒಂದು ಸಾಧನ ಮತ್ತು ಛಾಯೆ.

*

ಮನದಟ್ಟುಮಾಡುವ ಕಾರಣಗಳಿಂದ ದೇವರು ಇಲ್ಲವೆಂದು ಅವರು ನನಗೆ ಸಾಬೀತುಪಡಿಸಿ ತೋರಿಸಿದರು, ಮತ್ತು ನಾನು ಅದನ್ನು ನಂಬಿದೆ. ನಂತರ ನಾನು ದೇವರನ್ನು ನೋಡಿದೆ, ಏಕೆಂದರೆ ಅವನು ಬಂದು ನನ್ನನ್ನು ಅಪ್ಪಿಕೊಂಡನು. ಮತ್ತು ಈಗ ನಾನು ಯಾವುದನ್ನು ನಂಬಬೇಕು, ಇತರರ ತರ್ಕಗಳನ್ನೊ ಅಥವಾ ನನ್ನ ಸ್ವಂತ ಅನುಭವವನ್ನೊ?

*

**“**ಇವುಗಳು ಭ್ರಮೆಗಳಾಗಿವೆ**”**, ಎಂದು ಅವರು ನನಗೆ ಹೇಳಿದರು. ನಾನು ಭ್ರಮೆ ಎಂದರೇನು ಎಂದು ವಿಚಾರಿಸಿದೆ, ಅದಕ್ಕೆ ಭ್ರಮೆ ಎಂದರೆ, ಯಾವುದೇ ವಸ್ತುನಿಷ್ಠ ಅಥವಾ ಭೌತಿಕ ವಾಸ್ತವಕ್ಕೆ ಹೊಂದಿಕೆಯಾಗದ ಒಂದು ವ್ಯಕ್ತಿನಿಷ್ಠ ಅಥವಾ ಮಾನಸಿಕ ಅನುಭವ ಎನ್ನುವುದನ್ನು ಕಂಡುಕೊಂಡೆ. ನಂತರ ನಾನು ಕುಳಿತು ಮಾನವ ಕಾರಣದ ಪವಾಡಗಳ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/423–24**

## ಕಾರುಣ್ಯ (ಕರುಣೆ)

**– ಅನು: ಶ್ರೀ ಕಿಶೋರಕುಮಾರ ಕಾಸಾರ, ಕಲಬುರ್ಗಿ**

ಯಾವಾಗ ಅಸ್ತಿತ್ವದಲ್ಲಿ ಜಾಗೃತವಾಗಿರುವ ಚೈತ್ಯ ಪ್ರಜ್ಞೆಯು ಸರ್ವಶಕ್ತವಾಗಿ ಕಾರ್ಯನಿರ್ವಹಿಸುತ್ತಿರುತ್ತದೆಯೋ ಆಗ ಮಾತ್ರ ನಮ್ಮ ಸುತ್ತಮುತ್ತಲಿನ ಪ್ರಕೃತಿಯ ವಿವಿಧ ಕ್ಷೇತ್ರಗಳಲ್ಲಿ ಕರುಣೆ–ಸಹಾನುಭೂತಿಯ ಅವಶ್ಯಕತೆಯಿರುವ ವಸ್ತುವಿಷಯಗಳ ಕುರಿತಾದ ಅನುಕಂಪನಾ ಮನೋಭಾವನೆ; ಮತ್ತು ಮರ್ತ್ಯದ ಮೇಲೆ ಸದಾ ಕೃಪೆ–ಅನುಗ್ರಹವನ್ನು ಬೀರುವ ದಿವ್ಯತೆಯ ಬಗೆಗಿನ ಕೃತಜ್ಞತಾ ಮನೋಭಾವನೆಗಳು, ಅವುಗಳ ಮೂಲ ಪ್ರಕಾಶಯುತವೂ–ಪರಿಶುದ್ಧಮಾನವೂ ಆದ ರೂಪದಲ್ಲಿಯೇ ಪ್ರಕಟಗೊಳ್ಳುತ್ತವೆ. ಆ ಸಂದರ್ಭದಲ್ಲಿ ನಮ್ಮಿಂದ ಕರುಣೆ–ಅನುಕಂಪನಗಳನ್ನು ಪಡೆದುಕೊಂಡ ದ್ರವ್ಯಗಳ ಬಗೆಗೆ ಕಿಂಚಿತ್ ಭಾವನೆಯಾಗಲೀ ಅಥವಾ ನಮ್ಮ ಮೇಲೆ ಅನುಗ್ರಹ–ಆಶೀರ್ವಾದಗಳನ್ನು ಬೀರಿದ ಆ ದಿವ್ಯತೆಯ ಮುಂದೆ ಸಂಕುಚಿತ ಭಾವನೆಯಾಗಲೀ ಉದ್ಭವಿಸುವದಿಲ್ಲ.

*

ಸರ್ವಶಕ್ತವೂ–ಸರ್ವವ್ಯಾಪಿಯೂ ಆದ ಆ ದಿವ್ಯತೆಯು ಎಲ್ಲರಲ್ಲಿಯೂ ಇದೆ, ಎಲ್ಲೆಡೆಯೂ ಇದೆ. ತನ್ನದೇ ಆದ ಪರಂಧಾಮದಲ್ಲಿ ಪವಡಿಸಿದ ಆ ಪರಮಾತ್ಮನು ಸರ್ವವೇ ತಾನಾಗಿ, ಸಕಲವನ್ನೂ ತನ್ನೊಳಗೆ ಧಾರಣ ಮಾಡಿಕೊಂಡಿರುವನು. ಆದರೆ, ಪ್ರಾಪಂಚಿಕದಿಂದ ಪಾರಮಾರ್ಥಿಕದೆಡೆಗಿನ ವಿಕಸನದ ಮಾರ್ಗದಲ್ಲಿ ಅಧಿರೋಹಿಸುತ್ತಿರುವ ಈ ಭೌತಿಕದಲ್ಲಿ ಬದುಕುತ್ತಿರುವ ಮರ್ತ್ಯರು, ಆ ದಿವ್ಯತೆಯು

ಈಗ ತಮ್ಮೊಳಗೆ ಹೇಗೆ ಸುಪ್ತವಾಗಿದೆ ಎಂಬುದರ ಆಧಾರದ ಮೇಲೆ ಅಲ್ಲ, ಬದಲಿಗೆ ಆ ದಿವ್ಯತೆಯು ತನ್ನನ್ನು ಯಾವ ಔನ್ನತ್ಯದ ಆಯಾಮದೆಡೆಗೆ ಕೊಂಡೊಯ್ಯಲಿದೆ ಎಂಬುದರ ಆಧಾರದ ಮೇಲೆ ತನ್ನನ್ನು ಆ ದಿವ್ಯತೆಯೊಂದಿಗೆ ಗುರುತಿಸಿಕೊಳ್ಳಬೇಕು.

*

ಈ ಕರುಣೆಯೆಂಬುದು ದೈವೀ ಕಾರುಣ್ಯಕ್ಕೆ ('miséricorde' ಇದೊಂದು ಫ್ರೆಂಚ್ ಶಬ್ದ. ದೈವೀ ಕಾರುಣ್ಯ ಎಂದು ಅರ್ಥವಿದೆ) ಸಮನಾಗಿದೆ. ಇದರಲ್ಲಿ ತಾಪ–ಸಂಹಾರಕವಾದ ಶಕ್ತಿಯಿದೆ. ಅದರ ಜೊತೆಗೆ ದಯಾಪೂರ್ಣವಾದ ಅನುಕಂಪದ ಭಾವನೆಯೂ ಇದೆ. ಅದು ಲೋಪಗಳನ್ನು ಕ್ಷಮಿಸುವ, ತಪ್ಪುಗಳನ್ನು ತಿದ್ದುವ ಮತ್ತು ಅಪರಾಧಗಳನ್ನು ಮರೆತು ಕರುಣೆಯಿಂದ ಕೂಡಿರುವ ಮತ್ತೊಂದು ಅವಕಾಶವನ್ನು ನೀಡುವ ಹಾಗೂ ಎಲ್ಲರಿಗೂ ಒಳ್ಳೆಯದನ್ನೇ ಬಯಸುವ ಸಹಾನುಭೂತಿಯಾಗಿದೆ.

*

ಈ ದಿವ್ಯ ಕಾರುಣ್ಯವು ಚೈತ್ಯ ಪ್ರಜ್ಞೆಯ ಹಂತಕ್ಕೇರಿದಾಗ ಅದೊಂದು ಅಹಂಕಾರ–ರಹಿತವಾದ ಮತ್ತು ನಿಸ್ವಾರ್ಥ–ಹಿತವಾದ ಸಂವೇದವಾಗಿ ಪರಿವರ್ತನೆಯಾಗುತ್ತದೆ. ಈ ಹಂತವು ಚಿರಂತನವಾದ ಶೋಕದೊಳಗೆ ಮುಳುಗೇಳುತ್ತಿರುವ ಈ ಪ್ರಪಂಚದ ಕುರಿತಾಗಿ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಾ, ಈ ವಿಶ್ವದ ಉರಿತಾಪಗಳನ್ನು ತನ್ನ ಅನುಕಂಪನದ ಧಾರೆಗಳಿಂದ ತಂಪೆರೆಯುವ ಮೂಲಕ ಶಾಂತ ಭಾವವನ್ನು ಪಡೆದುಕೊಳ್ಳುವ ಕಾರ್ಯವನ್ನು ನಿರ್ವಹಿಸುತ್ತದೆ. ನಾನು 'Prayers and Meditations' ಎಂಬ ಪುಸ್ತಕದಲ್ಲಿ ಇದರ ಬಗ್ಗೆ ವಿವರಿಸಿದ್ದೇನೆ. ಅದರಲ್ಲಿ ನಾನು ನನಗಾದ ಒಂದು ಸುದೀರ್ಘವಾದ ಅನುಭವವನ್ನು ವ್ಯಕ್ತಪಡಿಸುತ್ತ, "ನಾನು ಕಂಬನಿ ಮಿಡಿದೆ, . . . .. ಅವು ನನ್ನ ಜೀವನದ ಅತ್ಯಂತ ಮಧುರವಾದ ಕಂಬನಿಗಳಾಗಿವೆ" ಎಂದು ಹೇಳಿದ್ದೇನೆ. ಏಕೆಂದರೆ, ಅಂದು ನಾನು ಕಣ್ಣೀರಾದದ್ದು ನನ್ನ ವೈಯಕ್ತಿಕದ ದುಃಖಕ್ಕಾಗಿ ಅಲ್ಲ. ಇದರ ಬಗ್ಗೆ ನಾನು ಹೆಚ್ಚಿಗೆ ಏನನ್ನೂ ಹೇಳುವುದಿಲ್ಲ. ಏಕೆಂದರೆ, ಅದರ ಬಗೆಗೆ ನಿಮಗೆ ಈಗಾಗಲೇ ತಿಳಿದಿದೆ. ಮರ್ತ್ಯರು ಸದಾ ತಮ್ಮ ವೈಯಕ್ತಿಕ ಕಾರಣಗಳಿಗಾಗಿಯೇ ಮರುಗುತ್ತಾರೆ. ಅದು ಅವರ ಮಾನವ ಸಹಜವಾದ

ಪ್ರವೃತ್ತಿಯಾಗಿದೆ. ಉದಾಹರಣೆಗೆ (ನಾನು ಇದನ್ನು ಹಲವು ಬಾರಿ ವಿವರಿಸಿದ್ದೇನೆ) ಜನರು ತಮ್ಮ ಪ್ರೀತಿಪಾತ್ರರಾದ ಯಾರನ್ನೋ ಕಳೆದುಕೊಂಡಾಗ ಅವರನ್ನು ನೆನೆದು ಕಣ್ಣೀರಿಡುತ್ತಾರೆ. ಆದರೆ, ಆ ಹಂತದಲ್ಲಿ ಶೋಕಿಸುತ್ತಿರುವವರು ತಮ್ಮಿಂದ ಅಗಲಿಹೋದವರು ಈಗ ಯಾವ ಸ್ಥಿತಿಯಲ್ಲಿದ್ದಾರೆ ಎಂಬುದನ್ನು ಅರಿತಿರುವದಿಲ್ಲ. ದೂರವಾದವರು ಈಗ ಸಂತೋಷವಾಗಿದ್ದಾರೋ, ದುಃಖದಲ್ಲಿದ್ದಾರೋ, ಯಾತನೆಯಲ್ಲಿದ್ದಾರೋ, ಅಥವಾ ಶಾಂತಿಯನ್ನು ಅನುಭವಿಸುತ್ತಿದ್ದಾರೋ ಎಂಬುದರ ಅರಿವಿರುವದಿಲ್ಲ. ಅವರು ಕೇವಲ ತಮ್ಮ ಪ್ರೀತಿಪಾತ್ರರ ಅಗಲಿಕೆಯ ವೇದನೆಯನ್ನು ಸಹಿಸಲಾರದೇ ಆಕ್ರಂದಿಸುತ್ತಿರುತ್ತಾರೆ. ಏಕೆಂದರೆ, ಅವರು ಸದಾಕಾಲ ತಮ್ಮ ಪ್ರೀತಿಪಾತ್ರರನ್ನು ತಮ್ಮ ಜೊತೆಯಲ್ಲಿಯೇ ಇರಿಸಿಕೊಳ್ಳಬೇಕೆಂದು ಬಯಸುತ್ತಿರುತ್ತಾರೆ. ಆದರೆ, ಹಠಾತ್ತನೆ ಒಂದು ದಿನ ಅವರು ತಮ್ಮನ್ನು ಬಿಟ್ಟುಹೋದುದನ್ನು ಸ್ವೀಕರಿಸುವ ಮನಸ್ಥಿತಿಯಲ್ಲಿ ಅವರು ಇರುವದಿಲ್ಲ. ಹಾಗಾಗಿ ಈ ರೀತಿಯ ದುಃಖವನ್ನು ಮರ್ತ್ಯರ ಸ್ವಾರ್ಥ ಪ್ರವೃತ್ತಿ ಎನ್ನಬಹುದು. ಈ ಪ್ರವೃತ್ತಿಯು ಪ್ರಜ್ಞಾರಹಿತವಾದ ಸ್ಥಿತಿಯಿಂದ ಕೂಡಿರಬಹುದು ಅಥವಾ ಅಲ್ಪ ಪ್ರಮಾಣದ ಪ್ರಜ್ಞೆಯಿಂದ ಉದ್ಭವಿಸಿರಬಹುದು. ಅಥವಾ ಒಮ್ಮೆಲೇ ಬಂದೊದಗಿದ ಆಘಾತವನ್ನು ಎದುರಿಸಲಾಗದೇ, ಆ ಸತ್ಯವನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲದ ಮನಸ್ಥಿತಿಯಿಂದ ರೂಪಿತವಾಗಿರಬಹುದು. ಆದರೆ, ಈ ಪ್ರವೃತ್ತಿಯು ಮರ್ತ್ಯರಲ್ಲಿ ಮೊದಲಿನಿಂದಲೂ ಇದ್ದೇ ಇದೆ. ಒಮ್ಮೊಮ್ಮೆ ಜನರು ಬೇರೆಯವರ ದುಃಖವನ್ನು ಕಂಡು ಕಣ್ಣೀರಾಗುತ್ತಾರೆ. ಏಕೆಂದರೆ, ಆ ಸಂದರ್ಭದಲ್ಲಿ ಅವರು ಬೇರೊಬ್ಬರ ದುಃಖದಲ್ಲಿ ತಮ್ಮ ದುಃಖವನ್ನು ಕಂಡುಕೊಂಡಿರುತ್ತಾರೆ. ಯಾವಾಗ ಇಂತಹ 'ಸ್ವಾರ್ಥ ಕಾರುಣ್ಯ' ದುಃಖದ ಒಳಗೆ ಚೈತ್ಯ ದುಃಖವು ಬೆರೆಯುತ್ತದೆಯೋ ಆಗ ಆ ಅಸ್ತಿತ್ವದೊಳಗೆ 'ವಿಲೋಮ ಕಾರುಣ್ಯ'ವೆಂಬ ಸ್ಥಿತಿಯ ಅವಿರ್ಭಾವವಾಗುತ್ತದೆ. (ಇದನ್ನೇ ನಾನು ಈ ಮುಂಚೆ ವಿವರಿಸಲು ಪ್ರಯತ್ನಿಸಿದ್ದೆ) ಪ್ರತಿಯೋರ್ವರೂ ಈ 'ಸ್ವಾರ್ಥ ಕಾರುಣ್ಯ' ಮತ್ತು 'ವಿಲೋಮ ಕಾರುಣ್ಯ'ಗಳೆರಡನ್ನೂ ಬೇರ್ಪಡಿಸಿ, ಧ್ಯಾನಿಸಬೇಕು, ಹೃದ್ಗತಗೊಳಿಸಿಕೊಳ್ಳಬೇಕು. ಆಗ ವ್ಯಕ್ತಿಗತರು ತಮ್ಮ ಅಹಮಿಕೆಯಿಂದ ಹೊರಬಂದು 'ವಿಲೋಮ ಕಾರುಣ್ಯ'ದೊಡನೆ ತಾದಾತ್ಮ್ಯವನ್ನು ಹೊಂದಲು ಸಾಧ್ಯವಾಗುತ್ತದೆ. ಆ ಮೂಲಕ ಅವರು 'ವೈಶ್ವಿಕ ಕಾರುಣ್ಯ'ದ ಸಂಪರ್ಕಕ್ಕೆ ಒಳಗಾಗಬಹುದು. ಆ 'ವೈಶ್ವಿಕ ಕಾರುಣ್ಯ'ವು ಅಪಾರವೂ, ವಿಶಾಲವೂ, ಶಾಂತವೂ,

ಶಕ್ತಿಯುತವೂ, ಆಳವೂ ಆಗಿದ್ದು ಅದು ಪರಿಪೂರ್ಣ ಶಾಂತಿಯಿಂದಲೂ, ಅನಂತ ಮಾಧುರ್ಯದಿಂದಲೂ ತುಂಬಿ ತುಳುಕುತ್ತಿರುತ್ತದೆ. ಇದನ್ನೂ ಇನ್ನಷ್ಟು ಅರ್ಥವಾಗುವಂತೆ ಹೇಳುವದಾದರೇ, ಮಾನವನು ತನ್ನ ದುಃಖದ ಆಳಕ್ಕೆ ಇಳಿಯುವ ವಿಧಾನವನ್ನು ಅರಿತಿದ್ದೇ ಆದರೆ, ಅದರ ಹೃದಯ ಭಾಗಕ್ಕೆ ಇಳಿದು, ಅದಕ್ಕೂ ನಿರಾಳದಲ್ಲಿರುವ ಸ್ವಾರ್ಥ–ಅಹಮಿಕೆಯ ಸ್ತರಗಳನ್ನೂ ಮೀರಿ ಮತ್ತಷ್ಟು ಕೂಪದೆಡೆಗೆ ಅವರೋಹಿಸಿದರೆ, ಆ ಆಳದ ಅಂತಿಮ ತಟದಲ್ಲಿ ದರ್ಶನದ ದಿವ್ಯ ದ್ವಾರವೊಂದು ತೆರೆದುಕೊಳ್ಳುತ್ತದೆ. ಹಾಗೆಂದ ಮಾತ್ರಕ್ಕೆ ದುಃಖವನ್ನು ಪಡೆಯಲಿಕ್ಕಾಗಿಯೇ ಆ ದುಃಖವನ್ನು ಅರಸಿಕೊಂಡು ಹೋಗಬೇಕೆಂದು ಅರ್ಥವಲ್ಲ. ಬದಲಿಗೆ ದುಃಖಗಳು ಬಂದು ನಿಮ್ಮೆದುರು ನಿಂತಾಗ ನೀವು ಆ ದುಃಖಗಳ ಹೃದಯ ಭೇದನದ ವಿದ್ಯೆಯನ್ನು ಅರಿಗಿಸಿಕೊಂಡಿದ್ದೇ ಆದಲ್ಲಿ, ನೀವು ಆ ದುಃಖದ ಹೃದಯ ಗಹ್ವರದಾಳದಲ್ಲಿ ಮನೆಮಾಡಿಕೊಂಡಿರುವ ಸ್ವಾರ್ಥ–ಅಹಮಿಕೆಗಳ ಮೂಲವನ್ನು ಅರಿಯಲು ಸಾಧ್ಯವಾಗುತ್ತದೆ. ಅವುಗಳಲ್ಲಿ ನಿಮ್ಮನ್ನಿಂತು ವೇದನೆಗೆ ಒಳಡಿಸಿದ ಆ ಸ್ವಾರ್ಥ–ಅಹಮಿಕೆಗಳ ಭಾಗಗಳು ಯಾವುವು ಎಂಬುದನ್ನು ಅರಿತು, ಅವುಗಳನ್ನೂ ಮೀರಿ ವೈಶ್ವಿಕದಾಳವನ್ನು ಪ್ರವೇಶಿಸಿದರೆ, ಸಕಲ ಸೃಷ್ಟಿಯ ಆದಿಗೆ ಕಾರಣವಾದ ಮೂಲಭೂತ ಸತ್ಯದ ಅಂಚಿನಲ್ಲಿ, ಆ ಋತಚೇತನದ ಅಂತ್ಯದಲ್ಲಿ 'ಅನಂತ ಕಾರುಣ್ಯ'ವು ತಾನೇತಾನಾಗಿರುತ್ತದೆ. ಆ 'ಅನಂತ ಕಾರುಣ್ಯ'ದ ಉದಧಿ ವಿಸ್ತಾರವನ್ನು ಸೇರಲು ಅಲ್ಲಿ ಚೈತನ್ಯದ ದಿವ್ಯ ದ್ವಾರವು ನಿಮಗಾಗಿ ತೆರೆದುಕೊಳ್ಳುತ್ತದೆ. ಆದ್ದರಿಂದ ಯಾರಾದರೂ ನಾನು ಕಣ್ಣೀರು ಹಾಕುವದನ್ನು ನೋಡಿದರೆ, ಕೂಡಲೇ ನನ್ನ ದುಃಖದೊಡನೆ ತಾದಾತ್ಮ್ಯ ಹೊಂದಲು ಪ್ರಯತ್ನಿಸಿ, ನನ್ನ ಕಣ್ಣೀರಿನಲ್ಲಿ ಸಂಪೂರ್ಣವಾಗಿ ಕರಗಿಹೋಗಲು ಪ್ರಯತ್ನಿಸಿ. ಆಗ ಆ ದ್ವಾರವು ತೆರೆದುಕೊಳ್ಳುತ್ತದೆ. ನೀವು ಆ ದ್ವಾರದಾಚೆಗಿನ ದಿವ್ಯಾನುಭವವನ್ನು ಪಡೆಯಬಹುದು. ಇದು ಅತಿ ಸಾಮಾನ್ಯ ಅನುಭೂತಿಯಾಗಿದ್ದರೂ, ಆ ಒಂದು ಕ್ಷಣದಲ್ಲಿ ಅದು ನಿಮ್ಮ ಪ್ರಜ್ಞೆಯ ಮೇಲೆ ಎಂದಿಗೂ ಅಳಿಸಲಾಗದಂತಹ ಮುದ್ರೆಯನ್ನು ಒತ್ತುತ್ತದೆ. ತದನಂತರ ನೀವು ನಿಮ್ಮ ದಿನನಿತ್ಯದ ಜೀವನಕ್ಕೆ ಮರಳಿ ಪ್ರಾಪಂಚಿಕ ವಿಷಯಗಳಲ್ಲೇ ಮುಳುಗಿದಾಗ ಆ ದ್ವಾರವು ಮತ್ತೆ ಮುಚ್ಚಿಕೊಳ್ಳುತ್ತದೆ. ಆದರೂ ನಿಮ್ಮ ಅಂತಃಸತ್ವದ ತೆರೆಮರೆಯಲ್ಲಿ ಆ ಅನುಭೂತಿಯ ಸಮಗ್ರತೆಯು ಶಾಶ್ವತವಾಗಿ ಉಳಿದುಬಿಟ್ಟಿರುತ್ತದೆ. ಕೆಲವೊಮ್ಮೆ ನೀವು ತೀವ್ರತರವಾದ ಪ್ರಭೆಗೆ ಒಳಗಾದಾಗ ಆ

ಅನುಭೂತಿಯು ಮತ್ತೆ ಮೇಲೆದ್ದು ಬರಬಹುದು. ಆ ನಿರ್ಮಾಯ ಘನದ ಆಳಕ್ಕೆ ಮತ್ತೊಮ್ಮೆ ಪ್ರವೇಶಿಸಬಹುದು. ಕ್ಷೋಭಿಸುತ್ತಿದ್ದರೂ ನಿತಾಂತವಾದ ಆ ಪರಮ ಶಾಂತಿಯನ್ನು ಮತ್ತೊಮ್ಮೆ–ಮಗದೊಮ್ಮೆ ಅನುಭವಿಸಬಹುದು. ಆ ಚೈತ್ಯ ಕ್ಷೇತ್ರವು ಸರ್ವಸ್ವವನ್ನೂ ಕರುಣಾದೃಷ್ಟಿಯಿಂದಲೇ ವೀಕ್ಷಿಸುತ್ತಿರುತ್ತದೆ. ದುಃಖದಲ್ಲಿರುವ ಪ್ರತಿಯೊಂದು ಕಣವನ್ನು ಒಪ್ಪಿಕೊಂಡು ಆ ದುಃಖದ ಮೂಲವನ್ನು ಗುಣಪಡಿಸಬಲ್ಲದು.

ಮರ್ತ್ಯರು ತಮ್ಮ ದುಃಖಗಳಿಂದ ಸಂಪೂರ್ಣವಾಗಿ ಮುಕ್ತರಾಗಬೇಕೆಂದು ಪ್ರಾಮಾಣಿಕವಾಗಿ ಪ್ರಯತ್ನಿಸಿದರೆ ಮಾತ್ರ ಆ ಪರಮ ಶಾಂತಿಯು ದೊರಕುತ್ತದೆ. ಕೇವಲ ವಿನೋದಕ್ಕೆಂದೋ ಅಥವಾ ಅದು ನೀಡುವ ಘಳಿಗೆ ಮೋಜಿಗಾಗಿ ಆ ಅನುಭವವನ್ನು ಹೊಂದಲು ಪ್ರಯತ್ನಿಸಿದರೆ ಅಥವಾ ಏಕಾಗ್ರತೆಯಿಂದ ಮುನ್ನಡೆಯುತ್ತಿದ್ದ ನೀವು ಮರುಕ್ಷಣವೇ ನಿಮ್ಮ ಮೂಲಸ್ಥಿತಿಗೆ ಮರಳಿಬಿಟ್ಟರೆ, ಅದು ತನ್ನ ಕಾರ್ಯವನ್ನು ನಿರ್ವಹಿಸುವದಿಲ್ಲ. ಆದರೆ, ಯಾವಾಗ ನೀವು ನಿಮ್ಮ ದುಃಖಗಳಿಂದ ಸಂಪೂರ್ಣವಾಗಿ ಕೊಡವಿಕೊಂಡೇಳಬೇಕೆಂದು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತ, ನಿಮ್ಮನ್ನು ನಿಲ್ಲಿಸಲು ಬರುವ ಅಡೆತಡೆಗಳನ್ನೆಲ್ಲ ನಿರ್ಮೂಲಿಸಿ, ನಿಮ್ಮನ್ನು ಹಿಂದಕ್ಕೆಳೆಯಲು ಪ್ರಯತ್ನಿಸುತ್ತಿರುವ ಮಿತಿಗಳನ್ನು ಮುರಿದು ಮುಂದಡಿಯಿಡುತ್ತಿರುವ ನಿಮ್ಮ ಮಾರ್ಗವನ್ನು ನಿಮ್ಮ ಸತ್ಯರೂಪದ ಅಭೀಪ್ಸೆಯಿಂದ ಕಾಂತಿಯುತಗೊಳಿಸಿ, ನಡೆಯುವ ಮಾರ್ಗದಲ್ಲಿ ಮುಗ್ಗರಿಸಿ ಬೀಳದಿರಲು ಸಹಕರಿಸುವ ನಿಮ್ಮ ಇಚ್ಛಾಶಕ್ತಿಯನ್ನು ಇನ್ನಷ್ಟು ಮೊನೆಗೊಳಿಸಿಕೊಂಡು ಅಪ್ರಕೇತದಲ್ಲಿ ಬಿದ್ದೇಳುತ್ತಿರುವ ಅಪ್ರಜ್ಞೆ ಮತ್ತು ಅಂಧಕಾರಗಳಿಂದ ಮೇಲೆದ್ದು ಬೆಳಕಿನ ಶಿಖರವನ್ನು ಮುಟ್ಟುವೆನೆಂಬ ಛಲದಿಂದ ನಡೆದಿದ್ದೇ ಆದಲ್ಲಿ ಅದು ತನ್ನ ಕಾರ್ಯವನ್ನು ಸಫಲವಾಗಿ ಕೈಗೂಡಿಸಿಕೊಳ್ಳುತ್ತದೆ. ಆದರೆ, ಒಂದೊಮ್ಮೆ ಈ ಅನುಭೂತಿಯನ್ನು ಪಡೆದುಕೊಂಡು ಮತ್ತೆ ತಮ್ಮ ಹಳೆಯ ನಡವಳಿಕೆಗೆ ಮರಳುವ ಮರ್ತ್ಯರ ಮನಸ್ಥಿತಿಯಿಂದ ವ್ಯತಿರಿಕ್ತ ಪರಿಣಾಮಗಳು ಜರುಗುತ್ತವೆ. ಒಮ್ಮೆ ದಿವ್ಯಾನುಭವವು ಬಂದು ಬೆಳಗಿದಾಗ, “ಹೌದು! ಹೌದು! ನೀನು ಕರುಣಿಸಿದ ಅನುಭೂತಿಯು ಬಹಳ ಚೆನ್ನಾಗಿದೆ. ಆದರೆ, ಈಗ ನನ್ನ ಸರದಿ!” ಎನ್ನುತ್ತ ತಮ್ಮ ಹಳೆಯ ಪದ್ಧತಿಯನ್ನೇ ಮತ್ತೆ ಅನುಮೋದಿಸಿದರೆ, ಆಗ ಘಟಿಸುವ ಪ್ರಮೇಯಗಳಿಗೆ ನನ್ನ ಜವಾಬ್ದಾರಿಯಿಲ್ಲ. ಏಕೆಂದರೆ, ಕೆಲವೊಮ್ಮೆ ನಿಮ್ಮ ನಿರ್ಧಾರಗಳೇ ನಿಮ್ಮ

ಏರಿಳಿತಗಳಿಗೆ ಕಾರಣವಾಗುತ್ತವೆ. ಕೆಲವೊಮ್ಮೆ ಆ ಪರಿಣಾಮಗಳು ಬಹಳ ಕೆಟ್ಟದಾಗಿರಬಹುದು. ಹಾಗಾಗಿಯೇ ನಾನು ಪದೇ–ಪದೇ ಹೇಳುವುದೇನೆಂದರೇ ನೀವು ಮಾಡುವ ಕೆಲಸದಲ್ಲಿ ನೀವು ನಿಜವಾಗಿಯೂ ಪ್ರಾಮಾಣಿಕರಾಗಿಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 06/145–46**

## ಋತವು ಮಾತ್ರ ಕೃಪೆಯನ್ನು ಆಹ್ವಾನಿಸುತ್ತದೆ

...ಆ ಪರಮ ಕೃಪೆಯು ಕೇವಲ ಋತ ಮತ್ತು ಪ್ರಕಾಶದ ವಲಯಗಳಲ್ಲಿ ಮಾತ್ರ ಜಾಗೃತವಾಗಿ ಕಾರ್ಯನಿರ್ವಹಿಸುತ್ತಿರುತ್ತದೆಯೇ ಹೊರತು ಅನೃತ ಮತ್ತು ಅಜ್ಞಾನದ ಕ್ಷೇತ್ರಗಳಲ್ಲಿ ಅಲ್ಲ. ಏಕೆಂದರೆ, ಅದು ಅನೃತದ ಅನುಮೋದನೆಗೆ ಒಲಿದರೆ ಅದು ತನ್ನ ಉದ್ದೇಶವನ್ನೇ ಸೋಲಿಸಿದಂತಾಗುತ್ತದೆ.

ಈ ಋತ ಮತ್ತ ಪ್ರಕಾಶದ ಸ್ಥಿತಿಗಳಲ್ಲಿ ಮಾತ್ರ ಆ ಔನ್ನತ್ಯದ ಶಕ್ತಿಯು ಕೆಳಗಿಳಿದು ಬರುತ್ತದೆ. ಹೀಗೆ ಮಾನವತ್ವದಿಂದ ದೇವತ್ವದೆಡೆಗೇರುವ ಮತ್ತು ಆ ದಿವ್ಯತೆಯ ಶಕ್ತಿಯನ್ನು ಕೆಳಗಿಳಿಸಿ ತರುವ ಸುಪ್ರಮಾನಸವು ಮಾತ್ರ ಈ ಭೌತಿಕ ಪ್ರಜ್ಞೆಯನ್ನು ಸಮರ್ಥವಾಗಿ ನಿಯಂತ್ರಿಸಬಲ್ಲದು. ಮತ್ತು ಈ ಮರ್ತ್ಯದ ವಿಕಸನಕ್ಕೆ ಅಡ್ಡಿ ಆತಂಕಗಳನ್ನು ಒಡ್ಡುವ ದೈತ್ಯ ಶಕ್ತಿಗಳನ್ನು ನಾಶಮಾಡಬಲ್ಲದು. ಇದನ್ನು ಸಾಧಿಸಲು ಪೂರ್ಣ ರೂಪದ ಮತ್ತು ಪ್ರಾಮಾಣಿಕವಾದ ಶರಣಾಗತಿಯ ಅವಶ್ಯಕತೆಯಿದೆ. ಮತ್ತು ಆ ದಿವ್ಯತೆಯ ಎದುರಿಗೆ ಮುಕ್ತವಾಗಿ ನಮ್ಮನ್ನು ನಾವು ತೆರೆದಿಟ್ಟುಕೊಂಡಿರಬೇಕು. ಮೇಲಿನಿಂದ ಕೆಳಗಿಳಿದು ಬರುತ್ತಿರುವ ಋತಚೇತನವನ್ನು ನಮ್ಮೊಳಗೆ ಆಹ್ವಾನಿಸಬೇಕು. ಹಾಗೂ ಈ ಜಡ ಭೌತಿಕವನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಆಳುತ್ತಿರುವ ಅನ್ನ, ಪ್ರಾಣ, ಮನಗಳಲ್ಲಿ ನೆಲೆಸಿರುವ ಅನೃತಗಳ ಮೂಲವನ್ನು ತೆರವಾಗಿಸಿ ಅಲ್ಲಿ ಆ ಋತಚೇತನವನ್ನು ಸ್ಥಾಪಿಸಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/3**

## ಅದ್ಭುತವಾದ ಕರುಣೆ

ಆ ದಿವ್ಯ ಕೃಪೆಯು ನಮ್ಮನ್ನು ನಮ್ಮ ಸಾಧನೆಯ ಗುರಿ ಶಿಖರದೆಡೆಗೆ ಕರೆದೊಯ್ಯುತ್ತದೆ. ಒಂದು ವೇಳೆ ನೀವು ನಿಮ್ಮ ಮಾನಸದಿಂದ ಅದನ್ನು

ನಿರ್ಣಯಿಸಲು ಪ್ರಯತ್ನಿಸಬೇಡಿ. ಏಕೆಂದರೆ, ಮಾನಸ ಮಾತ್ರದಿಂದಲೇ ಯಾವುದೇ ಸಿದ್ಧಿಗಳು ದೊರೆಯುವದಿಲ್ಲ. ಏಕೆಂದರೆ, ಮಾನವನ ಮಾತುಗಳು ಮತ್ತು ಭಾವನೆಗಳಿಂದ ವ್ಯಕ್ತಪಡಿಸಲು ಸಾಧ್ಯವಾಗದಂತಹ ಆ ದಿವ್ಯ ಕೃಪೆಯು ತನ್ನ ಕಾರ್ಯವನ್ನು ಆರಂಭಿಸಿದಾಗ ದೊರೆಯುವ ಫಲವು ತೋಷಭರಿತವಾಗಿರ–ಬಹುದು ಅಥವಾ ಇಲ್ಲದೇ ಇರಬಹುದು. ಇದನ್ನು ಮಾನವೀಯ ಮೌಲ್ಯಗಳಿಂದ ಲೆಕ್ಕಹಾಕಲು ಸಾಧ್ಯವಿಲ್ಲ. ಇದನ್ನು ಸಾಮಾನ್ಯ ದೃಷ್ಟಿಕೋನದಿಂದ ಅಳೆಯಲು ಸಾಧ್ಯವಿಲ್ಲ. ಒಟ್ಟಿನಲ್ಲಿ ಆ ದಿವ್ಯ ಕೃಪೆಯು ನಾವು ಯೋಚಿಸಲೂ ಸಾಧ್ಯವಾಗದಂತಹ ಅದ್ಭುತ ಶಕ್ತಿಯಾಗಿದ್ದು ಅದು ನಮ್ಮನ್ನು ನಮ್ಮ ಆರೋಹಣದ ಅಂತಿಮ ಶಿಖರದೆಡೆ ಕರೆದೊಯ್ಯುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 14/97**

**ಸಮಾನತೆ**

ಸಮಾನತೆ ಎಂದರೆ ಶಾಂತ–ನಿತಾಂತವಾದ ಮನ–ಪ್ರಾಣಗಳ ಸ್ಥಿತಿಯಾಗಿದೆ. ಇದರರ್ಥ, ನಮ್ಮ ಸುತ್ತಮುತ್ತಲೂ ಘಟಿಸುತ್ತಿರುವ ಸಂಗತಿಗಳು ಮತ್ತು ನಮ್ಮಿಂದ ನುಡಿಯಲ್ಪಟ್ಟ ಅಥವಾ ಮಾಡಲ್ಪಟ್ಟ ವಿಷಯಗಳಿಂದ ನಾವು ಪ್ರಭಾವಿತರಾಗದೇ ಇರುವುದು ಮತ್ತು ಅಂತಹ ಸಂಗತಿಗಳಿಂದ ನಮ್ಮ ನಡೆಯಲ್ಲಿ ವಿಚಲಿತರಾಗದೇ ಇರುವುದಾಗಿದೆ. ನಮ್ಮಲ್ಲಿ ಚೋದನೆಗಳನ್ನು ಸೃಜಿಸುವ, ನಮ್ಮ ಭಾವನೆಗಳಿಗೆ ಮೂಲಕಾರಣವಾಗಿರುವ ವಿಕ್ಷಿಪ್ತ ವಿಚಾರಗಳಿಂದ ಮುಕ್ತವಾಗಿ, ಅವುಗಳು ನಮ್ಮ ಮೇಲೆ ಬೀರುತ್ತಿರುವ ಪ್ರಭಾವದ ಮೂಲವನ್ನರಿಯಲು ಪ್ರಯತ್ನಿಸುತ್ತ ಅವುಗಳೆಡೆ ನೇರವಾದ ದೃಷ್ಟಿಯನ್ನು ಹರಿಸಿ, ಅವುಗಳ ಹಿಂದಿರುವ ಸ್ವರೂಪವನ್ನರಿತು, ಅವುಗಳ ಕಾರ್ಯವೈಖರಿ ಯಾವುದು? ಅವುಗಳು ಏಕೆ ಘಟಿಸುತ್ತಿವೆ? ನಮ್ಮೊಳಗಿನ ಅದಾವ ಶಕ್ತಿಯನ್ನು ಎದುರಿಸಲು ಅವು ಆಗಮಿಸಿವೆ? ಅವುಗಳಿಂದ ನಾವು ಏನನ್ನು ಕಲಿಯಬೇಕಿದೆ? ಅವುಗಳಿಂದ ನಮ್ಮ ಪ್ರಗತಿಯನ್ನು ಸಾಧಿಸುವ ಬಗೆಯೆಂತು? ಇವೇ ಮುಂತಾದ ಪ್ರಶ್ನೆಗಳನ್ನು ಇಟ್ಟುಕೊಂಡು ದೇನಿಸುವದನ್ನೇ ಸಮಾನತೆ ಎಂದು ಕರೆಯಬಹುದು. ಈ ಸಮಾನತೆಯಿಂದ ನಮ್ಮ ಪ್ರಾಣಮಯದ ಚಲನೆಗಳಾದ ಕೋಪ, ಸಂವೇದನೆ, ಅಹಮಿಕೆ, ಕಾಮನೆಗಳ ಮೇಲೆ ನಮ್ಮ ಹಿಡಿತವನ್ನು

ಸಾಧಿಸಬಹುದು; ಇವುಗಳು ನಮ್ಮ ಅಸ್ತಿತ್ವದ ಭಾವನೆಗಳ ಮೇಲೆ ಚೋದನೆಗಳನ್ನು ಸೃಷ್ಟಿಸಿ ನಮ್ಮ ಆಂತರ್ಯದಲ್ಲಿ ಅನೃತ–ಅಶಾಂತಿಗಳನ್ನು ತಂದು ನೆರೆಸುವದನ್ನು ತಡೆಯಬಹುದು; ಈ ಪ್ರಾಣದ ಚಲನೆಗಳ ಕುರಿತು ನಿರ್ವಿವೇಚನೆಯಿಂದ ಅಥವಾ ದುಡುಕಿನಿಂದ ಮಾತನಾಡಬಾರದು; ಇದರಿಂದ ನಮ್ಮಲ್ಲಿ ಸಮಾನತೆಯ ಸ್ಥಾಪನೆಯಾಗುತ್ತದೆ. ಇಷ್ಟು ಮಾತ್ರಕ್ಕೆ ನಮ್ಮೊಳಗೆ ಪೂರ್ಣ–ಪ್ರಪೂರ್ಣವಾದ ಸಮಾನತೆಯು ಮೈದಳೆದು ನಿಲ್ಲುತ್ತದೆ ಎಂದು ಹೇಳಲಾಗುವದಿಲ್ಲ. ಅದಕ್ಕಾಗಿ ನಾವು ನಮ್ಮ ಆಂತರ್ಯವನ್ನು ಸ್ಥಿರೀಕರಿಸಿಕೊಂಡು ಅದರ ಮುಖಾಂತರ ನಮ್ಮ ಬಾಹ್ಯವನ್ನು ರೂಪಾಂತರಗೊಳಿಸಲು ಪ್ರಯತ್ನಿಸಬೇಕು.

ಸಮಾನತೆಯನ್ನು ಇನ್ನೊಂದು ವ್ಯಾಖ್ಯಾನದಿಂದ ವಿವರಿಸುವದಾದರೆ, ಮರ್ತ್ಯರು ತಮ್ಮ ಸ್ವಭಾವ, ಜೀವನಕ್ರಿಯೆ, ಮತ್ತು ಅವರ ಶಕ್ತಿ–ಸಾಮರ್ಥ್ಯಗಳೆಲ್ಲವನ್ನೂ ಸಮಾನ ದೃಷ್ಟಿಯಿಂದ ನೋಡುವುದೇ ಆಗಿದೆ. ಇದರಿಂದ ವ್ಯಕ್ತಿಯು ತಾನು ನೋಡುವ ದೃಷ್ಟಿ ಮತ್ತು ತಾನು ನಿರ್ಣಯಿಸುವ ತೀರ್ಮಾನಗಳಲ್ಲಿ ಅಡಕವಾಗಿರುವ ತನ್ನ ಸ್ವಂತಹ ಭಾವನೆಗಳನ್ನು ಹಾಗೂ ಪೂರ್ವಗ್ರಹ ಪೀಡಿತವಾದ ತನ್ನ ಮಾನಸಿಕ ನಿಲುಮೆಗಳನ್ನು ಕಿತ್ತೆಸೆದು ಕೇವಲ ಸತ್ಯ ದರ್ಶನವನ್ನು ಮಾತ್ರ ನೋಡಲು ಸಾಧ್ಯವಾಗುತ್ತದೆ. ವ್ಯಕ್ತಿಗತರಲ್ಲಿರುವ ಅವರವರ ಸ್ವಂತದ ಭಾವನೆಗಳು ಕಾಣ್ಕೆಯೊಳಗೆ ಕೆಡುಕನ್ನು ತುಂಬಿ ಸತ್ಯವನ್ನು ವಿಕೃತವನ್ನಾಗಿ ತೋರಿಸುತ್ತ, ಘಟಿಸಿದ ವಿಷಯಗಳಲ್ಲಿ ಇಲ್ಲದೇ ಇರುವ ಸಂಗತಿಗಳನ್ನು ಇರುವಂತೆ ಬಿಂಬಿಸುವ ಕೆಲಸದಲ್ಲಿ ತೊಡಗಿರುತ್ತವೆ. ಇದರಿಂದ ಜನರಲ್ಲಿ ತಪ್ಪು ತಿಳುವಳಿಕೆಗಳು ಉಂಟಾಗಿ, ಅವರು ತಪ್ಪು ನಿರ್ಣಯಗಳನ್ನು ಕೈಗೊಳ್ಳುವಂತೆ ಮಾಡಿ, ಅವರಿಂದ ತಪ್ಪು ಕೆಲಸಗಳನ್ನೇ ಮಾಡಿಸುವಂತೆ ಪ್ರೇರೇಪಿಸುತ್ತದೆ. ಹೀಗೆ ಆರಂಭವಾಗುವ ಸಣ್ಣಪುಟ್ಟ ವಿಷಯಗಳು ನೋಡನೋಡುತ್ತಲೇ ದೊಡ್ಡ ಪ್ರಮಾಣದ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ಜನರ ದಿನನಿತ್ಯದ ಜೀವನದಲ್ಲಿ ಘಟಿಸುತ್ತಿರುವ ಅದೆಷ್ಟೋ ಅಹಿತಕರ ಘಟನೆಗಳು ಈ ಕಾರಣದಿಂದಲೇ ಸಂಭವಿಸಿರುತ್ತವೆ. ಆದರೆ ಸಾಮಾನ್ಯವಾದ ಜನ ಜೀವನವನ್ನು ನಿರಂತರವಾಗಿ ಪೋಷಿಸಿಕೊಂಡು ಬರುತ್ತಿರುವ ವ್ಯಕ್ತಿಗತದ ವೈಯಕ್ತಿಕ ಭಾವನೆಗಳು ಮತ್ತು ಸೂಕ್ಷ್ಮ ಸಂವೇದನೆಗಳು ಪ್ರತಿಯೋರ್ವರ ಆತ್ಮರಕ್ಷಣೆಗೋಸ್ಕರ ಇರುವ ಸಿದ್ಧ ಅಸ್ತ್ರಗಳಾಗಿರಬಹುದು. ಆದರೂ, ಈ ವೈಯಕ್ತಿಕತೆಯ ಭಾವನೆಗಳು ಮತ್ತು ಸ್ವಂತದ ನಿಲುಮೆಗಳನ್ನು

ನಿರ್ಣಯಕ್ಕೆ ತಂದುಕೊಳ್ಳುವ ಪೂರ್ವದಲ್ಲಿ ರಕ್ಷಣೆಯ ವಿಷಯವನ್ನು ಗಮನದಲ್ಲಿಟ್ಟುಕೊಂಡು ಅವುಗಳ ಮೇಲೆ ಸಮಾನ ದೃಷ್ಟಿಯನ್ನು ಹರಿಸಿ, ಆನಂತರ ಅವುಗಳನ್ನು ಪ್ರಯೋಗಿಸುವ ಅವಶ್ಯಕತೆಯಿದೆ ಎನಿಸುತ್ತದೆ. ವಿಕಸನದೆಡೆ ಮೊಗಮಾಡಿರುವ ಸಾಧಕನು ಅವನ ಮಾನಸದ ಮಟ್ಟವನ್ನೂ ಮೀರಿ ಅಲ್ಲಿ ಹೊಯ್ದಾಡುತ್ತಿರುವ ಶಾಂತಿ–ಶಕ್ತಿಗಳ ಮಧ್ಯೆ ಬದುಕಬೇಕಾದ ಅವಶ್ಯಕತೆಯಿದೆ.

ಸಮಾನತೆ ಎಂದರೆ ಹೊಸದಾಗಿ ಸೃಷ್ಟಿಯಾದ ಅಜ್ಞಾನ ಅಥವಾ ಅಂಧತೆಯಲ್ಲ. ಇದು ನಮ್ಮ ದೃಷ್ಟಿಯಲ್ಲಿ ಮಂದತೆಯನ್ನು ತರುವ ಅಥವಾ ವರ್ಣಗಳನ್ನು ಕಾಣುವ ಸಾಮರ್ಥ್ಯವನ್ನು ಅಳಿಸಿಹಾಕುವ ಕಾರ್ಯವನ್ನು ಮಾಡುವದಿಲ್ಲ. ಅದಕ್ಕೆ ಇಂತಹ ಕ್ಷುಲ್ಲಕ ವಿಷಯಗಳ ಅವಶ್ಯಕತೆಯೂ ಇಲ್ಲ. ಅದು ಕೇವಲ ನಮ್ಮ ನೋಡುವ ದೃಷ್ಟಿಯಲ್ಲಿ ವ್ಯತ್ಯಾಸಗಳನ್ನು ತಂದು ನಮ್ಮ ಅಭಿವ್ಯಕ್ತಿಯ ವಿಧಾನದಲ್ಲಿ ವೈವಿಧ್ಯತೆಯನ್ನು ಸೃಷ್ಟಿಸುತ್ತದೆ. ಹೀಗೆ ರಚನೆಯಾದ ವ್ಯತ್ಯಯ–ವೈವಿಧ್ಯತೆಗಳನ್ನು ನಾವು ಮುಕ್ತ ಮನಸ್ಸಿನಿಂದ ಸ್ವಾಗತಿಸುತ್ತೇವೆ. ಅವುಗಳನ್ನು ಪ್ರಶಂಸಿಸುತ್ತೇವೆ. ಏಕೆಂದರೆ, ನಾವು ನಮ್ಮ ಯಾವುದೋ ಒಂದು ವೈಯಕ್ತಿಕ ಭಾವನೆಗೆ ಬದ್ಧವಾಗಿ ಕಾಣುವ ಪ್ರೇಮ–ದ್ವೇಷ, ಪುರಸ್ಕಾರ–ತಿರಸ್ಕಾರ, ಸಮಷ್ಟಿ–ವಿಮೃಷ್ಟಿ, ಆಕರ್ಷಣೆ–ವಿಕರ್ಷಣೆಯ ದೃಷ್ಟಿಕೋನದಿಂದ ಮಂಜಾಗಿರುವ ನಮ್ಮ ಕಂಗಳಿಂದ ನೋಡುವದಕ್ಕಿಂತಲೂ, ಆ ದೃಷ್ಟಿಯ ಪ್ರಕಾರ ಮಾಡುವದಕ್ಕಿಂತಲೂ ಹೆಚ್ಚು ನಾವು ಆ ವ್ಯತ್ಯಯ–ವೈವಿಧ್ಯತೆಗಳನ್ನು ಪ್ರಶಂಸಿಸುತ್ತೇವೆ. ಏಕೆಂದರೆ, ಅಲ್ಲಿ ನಾವು ಆ ವ್ಯತ್ಯಯ–ವೈವಿಧ್ಯತೆಗಳಲ್ಲಿ ನಿರಂತ್ಯ–ನಿರ್ವಿಕಲ್ಪ ಸ್ಥಿತಿಗಳನ್ನು ಕಂಡಿರುತ್ತೇವೆ. ಮಾನವೀಯ ಮಾನದಂಡಗಳ ದೃಷ್ಟಿಯಲ್ಲಿ ಅವು ಸಂಪೂರ್ಣ–ಸಾಮರಸ್ಯವಾಗಿಯೇ ಕಾಣಲಿ, ಅಥವಾ ಅನೃತ–ಅನಾಗರಿಕವಾಗಿಯೇ ಕಾಣಲಿ, ಒಟ್ಟಿನಲ್ಲಿ ಅದರ ಹಿಂದಿರುವ ಉದ್ದೇಶವು ಮತ್ತು ಅದರ ರಚನೆಗೆ ಕಾರಣವಾಗಿರುವ ದಿವ್ಯತೆಯ ಅಗತ್ಯವನ್ನು ನಾವು ಅಲ್ಲಿ ಅನುಭವಿಸುತ್ತೇವೆ. ಇಂತಹ ಶಕ್ತಿಯು ನಮ್ಮಿಂದ ದೂರವಿದ್ದರೂ ಸಹ ಅದರ ಕಂಪನಗಳು ನಮ್ಮ ನಂಬುಗೆಯನ್ನು ಸಬಲಗೊಳಿಸುತ್ತವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/130–31; 23/224–25**

**– ಶ್ರೀ ಅರವಿಂದರು**

## ಕರ್ಮ ಮತ್ತು ನ್ಯಾಯ

ಕರ್ಮ ಸಿದ್ಧಾಂತದ ಕುರಿತಾಗಿ ಈಗಿರುವ ಸಾಮಾನ್ಯವಾದ ಪರಿಕಲ್ಪನೆಯು ನೈತಿಕತೆಯಿಂದ ಕೂಡಿದೆ. ಆದರೆ ಅದು ಉನ್ನತ ಮಟ್ಟದ ನೈತಿಕತೆಯಲ್ಲ. ಈ ಕರ್ಮ ಸಿದ್ಧಾಂತದ ಪರಿಕಲ್ಪನೆಯು ಯಾಂತ್ರಿಕವಾದ ಮತ್ತು ಭೌತಿಕ ನೆಲೆಯ ನೈತಿಕತೆಯನ್ನು ಮಾತ್ರ ಹೊಂದಿದೆ; ಇದು ನಿಷ್ಠುರವಾದ ಮತ್ತು ನಿಖರವಾದ ತೀರ್ಪುಗಳನ್ನು ನೀಡುವ ಮತ್ತು ಕಾನೂನುಬದ್ಧದ ಸಂಹಿತೆಗಳನ್ನು ಸಮಾನವಾಗಿ ಹಂಚುತ್ತ ನ್ಯಾಯ ವ್ಯವಸ್ಥೆಯನ್ನು ಸಂಸ್ಥಾಪಿಸುವ ಆಡಳಿತ ನೀತಿಯಾಗಿದೆ. ಈ ಭೂಮಿಯ ಮೇಲೆ ಸುಖ–ದುಃಖಗಳನ್ನು ಸಮಾನವಾಗಿ ಹಂಚುತ್ತ ಸಮಾನತೆ ಮತ್ತು ಕರ್ಮ ಸಿದ್ಧಾಂತವನ್ನು ಪ್ರತಿನಿಧಿಸುವುದೇ ಇದರ ಪರಿಕಲ್ಪನೆಯಾಗಿದೆ. 'ನಾನು ನನ್ನ ಜೀವನದಲ್ಲಿ ತುಂಬಾ ಒಳ್ಳೆಯ ಕಾರ್ಯಗಳನ್ನು ಮಾಡಿದ್ದೇನೆ. ನನ್ನ ಆ ಪುಣ್ಯವೇ ನಾನು ನನ್ನ ಜೀವಮಾನದಲ್ಲಿ ಸಂಗ್ರಹಿಸಿದ ಸಂಚಯನವಾಗಿದೆ. ಅದಕ್ಕೆ ಪ್ರತಿಯಾಗಿ ಸರ್ವಶಕ್ತಳೂ, ನ್ಯಾಯ ದೇವತೆಯೂ ಆದ ಆ 'ಥೆಮಿಸ್'ಳು ನನಗೆ ನನ್ನ ಪುಣ್ಯಕ್ಕೆ ಸಮನಾಗಿರುವ ಸತ್ ಫಲಗಳನ್ನು ನೀಡಲೇಬೇಕು; ಹಾಗೊಂದು ವೇಳೆ ನನ್ನ ಪುಣ್ಯಕ್ಕೆ ಸಮನಾದ ಫಲವು ದೊರೆಯದ ಪಕ್ಷದಲ್ಲಿ ನಾವು ಈ ಭೂಮಿಯ ಮೇಲೆ ಮಾಡಿದ ಸತ್‌ಕರ್ಮಗಳಿಗೆ ಯಾವ ಬೆಲೆಯಿದೆ? ಒಂದು ವೇಳೆ ನಾವು ದುಷ್ಕೃತ್ಯಗಳನ್ನು ಮಾಡಿದ್ದಲ್ಲಿ ಅದಕ್ಕೆ ಸಮನಾದ ಶಿಕ್ಷೆಯನ್ನು ನಾವು ಅನುಭವಿಸಲೇ–ಬೇಕಾಗುತ್ತದೆ. ನಮ್ಮ ಬಾಹ್ಯವನ್ನು ಘಾಸಿಗೊಳಿಸುತ್ತಿರುವ ಆ ಘಟನೆಗಳಿಂದ ಉಂಟಾದ ಒತ್ತಡಗಳಿಗೆ ಮಣಿದು ನಮ್ಮ ಆಂತರ್ಯವೂ ಸಹ ನರಳಲೇಬೇಕು; ಏಕೆಂದರೆ, ಈ ಭೌತಿಕ ವಲಯಲದಲ್ಲಿ ಸಂವೇದನಾಶೀಲವಾದ, ದೃಷ್ಟಿಗಮ್ಯವಾದ, ಸರಿಯಾದ ಫಲಾಫಲಗಳನ್ನು ನಿಷ್ಠುರವಾಗಿ ವಿಧಿಸುವ ನ್ಯಾಯವೆಂಬುದು ಇಲ್ಲದೇ ಹೋದರೆ, ಪ್ರಕೃತಿಯಲ್ಲಿ ನಡೆಯುತ್ತಿರುವ ದುಷ್ಕೃತ್ಯಗಳ ವಿರುದ್ಧ ನಿರ್ಬಂಧವನ್ನು ಹೇರಲು ಸಾಧ್ಯವೇ ಇರುತ್ತಿರಲಿಲ್ಲ.' ನ್ಯಾಯಸ್ಥಾನದಲ್ಲಿ ಕೂತು ತೀರ್ಪುಗಳನ್ನು ನೀಡುವ ನ್ಯಾಯಾಧೀಶನು ಒಬ್ಬ ಒಳ್ಳೆಯ ಆಡಳಿತಗಾರನೂ, ಸುಕೃತಗಳಿಗೆ ಸುಕೃತವನ್ನೂ ದುಷ್ಕೃತ್ಯಗಳಿಗೆ ದುಷ್ಕೃತ್ಯವನ್ನೂ ನೀಡುವ ಒಬ್ಬ ನಿಷ್ಠುವ ವ್ಯಾಪಾರಿಯೂ ಆಗಿರುತ್ತಾನೆ. ಆದರೆ ಈತನು ಎಂದಿಗೂ ಕ್ರಿಶ್ಚಿಯನ್ ಮತ್ತು ಬೌದ್ಧ ಧರ್ಮದ ಆದರ್ಶ ನಿಯಮಗಳನ್ನು ಕಲಿಯಲಿಲ್ಲ. ಏಕೆಂದರೆ, ನ್ಯಾಯಸ್ಥಾನದಲ್ಲಿರುವವರಿಗೆ ಕರುಣೆಗಿಂತ ನಿಷ್ಠುರತೆಯ

ಅವಶ್ಯಕತೆಯಿರುತ್ತದೆ. ಆತನು 'ಪಾಪಕ್ಕೆ ಕ್ಷಮೆಯಿರುವದಿಲ್ಲ' ಎಂಬ ಮೊಸಾಯಿಸ್ ಕಾನೂನು ಮತ್ತು 'ಕಣ್ಣಿಗೆ–ಕಣ್ಣು ಅಥವಾ ಹಲ್ಲಿಗೆ–ಹಲ್ಲು' ಎಂಬ ದಯಾರಹಿತವಾದ ಲೆಕ್ಸ್ ಲ್ಯಾಟೋನಿಕ್ಸ್ ನ್ಯಾಯ ಸಿದ್ಧಾಂತವನ್ನು ಮೈಗೂಡಿಸಿ–ಕೊಂಡಿರುತ್ತಾನೆ.

ಈತ ವ್ಯವಹಾರ ಮತ್ತು ಗಣಿತ ಲೆಕ್ಕ ಪರಿಶೋಧಕನಂತೆ ಅದ್ಭುತ ನಿಖರತೆಯೊಂದಿಗೆ ಕಾರ್ಯನಿರ್ವಹಿಸುತ್ತಾನೆ ಎಂದು ಕಂಡುಬರುತ್ತದೆ. ಇತ್ತೀಚೆಗೆ ಜರುಗಿದ ಒಂದು ಕುತೂಹಲಕಾರಿಯಾದ ಘಟನೆಯು ಅದನ್ನು ಸಾಕ್ಷೀಕರಿಸುತ್ತದೆ: ಒಬ್ಬ ಶ್ರೀಮಂತ ವ್ಯಕ್ತಿಯು ಓರ್ವ ವ್ಯಕ್ತಿಯ ಆಸ್ತಿಯನ್ನು ಬಲವಂತವಾಗಿ ಕಸಿದುಕೊಂಡಿರುತ್ತಾನೆ. ಇದರಿಂದ ಘಾಸಿಗೊಳಗಾದ ಸಂತ್ರಸ್ತನು ಕೆಲದಿನಗಳಲ್ಲಿಯೇ ಮರಣ ಹೊಂದಿ ತನ್ನನ್ನು ಈ ಸ್ಥಿತಿಗೆ ತಂದ ಆ ಶ್ರೀಮಂತನ ಮನೆಯಲ್ಲಿ ಅವನ ಮಗನಾಗಿ ಜನಿಸುತ್ತಾನೆ. ಕೆಲ ಸಮಯದ ನಂತರ ಅವನ ಮಗನ ರೂಪದಲ್ಲಿಯೇ ಮಾರಣಾಂತಿಕ ಖಾಯಿಲೆಯಿಂದ ಬಳಲುತ್ತ, ಆ ಶ್ರೀಮಂತನು ತನ್ನಿಂದ ಕಸಿದುಕೊಂಡ ಮೊತ್ತಕ್ಕೆ ಸಮನಾದ ಸಂಪತ್ತನ್ನು ತನಗಾಗಿ ಖರ್ಚು ಮಾಡಿಸಿಕೊಳ್ಳುತ್ತ ದಿನಗಳೆಯುತ್ತಾನೆ. ಕೊನೆಗೊಂದು ದಿನ ತನ್ನ ತಂದೆಗೆ ಅದನ್ನು ತಿಳಿಸುತ್ತ, 'ಅವನು ಈ ಹಿಂದೆ ತನ್ನಿಂದ ಪಡೆದ ಸಂಪತ್ತಿನ ಉಳಿದ ಭಾಗವನ್ನು ಚುಕ್ತಾ ಮಾಡಬೇಕಾಗಿಯೂ ಇಲ್ಲದಿದ್ದರೇ ಇದೇ ಪರಿಸ್ಥಿತಿಯು ಮುಂದುವರಿದು ತಾನೇ ಆ ಉಳಿದ ಸಂಪತ್ತನ್ನು ಪ್ರಜ್ಞಾಪೂರ್ವಕವಾಗಿ ಸೆಳೆಯುವದಾಗಿಯೂ' ನುಡಿಯುತ್ತಾನೆ. ಮತ್ತು 'ತನ್ನ ಸಂಪತ್ತನ್ನು ಮರಳಿಸಿದ ತಕ್ಷಣ ಆ ಶ್ರೀಮಂತನ ಮಗನಾಗಿ ಜನಿಸಿದ ತಾನು ಮರಣ ಹೊಂದಿ ಅವನ ಕರ್ಮಕ್ಕೆ ತಕ್ಕ ಪ್ರಾಯಶ್ಚಿತವನ್ನು ನೀಡುವದಾಗಿ' ತಿಳಿಸುತ್ತಾನೆ. ಏಕೆಂದರೆ, ಆ ಸಂತ್ರಸ್ತನು ಶ್ರೀಮಂತನ ಮಗನಾಗಿ ಹುಟ್ಟಿ ಬಂದಿರುವ ಉದ್ದೇಶವು ಆ ಕ್ಷಣಕ್ಕೆ ಪೂರ್ಣಗೊಂಡಿರುತ್ತದೆ. ಹಾಗಾಗಿ ಆ ಆತ್ಮವು ಈಗ ನಿರ್ಗಮಿಸಲೇಬೇಕಾಗಿರುತ್ತದೆ. ಹಿಂದಿನ ಜನ್ಮದ ಲೆಕ್ಕಗಳೆಲ್ಲವೂ ಈಗ ಚುಕ್ತಾ ಆಗಿರುವ ಕಾರಣ ತೃಪ್ತವಾದ ಆತ್ಮವು ಈಗ ಆ ಬಾಲಕನ ದೇಹದಿಂದ ಮುಕ್ತವಾಗಿ ಬಿಡುತ್ತದೆ. ಹೀಗೆ ಕರ್ಮವೆಂಬುದು ಭೌತಿಕ ಮತ್ತು ಯಾಂತ್ರಿಕ ಪರಿಕಲ್ಪನೆಯನ್ನು ಪ್ರತಿನಿಧಿಸುತ್ತದೆ. ಅದೇ ಸಮಯಕ್ಕೆ ಜನ ಸಾಮಾನ್ಯರು ತಮ್ಮ ಮರಣದ ನಂತರ ಬರಲಿರುವ ಪುನರ್ಭವದಲ್ಲಿ ತಮ್ಮ ಕರ್ಮಗಳಿಗೆ ಅನುಸಾರವಾಗಿ, ತಾವು ಮಾಡಿದ ಪುಣ್ಯ–ಪಾಪಗಳಿಗೆ ದ್ವಿಗುಣವಾದ

ಪ್ರತಿಫಲವನ್ನು ಕಲ್ಪಿಸಿಕೊಳ್ಳುತ್ತಾರೆ. ಉದಾಹರಣೆಗೆ ಅವರು: "ನಾನು ಮಾಡಿದ ಸತ್ಕರ್ಮಗಳಿಗಾಗಿ ನನ್ನ ಮರಣದ ನಂತರ ಸ್ವರ್ಗದಲ್ಲಿ ದೇವ ಜನ್ಮವನ್ನು ಪಡೆದು ವೈಭವೋಪೇತವಾದ ಜೀವನವನ್ನು ಕಳೆದು, ಅಲ್ಲಿಂದ ಚ್ಯುತವಾಗಿ ಮತ್ತೆ ಭೂಮಿಯಲ್ಲಿ ಕಾರ್ಮಣ ದೇಹದಲ್ಲಿ ಜನಿಸಿ ಬಂದು ಇಲ್ಲಿಯೂ ಉತ್ತಮ ಜೀವನವನ್ನು ನಡೆಸುವೆನು; ಅಲ್ಲದೇ ಒಂದು ವೇಳೆ ನಾನು ದುಷ್ಕೃತ್ಯಗಳನ್ನು ಎಸಗಿ ಮರಣ ಹೊಂದಿದಲ್ಲಿ ನಾನು ನನ್ನ ಸಾವಿನ ನಂತರ ನರಕಕ್ಕೆ ಭಾಜನನಾಗಿ ಅಲ್ಲಿ ಘೋರ ಶಿಕ್ಷೆಗಳನ್ನು ಅನುಭವಿಸಿ, ಆ ನರಕಾಯು ಪೂರ್ಣಗೊಳ್ಳುತ್ತಲೇ ಮತ್ತೆ ಭೂಮಿಯಲ್ಲಿ ಜನಿಸಿ ಬಂದು ಇಲ್ಲಿಯೂ ದರಿದ್ರ ಜೀವನವನ್ನು ನಡೆಸಬೇಕಾಗುತ್ತದೆ" ಎಂದು ಯೋಚಿಸುತ್ತಾರೆ. ಇದು ಸ್ವಲ್ಪ ಅತಿರೇಕದ ಮತ್ತು ಅನಗತ್ಯವಾದ ನ್ಯಾಯ ಸಿದ್ಧಾಂತದಂತೆ ಕಂಡುಬರುತ್ತದೆ. ಮತ್ತು ನ್ಯಾಯಗಳನ್ನು ಪರಿಶೀಲಿಸುವ ಆ ಲೆಕ್ಕ ಪರಿಶೋಧಕನು ಜನರ ಪಾಪ–ಪುಣ್ಯಗಳಿಗೆ ನೂರು ಪಟ್ಟು ಹೆಚ್ಚಿನ ಬಡ್ಡಿಯನ್ನು ವಸೂಲಿ ಮಾಡುವ ನಿರ್ದಯಿ ಸಾಲಗಾರನಂತೆ ಕಂಡುಬರುತ್ತಾನೆ. ಮತ್ತು ತಾವು ಮಾಡಿದ ಕರ್ಮಗಳಿಗೆ ಅನುಸಾರವಾಗಿ ಭೂಮಿಯಾಚೆಗಿನ ವಿವಿಧ ಲೋಕಗಳಲ್ಲಿ ಫಲಗಳನ್ನು ಅನುಭವಿಸಿ ಮತ್ತೊಮ್ಮೆ ಭೂಮಿಯ ಮೇಲೆ ಜನಿಸಿ ಬಂದು ಎರಡೆರಡು ಬಾರಿ ಅದರ ಫಲವನ್ನು ಉಣ್ಣುವ ಭಯದಿಂದ ಜನರು ದುಷ್ಕೃತ್ಯಗಳನ್ನು ಎಸಗುವದನ್ನು ಬಿಡುತ್ತಾರೆ. ಇದರಿಂದ ಅವರ ಜೀವನವೂ ಉತ್ತಮಗೊಳ್ಳುತ್ತದೆ. ಸಮಾಜದಲ್ಲಿ ಶಾಂತಿಯೂ ನೆಲೆಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/367–69**

## ದಿವ್ಯತೆಯ ನ್ಯಾಯ ಮತ್ತು ಆಧ್ಯಾತ್ಮಿಕ ವಿಕಾಸ

ಕರ್ಮದೊಡನೆ ನಿಕಟವಾದ ಸಂಪರ್ಕವನ್ನು ಹೊಂದಿರುವ ನಮ್ಮ ಪ್ರಜ್ಞೆ ಮತ್ತು ಇಚ್ಛೆಗಳ ಅತ್ಯಂತ ಸೂಕ್ಷ್ಮವಾದ ಸಂವೇದನೆಗಳೇ ಆ ಕರ್ಮದ ಪರಿಣಾಮವನ್ನು ನಿರ್ಧರಿಸುತ್ತದೆ; ಇವುಗಳ ನಡುವಿನ ಸಂಬಂಧವೇ ಇಡೀ ಕರ್ಮ ಸಿದ್ಧಾಂತದ ಕೇಂದ್ರಬಿಂದುವಾಗಿದೆ. ನಮ್ಮ ಅನ್ನಮಯ, ಪ್ರಾಣಮಯ ಮತ್ತು ಅಲ್ಪಮನದ ಅಡಿಯಲ್ಲಿ ರೂಪುಗೊಳ್ಳುವ ಸುಖ–ದುಃಖಗಳ ಅನುಮೋದನೆಯ ಮೇಲೆ ನಮ್ಮಲ್ಲಿ ಸ್ಫುರಿಸುವ ನೈತಿಕ ಮೌಲ್ಯಗಳು ಅವಲಂಬಿತವಾಗಿರುತ್ತವೆ. ಅದು ನಮ್ಮ ಪ್ರಜ್ಞೆ ಮತ್ತು ಇಚ್ಛೆಯ ಮೇಲೆ ಅಗಾಧವಾದ ಪರಿಣಾಮವನ್ನು ಬೀರುತ್ತದೆ. ನಾವು

ನಮ್ಮ ಆರೋಹಣದ ಮಾರ್ಗದಲ್ಲಿ ಚರಿಸುತ್ತ ಔನ್ನತ್ಯದ ಆಯಾಮದೆಡೆಗೆ ಬೆಳೆದಂತೆ ಈ ಅವಲಂಬನೆಯು ಕನಿಷ್ಠವಾಗುತ್ತಾ ಸಾಗುತ್ತದೆ. ಕೊನೆಗೆ ತನ್ನೆಲ್ಲ ಸಾಮರ್ಥ್ಯವನ್ನು ಕಳೆದುಕೊಂಡು ಬಿಡುತ್ತದೆ. ಹಾಗಾಗಿ ಈ ಬಾಹ್ಯ ಅವಲಂಬನೆಗಳಿಂದ ಕರ್ಮವನ್ನು ಮುನ್ನಡೆಸಲು ಸಾಧ್ಯವಿಲ್ಲ. ಹಾಗಾಗಿ ಈ ಕರ್ಮದ ಕಾರ್ಯವೈಖರಿಗೂ, ಅದರ ಸಂಕಲ್ಪ ಶಕ್ತಿಗೂ ಮತ್ತು ಅದರಿಂದ ಉಂಟಾಗುವ ಪರಿಣಾಮಕ್ಕೂ ಇರುವ ಸಂಬಂಧವನ್ನು ಹೆಚ್ಚು ಸೂಕ್ಷ್ಮ ಮತ್ತು ವಿಶಾಲವಾದ ದೃಷ್ಟಿಕೋನದಿಂದ ನಿರೂಪಿಸಬೇಕಾದ ಅವಶ್ಯಕತೆಯಿದೆ. ಈ ಕರ್ಮದ ಆಂತರ್ಯದಲ್ಲಿ ಜಾಗೃತವಾಗಿರುವ ವಿಶ್ವಾತ್ಮನು ಮಾನವನ ಪ್ರಸ್ತುತ ನಿರ್ವಹಣೆಗಾಗಿ ಇಂತಹ ಮೌಲ್ಯಗಳನ್ನು ಸೃಷ್ಟಿಸಿ ಮರ್ತ್ಯವನ್ನು ಮುನ್ನಡೆಸುತ್ತಿರುತ್ತದೆ. ಮನುಷ್ಯನು ಸದಾ ಈ ಮೌಲ್ಯಗಳನ್ನು ಆದರಿಸುತ್ತಾನೆ. ಮತ್ತು ತನ್ನ ಸುಖ–ಶಾಂತಿಗಳಿಗಾಗಿ ಮತ್ತು ತನ್ನ ಸೌಲಭ್ಯ–ಸಮೃದ್ಧಿಗಳಿಗಾಗಿ ಪ್ರಾರ್ಥಿಸುತ್ತಾನೆ. ಹಾಗೂ ಅದರಿಂದ ಒದಗಬಹುದಾದ ವ್ಯತಿರಿಕ್ತಗಳಿಗೆ ಹೆದರುತ್ತಾನೆ. ಸತ್ಕರ್ಮವನ್ನು ಮೈಗೂಡಿಸಿಕೊಳ್ಳುವದನ್ನು ಬಿಟ್ಟು ನೇರವಾಗಿಯೇ ಸ್ವರ್ಗವನ್ನು ಪಡೆಯಬೇಕೆಂದು ಹಂಬಲಿಸುತ್ತಾನೆ. ಪಾಪಕರ್ಮಗಳನ್ನು ವರ್ಜಿಸುವದನ್ನು ಬಿಟ್ಟು ಅದರಲ್ಲಿಯೇ ಮುಳುಗಿ ಅದರಿಂದೊದಗಬಹುದಾದ ನರಕಾಯು ಬಂಧಕ್ಕಾಗಿ ಹೆದರುತ್ತಾನೆ. ಇಂತಹ ಸಂದರ್ಭದಲ್ಲಿ ಅವನ ಸುತ್ತಲಿನ ಪ್ರಕೃತಿಯು ಅವನನ್ನು ಸುಕೃತದ ಮಾರ್ಗದಲ್ಲಿ ಪ್ರೇರಿಸಲು ಪ್ರಯತ್ನಿಸುತ್ತದೆ. ಹಾಗೆಂದ ಮಾತ್ರಕ್ಕೆ ಆ ಋತಚೇತನವು ಕೇವಲ ಕಾನೂನು, ನ್ಯಾಯಸಂಹಿತೆಯನ್ನು ರಕ್ಷಿಸಲಿಕ್ಕಿರುವ ದಂಡ–ನಿರ್ಬಂಧನೆಗಳನ್ನು ಹೇರಿ ಅದನ್ನು ಪಾಲಿಸದೇ ಇರುವವರನ್ನು ಶಿಕ್ಷಿಸುವ, ಕಠಿಣ ಶಿಕ್ಷೆಗಳನ್ನು ನೀಡುವ ನ್ಯಾಯಾಧೀಶನ ಕಾರ್ಯವನ್ನೇ ಮಾಡುತ್ತಾ ಕೂರುವದಿಲ್ಲ. ಅದು ವಿಶ್ವದಲ್ಲಿ ದಿವ್ಯತೆಯನ್ನು ಸ್ಥಾಪಿಸುವ ಸಂಸ್ಥಾಪಕನಾಗಿದೆ, ಪ್ರಾಪಂಚಿಕದಲ್ಲಿ ವಿಕಸನವನ್ನು ತರುವ ಪ್ರಸ್ಥಾಪಕನಾಗಿದೆ, ಮರ್ತ್ಯದಲ್ಲಿ ಬೆಳೆಯುತ್ತಿರುವ ಅಮರ್ತ್ಯದ ಅಂಶವಾಗಿದೆ. ಆ ಅಮರ್ತ್ಯದ ಅಂಶವು ಸುಖ–ದುಃಖಗಳನ್ನು ತರುವ ಆ ನಿಬಂಧನೆಗಳನ್ನೂ ಮೀರಿ ಬೆಳೆಯುತ್ತದೆ. ಮಾನವತೆಯನ್ನು ಬೆಳೆಸುತ್ತದೆ. ಈ ಸುಖ–ದುಃಖಗಳು ನಮ್ಮ ಮರ್ತ್ಯದ ಪ್ರಾಥಮಿಕ ಹಂತದ ಅಸ್ತಿತ್ವವನ್ನು ಆಳುತ್ತಿರುತ್ತದೆ. ಈ ಪ್ರಾಥಮಿಕ ಹಂತದಲ್ಲಿ ಕೇವಲ ಸುಖವನ್ನೇ ಪಡೆಯಬೇಕೆಂದು, ದುಃಖವನ್ನು ಹೊಂದಲೇಬಾರದೆಂದು ನಮ್ಮನ್ನು ಪ್ರೇರೇಪಿಸುತ್ತದೆ. ಅದ್ಕಕಾಗಿ

ಹಲವಾರು ಆಮಿಷಗಳನ್ನು ಒಡ್ಡುತ್ತದೆ. ಆದರೆ, ಇವು ನಮ್ಮ ಸಾಮರ್ಥ್ಯವನ್ನು ಒರೆಗೆ ಹಚ್ಚಲು ಬಂದಿರುವ ಪ್ರಾಯೋಗಿಕ ಪರೀಕ್ಷೆಗಳಾಗಿರುತ್ತವೆ; ಆದರೆ, ನಮ್ಮ ಪ್ರಜ್ಞೆಯು ಬೆಳೆಯುತ್ತ ಹೋದಂತೆ ಈ ಅವಲಂಬನೆಗಳು ಗೌಣವಾಗಿ ಕಾಣಲು ಆರಂಭಿಸುತ್ತವೆ. ಹಾಗೂ ನಮಗೆ ಅವುಗಳನ್ನು ಮೀರಿ ಮೇಲೇರುವ ಸಾಮರ್ಥ್ಯವು ಬರುತ್ತದೆ. ಆಗ ನಮ್ಮೊಳಗೆ ನಮ್ಮ ಕರ್ಮವನ್ನು ಆಧ್ಯಾತ್ಮಿಕ ನಿಯಮಗಳ ಅಡಿಯಲ್ಲಿ ಅಭಿವೃದ್ಧಿ ಪಡಿಸಬೇಕೆಂಬ ಅಭೀಪ್ಸೆಯು ಜಾಗೃತವಾಗುತ್ತದೆ.

ನಮ್ಮದೇ ಆದ ಉನ್ನತ ಕ್ರಿಯೆಯ ಪ್ರೇರಣೆಗಳನ್ನು ಪರಿಗಣಿಸಿದಾಗ ಇದು ಸ್ಪಷ್ಟವಾಗುತ್ತದೆ. ಸತ್ಯದ ಮಾರ್ಗದಲ್ಲಿ ಕೆಲವೊಮ್ಮೆ ಶಿಕ್ಷೆ–ಯಾತನೆಗಳನ್ನು ಅನುಭವಿಸಬೇಕಾಗಬಹುದು; ನಮ್ಮ ದೇಶಕ್ಕಾಗಿ ನಮ್ಮ ಸ್ವಂತದಾದ ಸುಖ–ಸೌಭಾಗ್ಯಗಳನ್ನು ಪರಿತ್ಯಜಿಸುವ ಪ್ರಮೇಯವು ಬಂದೊದಗಬಹುದು. ಅಥವಾ ಅದು ನಮ್ಮ ಆತ್ಮ ನಾಶವನ್ನೇ ಬೇಡಬಹುದು. ಆಗ ಅದು ನಮ್ಮ ಸಂಕಲ್ಪ ಶಕ್ತಿಯ ತೀವ್ರತೆಯನ್ನು ಪರೀಕ್ಷಿಸುತ್ತಿರುತ್ತದೆ. ನಮ್ಮ ಆರೋಹಣವೂ ಸಹ ನಮ್ಮ ಸಂಕಲ್ಪದ ಮೇಲೆಯೇ ಅವಲಂಬಿತವಾಗಿರುತ್ತದೆ. ನಮ್ಮ ತ್ಯಾಗ–ಔದಾರ್ಯಗಳೇ ನಮ್ಮನ್ನು ಮುನ್ನಡೆಸುತ್ತದೆ. ಆಗ ನಾವು 'ಸತ್ಯದ ಮಾರ್ಗವನ್ನೇ ಅನುಸರಿಸುವೆನು, ನನ್ನ ಜನಾಂಗಕ್ಕಾಗಿ–ದೇಶಕ್ಕಾಗಿ ನನ್ನ ಆತ್ಮವನ್ನೂ ಸಹ ನೀಡಲು ನಾನು ಸಿದ್ಧನಿದ್ದೇನೆ' ಎಂಬ ದೃಢ ಸಂಕಲ್ಪವನ್ನು ಕೈಗೊಳ್ಳಬೇಕು. ಅದನ್ನು ಸಿದ್ಧಿಸಿಕೊಳ್ಳುವ ಮುನ್ನ ನಮ್ಮ ಆಂತರ್ಯದ ಶಕ್ತಿಯನ್ನು ಸಬಲಪಡಿಸಿಕೊಳ್ಳಬೇಕು. ನಮ್ಮ ಕರ್ಮಕ್ಕೆ ಬದಲಾಗಿ ಫಲವನ್ನು ಅಪೇಕ್ಷಿಸಬಾರದು, ನಮಗೆದುರಾಗಿ ಬರುವ ನೋವು–ಯಾತನೆಗಳಿಗೆ ಹೆದರಬಾರದು. ಪ್ರಸ್ತುತ ಬದುಕಿನಲ್ಲಿ ನಮ್ಮಿಂದ ಜರುಗುವ ಕರ್ಮದ ಘಟನೆಗಳು ನಮ್ಮ ಭವಾಂತರಗಳ ಸರಣಿ ಮಾಲೆಯಲ್ಲಿ ನಮ್ಮ ಜೊತೆ–ಜೊತೆಯಾಗಿಯೇ ನಡೆಯುತ್ತಿರುತ್ತವೆ. ಆ ಅನೇಕ ಭವಗಳಲ್ಲಿ ನಮ್ಮ ಉನ್ನತಿ–ಅವನತಿಗಳನ್ನು ಅವುಗಳೇ ನಿರ್ಧರಿಸುತ್ತವೆ. ಹಾಗಾಗಿ, 'ಈಗಿನ ಭವದಲ್ಲಿ ನೋವು–ಯಾತನೆಗಳನ್ನು ಎದುರಿಸಿಯಾದರೂ ಪರವಾಗಿಲ್ಲ. ಎಲ್ಲ ರೀತಿಯ ಕಷ್ಟ–ಕಾರ್ಪಣ್ಯಗಳನ್ನು ಗೆದ್ದು, ಈ ಮನುಕುಲದ ಉನ್ನತಿಯಲ್ಲಿ ನನ್ನ ಕೈಲಾದ ಸೇವೆಯನ್ನು ಮಾಡುತ್ತೇನೆ' ಎಂದು ನಿರ್ಧರಿಸಬೇಕು. ಅದನ್ನೇ ನಮ್ಮ ಜೀವನದ ಮುಖ್ಯ ಗುರಿಯನ್ನಾಗಿಸಿಕೊಳ್ಳಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/373–74 – ಶ್ರೀ ಅರವಿಂದರು**

# ಆಧ್ಯಾತ್ಮಿಕ ಪ್ರಜ್ಞೆಯ ಬೀಜಗಳು

**– ಅನು: ಪುಟ್ಟು ಕುಲಕರ್ಣಿ**

ಕಾರಣವನ್ನು ಅರಸುತ್ತ ಹೋದಲ್ಲಿ ನಾನು ವಿಘಟಿತಗೊಳ್ಳುತ್ತೇನೆ, ನಾನು ಬಹುತೇಕವಾಗಿ ಕುಂಠಿತಗೊಳ್ಳುತ್ತೇನೆ; ನನ್ನ ದೃಷ್ಟಿಕೋನದಲ್ಲಿಯೇ ನಾನು ನನ್ನನ್ನು ಕಳೆದುಕೊಂಡಲ್ಲಿ, ಆಗ ಜಗತ್ತಿನಲ್ಲಿ ಕೇವಲ ಕುರೂಪದಿಂದ ಕೂಡಿದ ಮತ್ತೆ ವಿಕರ್ಷಕವಾಗಿರುವದರಿಂದಲೇ ನಾನು ಬಲಿಯಾಗಿದ್ದೇನೆ, ಆದರೆ ಅವುಗಳನ್ನು ನಾನೆಂದೂ ಮುಂದೆ ಕಾಣಲೇ ಇಲ್ಲ.

*

ಪರಮಾತ್ಮನು ನನ್ನ ಚಕ್ಷುಗಳನ್ನು ತೆರೆದಿದ್ದಾನೆ; ಅಪವಿತ್ರದಲ್ಲಿಯೂ ಪವಿತ್ರವನ್ನೇ ಕಂಡಿದ್ದೇನೆ, ವಿಕರ್ಷಣೆಯಲ್ಲಿಯೂ ಮತ್ತು ವಿಕಲತೆಯಲ್ಲಿಯೂ ಇರುವ ಪರಿಪೂರ್ಣತೆ ಮತ್ತು ಘೋರತೆಯಲ್ಲಿಯೂ ಇರುವ ಸೌಂದರ್ಯವನ್ನು ನಾನು ಕಂಡಿದ್ದೇನೆ.

*

ಇತಿಹಾಸದಲ್ಲಿ ಮಹತ್ತರವಾಗಿರುವ ಮತ್ತು ಪ್ರಾಮುಖ್ಯವಾಗಿರುವ ನಾಲ್ಕು ಘಟನೆಗಳಿವೆ, ಟ್ರಾಯ್ ನಗರದ ದಿಗ್ಬಂಧನ, ಕ್ರಿಸ್ತನನ್ನು ಶಿಲುಬೆಗೇರಿಸಿದ ಘಟನೆ, ವೃಂದಾವನದಿಂದ ಶ್ರೀಕೃಷ್ಣನ ನಿರ್ವಾಸನ ಮತ್ತು ಕುರುಕ್ಷೇತ್ರದಲ್ಲಿ ಅರ್ಜುನನ ಸಂಗಡ ಕೃಷ್ಣನ ವಾರ್ತಾಲಾಪ. ಇಲ್ಲಿ ಟ್ರಾಯ್ ನಗರದ ದಿಗ್ಬಂಧನವು ಹೆಲ್ಲಾಸ್ (ಗ್ರೀಕ್‌ನ ಪ್ರಾಚೀನ ಹೆಸರು)ನ್ನು ರೂಪಿಸಿತು. ವೃಂದಾವನದಿಂದ ನಿರ್ವಸನಗೊಂಡ ಘಟನೆಯು ಭಕ್ತಿಪೂರ್ಣವಾದ ಪಂಥವನ್ನು ನಿರ್ಮಿಸಿತು (ಇದಕ್ಕಿಂತ ಪೂರ್ವದಲ್ಲಿ ಕೇವಲ ಧ್ಯಾನ ಮತ್ತು ಆರಾಧನೆಗಳು ಮಾತ್ರ ಪ್ರಚಲಿತವಿದ್ದವು.) ಕ್ರಿಸ್ತನ ಶಿಲುಬೆಯ ಕಾರಣದಿಂದಾಗಿ ಯುರೋಪು ಮಾನವೀಯ ಗುಣವನ್ನು ರೂಢಿಸಿಕೊಂಡಿತು, ಅದೇ ರೀತಿಯಲ್ಲಿ ಕುರುಕ್ಷೇತ್ರದ ಕೃಷ್ಣಾರ್ಜುನರ ವಾರ್ತಾಲಾಪವು ಮಾನವೀಯತೆಯನ್ನು ಆರೋಹಣದತ್ತ ಸಾಗಿಸಿತು. ಹೀಗಾಗಿ ಈ ಮೇಲ್ಕಂಡ ನಾಲ್ಕೂ ಘಟನೆಗಳು ಈ ಹಿಂದೆ ನಡೆದಿರಲಿಲ್ಲ.

*

ವಿರೋಧಾಭಾಸವಾಗಿರುವದೂ ಸಹಿತ ಅನ್ವಯದಲ್ಲಿ ಮತ್ತು ಅದರದೇ ಆಗಿರುವ ಸಮಯದಲ್ಲಿ ಅದು ನೈಜವೇ ಆಗಿರುವದೂ ಸಹಿತ ಸತ್ಯ ಘಟನೆಗಳ

ನೈಜತೆಯಂತೆಯೇ ಇರುತ್ತದೆ; ನಿರ್ವಿವಾದವಾಗಿರುವ ಸಿದ್ಧಾಂತಗಳು(ವಾದಗಳು) ಮಿಥ್ಯಾಗ್ರಹಿಕೆಯಲ್ಲಿ ಅತ್ಯಂತ ಪ್ರಮಾದಕಾರಿಯಾಗಿಯೇ ಇರುತ್ತವೆ.

*

ಸ್ವಯಂ–ಪರಿಪೂರ್ಣತೆಯು (ಧರ್ಮಾತಿರೇಕ ಭಾವವು) ಗುಣದ ಪರಮ ಶತ್ರುವಾಗಿದ್ದರೆ, ತರ್ಕವೆನ್ನುವದು ಸತ್ಯದ (ಋತದ) ಪರಮ ಶತ್ರು, ಏಕೆಂದರೆ ಇಲ್ಲಿ ಸ್ವಯಂಭಾವದ ಅತಿರೇಕದಿಂದ ನಿರ್ಮಾಣಗೊಳ್ಳುವ ತನ್ನದೇ ತಪ್ಪುಗಳನ್ನಾಗಲಿ ಅಥವಾ ಅಪರಿಪೂರ್ಣತೆಯನ್ನಾಗಲೀ ಇದು ಕಾಣುವದಿಲ್ಲ.

*

ಓ ವರುಣನೇ ನನ್ನ ಮೇಲೆ ವಿಸ್ತೃತಗೊಳ್ಳು; ಓ ಇಂದ್ರನೇ ನನ್ನಲ್ಲಿ ಬಲಗೊಳ್ಳು; ಓ ಸೂರ್ಯನೇ ನನ್ನಲ್ಲಿ ಮತ್ತೂ ಮತ್ತೂ ಪ್ರಖರವಾಗಿ ಕಾಂತಿದುಂಬಿ ಪ್ರಕಾಶಗೊಳ್ಳು; ಓ ಚಂದ್ರನೇ ನನ್ನಲ್ಲಿ ಮತ್ತೂ ಮೋಹಕತೆಯಿಂದ ಹಾಗೂ ಮಧುರತೆಯಲ್ಲಿ ಪೂರ್ಣಗೊಳ್ಳು; ಓ ರುದ್ರನೇ, ಇನ್ನೂ ಉಗ್ರನಾಗಿ ಮತ್ತು ಭಯಾನಕವಾಗು; ಪ್ರಚಂಡವಾಗಿ ಮತ್ತು ತೀವ್ರಾತಿತೀವ್ರವಾಗಿ ಓ ಮರುತರೆ; ಓ ಆರ್ಯಮಾ ಸಾಮರ್ಥ್ಯಪೂರ್ಣವಾಗಿ ಮತ್ತು ಧೀರರಾಗಿ; ಓ ಭಗನೇ ಭೋಗಪೂರ್ಣತೆಯ ಜೊತೆಗೆ ಆಹ್ಲಾದಮಯವಾಗು; ಓ ಮಿತ್ರನೇ ದಯಾಳುವಾಗು ಮತ್ತು ಪ್ರೇಮಪೂರಿತ ಭಾವದೊಂದಿಗೆ ಪ್ರೀತಿಸು; ಓ ಬೆಳಗೇ ತೇಜಪೂರ್ಣವಾಗಿ ಮತ್ತು ಸಾಕ್ಷಾತ್ಕಾರಿಸುವಂತಾಗು; ಓ ನಿಶೆಯೇ (ರಾತ್ರಿಯೇ) ನಿತಾಂತ ಗಭೀರತೆಯ ಜೊತೆಗೆ ಅರ್ಥಗರ್ಭಿತವಾಗು; ಓ ಜೀವವೇ (ಜೀವನವೇ) ಪೂರ್ಣವಾಗು, ಸದಾ ಸಿದ್ಧತೆಯಲ್ಲಿರು ಜೊತೆಗೆ ಸದಾ ಉಲ್ಲಸಿತನಾಗು; ಓ ಮೃತ್ಯುವೇ, ಲೋಕ ಲೋಕಗಳ ನೆಲೆಗೆ ನನ್ನನ್ನು ಹೆಜ್ಜೆ ಇಡುವಂತೆ ಮಾಡು. ಓ ಬ್ರಹ್ಮಣಸ್ಪತಿಯೇ ಇವೆಲ್ಲವನ್ನೂ ಸಮಂಜಸಗೊಳಿಸು; ಓ ಕಾಳಿಯೇ ಈ ಎಲ್ಲ ದೇವತೆಗಳಿಗೂ ನಾನು ವಿಷಯವಾಗದಂತೆ ಉಳಿಸು.

ಯಾವಾಗ ವಿವಾದಪೂರ್ಣವಾಗಿರುವದಕ್ಕೇ ಉತ್ಸುಕನಾಗಿರುತ್ತೇವೆಯೋ ಆಗ ಬರೀ ಚರ್ಚೆಯಲ್ಲಿಯೇ ಕಾಲಹರಣ ಮಾಡುತ್ತೇವೆ, ಆಗ ಕಲೆ ಎನ್ನುವದು ಸಂಪೂರ್ಣವಾಗಿ ಕರುಣಾಜನಕ ಹಂತವನ್ನು ತಲುಪುತ್ತದೆ. ಹೀಗಾದಲ್ಲಿ ಜ್ಞಾನದ ವಿಸ್ತಾರದಿಂದ ಲಭ್ಯವಾಗುವ ಅವಕಾಶವನ್ನು ಕಳೆದುಕೊಳ್ಳಬೇಕಾಗುತ್ತದೆ.

*

ಜ್ಞಾನದ ಬೆಳಗಿನ ಅನುಭವದೊಂದಿಗೆ ನಾನಿನ್ನೂ ಏನನ್ನೂ ಅರಿತಲ್ಲ ಮತ್ತು ಅತ್ಯಲ್ಪವನ್ನು ಅರಿತುಕೊಳ್ಳುತ್ತಿದ್ದೇನೆ ಎನ್ನುವದು ಗೊತ್ತಾಗುತ್ತದೆ. ಅದಲ್ಲದೇ, ನನಗಿರುವ ಜ್ಞಾನದ ಮಿತಿಯ ಬಗೆಗೆ ನಾನು ತಿಳಿದುಕೊಂಡಲ್ಲಿ, ನಾನು ಏನನ್ನು ಈಗಾಗಲೇ ಹೊಂದಿದ್ದೇನೆಯೋ ಅದನ್ನು ತಿಳಿದುಕೊಂಡಿದ್ದೇನೆ.

*

ಯಾವಾಗ ಪ್ರಜ್ಞೆಯು ಉದಿತಗೊಳ್ಳುತ್ತದೆಯೋ, ಅಲ್ಲಿರುವ ಪ್ರಪ್ರಥಮ ಪಾಠವೆಂದರೆ, 'ಜ್ಞಾನವೆನ್ನುವ ಯಾವುದೇ ಒಂದು ಸಂಗತಿ ಇಲ್ಲವೇ ಇಲ್ಲ; ಅನಂತಾನಂತವಾಗಿರುವ ದೇವತೆಯ ಕುರಿತು ವಿನೋದಪೂರ್ಣವಾಗಿರುವ ಅವಲೋಕನಗಳನ್ನೇ ನಾವು ಜ್ಞಾನವೆಂದು ರೂಪಿಸಿಕೊಂಡಿದ್ದೇವೆ.'

*

ಆನ್ವಯಿಕ ಪದ್ಧತಿಯಿಂದ ಲಭ್ಯಗೊಂಡ ಜ್ಞಾನವು ಒಂದು ಬೇರೆಯದೆ ಆದ ವಿಷಯವಾಗಿದೆ; ಇದು ನಿಜವಾಗಿರಬಹುದು ಮತ್ತು ಜೀವನಕ್ಕೆ ಸಮುಚಿತವಾಗಿ ಅನ್ವಯವೂ ಆಗುತ್ತಿರಬಹುದು, ಆದರೆ ಇದೆಂದೂ ಪರಿಪೂರ್ಣವಾಗಿರುವದಿಲ್ಲ. ಹೀಗಾಗಿ ಇದನ್ನು ಸುವ್ಯವಸ್ಥಿತವಾಗಿ ಸಂಹಿತೆಗೊಳಿಸುವ ಮತ್ತು ವಿಧಿಬದ್ಧ ಸೂತ್ರವಾಗಿದೆ.

*

ನೇರಾನೇರವಾಗಿ ಶ್ರವಣಗೊಂಡಿರುವ ಅಥವಾ ಋತದ (ಸತ್ಯದ) ಸ್ಮರಣೆಯಲ್ಲಿ ಪ್ರಭಾವಿತಗೊಂಡಿರುವ, ದೃಷ್ಟಗೊಂಡ ಮತ್ತೂ ಶ್ರುತಿ ಹಾಗು ಸ್ಮೃತಿಗಳು ಎಲ್ಲವೂ ಪ್ರಕಾಶನಗೊಂಡ ನೇರ ಅನುಭವಗಳಾಗಿವೆ; ಇದು ಅನುಭಾವದ ತುರೀಯಾವಸ್ಥೆಯಾಗಿದ್ದು ಅನುಭವಗಳ ಮೂಲಕ ಸದಾ ಲಭ್ಯಗೊಳ್ಳುತ್ತದೆ ಮತ್ತು ನವೀಕರಣಗೊಳ್ಳುವ ಅನುಭವಗಳ ಮೂಲಕ ಸದಾ ಕಾಲವೂ ಲಭ್ಯವಾಗುತ್ತದೆ. ಕೇವಲ ದೇವರು ಹೇಳಿದ್ದಾನೆ ಎಂದ ಮಾತ್ರಕ್ಕೆ ಅಲ್ಲ. ಆದರೆ ಇದನ್ನು 'ಆತ್ಮವು' ಅನುಭೂತಿಗೊಂಡಿದೆ ಎನ್ನುವ ಕಾರಣದಿಂದ, ಇದು ಆ ಪರಮೋಚ್ಚ ದೈವತ್ವದ ಶಾಸ್ತ್ರಬದ್ಧ ಲಿಪಿಯಾಗಿದೆ.

*

**– ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

ಮತೀಯ ಚಿಂತನೆಯಲ್ಲಿ ಮತ್ತು ಅನುಭವದಲ್ಲಿ ಎಲ್ಲಾ ಅಲ್ಪತೆ, ಸಂಕುಚಿತತೆ ಮತ್ತು ಸಹನೆ ಇಲ್ಲದಿರುವಿಕೆಗಳನ್ನು ತಿರಸ್ಕರಿಸು. ಅತ್ಯಂತ ವಿಸ್ತಾರವಾದ ದಿಗಂತಗಳಿಂದ ವಿಸ್ತಾರವಾಗಿರು. ಅತ್ಯುನ್ನತ ಕಾಂಚನಗಂಗಾಗಿಂತಲು ಎತ್ತರದಲ್ಲಿರು. ಅತ್ಯಂತ ಆಳವಾದ ಸಾಗರಗಳಿಗಿಂತಲೂ ಹೆಚ್ಚು ಆಳವಾದ ಗಾಂಭೀರ್ಯತೆಯನ್ನು ಹೊಂದಿರು.

*

ಸೂರ್ಯನ ಸಂಯೋಜನೆ ಅಥವಾ ಮಂಗಳ ಗ್ರಹದ ಗೆರೆಗಳನ್ನು ವೀಕ್ಷಿಸುವದು ನಿಜಕ್ಕೂ ಒಂದು ಶ್ರೇಷ್ಠ ಸಾಧನೆ; ಆದರೆ ಒಂದು ಚಿತ್ರವನ್ನು ನೋಡುವ ರೀತಿಯಲ್ಲಿ ಮಾನವನ ಆತ್ಮವನ್ನು ನಿನಗೆ ತೋರಿಸುವ ಉಪಕರಣವನ್ನು ನೀನು ಹೊಂದಿದ್ದರೆ, ಆಗ ನೀನು ಭೌತ ವಿಜ್ಞಾನದ ಅದ್ಭುತಗಳನ್ನು ಮಕ್ಕಳ ಅಟಿಕೆಗಳೆಂಬಂತೆ ಭಾವಿಸಿ ಮುಗುಳ್ನಗುವೆ.

*

ತನ್ನ ಸಾಧನೆಗಳೊಂದಿಗೆ ಜ್ಞಾನವು ಒಂದು ಮಗುವಿನಂತೆ ಇದೆ. ಏಕೆಂದರೆ ಏನನ್ನಾದರೂ ಕಂಡಾಗ ಅದು ಹರ್ಷೋದ್ಗಾರಗಳೊಂದಿಗೆ ಕೂಗಾಡುವದು; ಚಿಂತನಾಯುಕ್ತ ಮತ್ತು ಬಲವಾದ ಮೌನದಲ್ಲಿ ಮೇಧಾವಿತನವು ತನ್ನದನ್ನು ಬಹುಕಾಲ ಅಡಗಿಸಿಕೊಳ್ಳುವದು.

*

ಎಲ್ಲಾ ಜ್ಞಾನವನ್ನು ಜಯಿಸಿದೆಯೋ ಎಂಬಂತೆ ವಿಜ್ಞಾನವು ಮಾತನಾಡುವದಲ್ಲದೆ ಅಂತೆಯೇ ತೋರ್ಪಡಿಸಿಕೊಳ್ಳುವದು. ಮೇಧಾವಿತನವು ಮುನ್ನಡೆಯುತ್ತಿದ್ದಂತೆ, ಅಗಣಿತ ಸಾಗರಗಳ ಅಂಚಿನಲ್ಲಿ ಆಕೆಯ ಏಕೈಕ ನಡೆಯ ಪ್ರತಿಧ್ವನಿಯನ್ನು ಆಳಿಸುವಳು.

*

ತನ್ನಿಂದ ಹಾರಿಹೋಗಲು ಪ್ರಯತ್ನಿಸುತ್ತಿರುವ ಒಂದು ರಹಸ್ಯ ಆಕರ್ಷಣೆಯ ಸಂಕೇತವಾಗಿದೆ ದ್ವೇಷ. ತನ್ನ ಸ್ವಂತ ಅಸ್ತಿತ್ವವನ್ನು ಇಲ್ಲವೆಂದರೆ ಕೋಪಗೊಳ್ಳುವದು. ತನ್ನ ಪ್ರಾಣಿಗಳಲ್ಲಿ ಅದು ಸಹ ಭಗವಂತನ ಒಂದು ಕ್ರೀಡೆಯಾಗಿದೆ.

*

ಅಹಂಕಾರ ಮಾತ್ರವೇ ಪಾಪವಾಗಿದೆ, ಕೃಪಣತೆಯೇ ದುರ್ಬುದ್ಧಿ: ದ್ವೇಷವೇ ಅಪರಾಧಿತ್ವ, ಉಳಿದೆಲ್ಲವನ್ನೂ ಸುಲಭವಾಗಿ ಉತ್ತಮತೆಯ ಕಡೆ ತಿರುಗಿಸಬಹುದು. ಆದರೆ ಇವು ಹಠಮಾರಿತನದಿಂದ ದೈವವನ್ನು ವಿರೋಧಿಸುವವು.

*

ಬ್ರಹ್ಮವು ಪೂರ್ಣಾಂಕವಾಗಿರುವ ಒಂದು ಉದ್ದನೆಯ ಪುನರಾರ್ತನ ದಶಮಾಂಶವಾಗಿದೆ ಈ ಪ್ರಪಂಚ. ಅವಧಿಯು ಪ್ರಾರಂಭವಾಗಿ ಅಂತ್ಯಗೊಳ್ಳುವಂತೆ ಕಾಣುವದು. ಆದರೆ ಒಂದು ಅಂಶವು ನಿರಂತರವಾಗಿ ಇರುವದು. ಅದಕ್ಕೆ ಅಂತ್ಯವೆಂಬುದೇ ಇಲ್ಲ.

*

ಮತ್ತು ಅದು ಎಂದೂ ನೈಜ ಪ್ರಾರಂಭವನ್ನು ಹೊಂದಿರಲಿಲ್ಲ. ವಸ್ತುಗಳ ಪ್ರಾರಂಭ ಮತ್ತು ಅಂತ್ಯವು ನಮ್ಮ ಅನುಭವದ ಸಾಂಪ್ರದಾಯಿಕ ಪದಗಳು. ಅವುಗಳ ನಿಜವಾದ ಅಸ್ತಿತ್ವದಲ್ಲಿ ಈ ಪದಗಳಿಗೆ ನೈಜತೆಯೇ ಇಲ್ಲ, ಯಾವ ಪ್ರಾರಂಭವೂ ಇಲ್ಲ ಮತ್ತು ಅಂತ್ಯವೂ ಇಲ್ಲ.

*

“ಇನ್ನು ಮುಂದೆಯಾಗಲೀ, ಅಥವಾ ಹಿಂದೆಯಾಗಲೀ, ನಾನು ಅಥವಾ ನೀನು ಅಥವಾ ನಾವೆಲ್ಲರಾಗಲೀ ಅಥವಾ ಈ ರಾಜರಾಗಲೀ ಇಲ್ಲದಿರುವ ಸಮಯವೇ ಇಲ್ಲ. ಬ್ರಹ್ಮ ಮಾತ್ರವೇ ಅಲ್ಲ ಆದರೆ ಬ್ರಹ್ಮನಲ್ಲಿರುವ ಸತ್ತೆಗಳು ಮತ್ತು ವಸ್ತುಗಳು ಸಹ ನಿರಂತರವಾದವು; ನಮ್ಮ ಬಾಹ್ಯ ಚೇತನದಲ್ಲಿ ಅಡಗಿರುವ ಮತ್ತು ಹುಡುಕುವ ಆಟವಾಗಿದೆ ಅವುಗಳ ಸೃಷ್ಟಿ ಮತ್ತು ನಾಶ.

*

ಜ್ಞಾನದ ಕಡೆಗಿನ ವ್ಯವಸ್ಥೆಯ ಸಂಕೇತವಾಗಿದೆ ಏಕಾಂತತೆಯಲ್ಲಿನ ಪ್ರೇಮ. ಆದರೆ ಮಾರುಕಟ್ಟೆಯಲ್ಲಿ, ಕಾಳಗದಲ್ಲಿ, ಜನ ಜಂಗುಳಿಯಲ್ಲಿ ಏಕಾಂತತೆಯ ಸ್ಥಿರವಾದ ಅರಿವನ್ನು ನಾವು ಹೊಂದಿದ್ದಾಗ ಮಾತ್ರ ಸ್ವತಃ ಜ್ಞಾನವನ್ನು ಸಾಧಿಸಬಹುದು.

*

ಓರ್ವ ವಿಜ್ಞಾನಿಯ ಬಳಿಗೆ ಮಾನವನೋರ್ವನು ಬಂದು ನನಗೆ ಬೋಧಿಸು ಎಂದು ಕೇಳಿಕೊಂಡನು. ಬೋಧಕನು ಆತನಿಗೆ ಸೂಕ್ಷ್ಮದರ್ಶಕ ಮತ್ತು ದೂರದರ್ಶಕಗಳನ್ನು ತೋರಿಸಿದನು. ಆದರೆ ಆ ಮಾನವನು ನಕ್ಕು ಈ ರೀತಿ ಹೇಳಿದನು. ಇವುಗಳು ನೀನು ಮಾಧ್ಯಮವಾಗಿ ಉಪಯೋಗಿಸುವ ಗಾಜಿನ ಮೂಲಕ ಕಣ್ಣಿನ ಮೇಲೆ ಉಂಟಾಗಿರುವ ಭ್ರಮೆಗಳು ಮಾತ್ರ ಎಂಬುದು ಸುಸ್ಪಷ್ಟ. ನನ್ನ ಬರಿಗಣ್ಣಿನ ನೋಟಕ್ಕೆ ತೋರಿಸುವವರೆಗೂ ನಾನು ಇವುಗಳನ್ನು ನಂಬುವದಿಲ್ಲ". ನಂತರ ತನ್ನ ಜ್ಞಾನದ ವಿಶ್ವಾಸಾರ್ಹತೆಯನ್ನು ಅನೇಕ ಪ್ರಯೋಗಗಳು ಮತ್ತು ಪ್ರಾಸಂಗಿಕ ಸತ್ಯಗಳ ಮೂಲಕ ವಿಜ್ಞಾನಿಯು ಸಾದರ ಪಡಿಸಿದನು. ಆದರೆ ಆ ಮಾನವನು ಪುನಃ ನಕ್ಕು ಹೇಳಿದನು: ನೀನು ಯಾವುದನ್ನು ಸಾಕ್ಷಿ ಅಥವಾ ಪುರಾವೆಯೆಂದು ಕರೆಯುವೆಯೋ ನಾನು ಅದನ್ನು ಆಕಸ್ಮಿಕಗಳೆನ್ನುವೆ. ಅನೇಕ ಆಕಸ್ಮಿಕಗಳು ಪುರಾವೆಗಳನ್ನು ಉಂಟುಮಾಡುವದಿಲ್ಲ. ನಿನ್ನ ಪ್ರಯೋಗಗಳ ವಿಷಯಕ್ಕೆ ಬಂದಾಗ, ಸ್ಪಷ್ಟವಾಗಿ ಅವುಗಳು ಅಸಹಜ ಪರಿಸ್ಥಿತಿಗಳಲ್ಲಿ ಪರಿಣಾಮಕಾರಿಯಾಗಿವೆ. ಮತ್ತು ಪ್ರಕೃತಿಯ ಒಂದು ವಿಧದ ಅವಿವೇಕವನ್ನು ರೂಪಿಸುವವು. ಗಣಿತದ ಫಲಿತಾಂಶಗಳ ಎದುರು ನಿಂತಾಗ ಆತನು ಕೋಪಗೊಂಡು ಹೀಗೆ ಕೂಗಿದನು, "ಸ್ಪಷ್ಟವಾಗಿ ಇದು ಮೋಸ, ಅರ್ಥವಾಗದ ಮಾತುಗಳು ಮತ್ತು ಅಂಧ ಶ್ರದ್ಧೆ; ಯಾವುದೇ ನಿಜವಾದ ಶಕ್ತಿ ಮತ್ತು ಅರ್ಥವನ್ನು ಈ ಅಸಂಬದ್ಧ ಪಿತೂರಿಯ ಚಿತ್ರಗಳು ಹೊಂದಿವೆ ಎಂದು ನಾನು ನಂಬುವಂತೆ ಮಾಡಲು ನೀನು ಪ್ರಯತ್ನಿಸುವೆಯಾ?" ನಂತರ ಉಪಯೋಗರಹಿತ ಪೆದ್ದನೆಂದು ಆತನನ್ನು ವಿಜ್ಞಾನಿಯು ಹೊರಕ್ಕೆ ತಳ್ಳಿದನು; ಏಕೆಂದರೆ ತನ್ನದೇ ಆದ ನಿರಾಕರಣೆಗಳ ವ್ಯವಸ್ಥೆ ಮತ್ತು ನಕಾರಾತ್ಮಕ ತರ್ಕದ ವಿಧಾನಗಳನ್ನು ಆತನು ಗುರುತಿಸಿರಲಿಲ್ಲ. ನಾವು ನಿಷ್ಪಕ್ಷಪಾತದ ಮತ್ತು ತೆರೆದ ಮನದ ವಿಚಾರಣೆಯನ್ನು ನಿರಾಕರಿಸಲು ಬಯಸಿದರೆ ನಮ್ಮ ನಿರಾಕರಣೆಯನ್ನು ಮುಚ್ಚಲು ಅತ್ಯಂತ ಗೌರವಾನ್ವಿತ ಅನೇಕ ಅಕ್ಷರಗಳ ಪದವನ್ನು ನಾವು ಹುಡುಕಬಹುದು ಅಥವಾ ವಿಚಾರಣೆಯನ್ನು ವಿಫಲಗೊಳಿಸುವ ಪರೀಕ್ಷೆಗಳು ಮತ್ತು ನಿಯಮಗಳ ಒತ್ತಡವನ್ನು ಹೇರಬಹುದು.

*

ಭೌತದಲ್ಲಿ ನಮ್ಮ ಮನಸ್ಸುಗಳು ತೊಡಗಿದ್ದರೆ, ನೈಜತೆಯು ಭೌತ ಮಾತ್ರ ಎಂಬುದಾಗಿ ಚಿಂತಿಸುವವು. ನಾವು ಅಭೌತಿಕ ಚೇತನಕ್ಕೆ ಹಿಂದಿರುಗಿದರೆ, ಆಗ

ನಾವು ಭೌತವು ಒಂದು ಮುಸುಕು ಎಂಬುದನ್ನು ಕಾಣುವೆವು ಮತ್ತು ನೈಜತೆಯ ಸ್ಪರ್ಶವನ್ನು ಚೇತನದಲ್ಲಿಯ ಅಸ್ತಿತ್ವವು ಮಾತ್ರ ಹೊಂದಿದೆ ಎಂದು ಎನಿಸುವದು. ಹಾಗಾದರೆ ಈ ಎರಡರಲ್ಲಿ ಯಾವುದು ಸತ್ಯ? ಇಲ್ಲ, ಭಗವಂತನಿಗೆ ಮಾತ್ರ ಗೊತ್ತಿದೆ; ಆದರೆ ಎರಡರ ಅನುಭವವನ್ನೂ ಹೊಂದಿರುವವರು, ಯಾವ ಅವಸ್ಥೆಯು ಜ್ಞಾನದಲ್ಲಿ ಹೆಚ್ಚು ಫಲವತ್ತಾಗಿದೆ, ಹೆಚ್ಚು ಬಲಶಾಲಿ ಮತ್ತು ಹೆಚ್ಚು ಆನಂದಭರಿತ ಎಂಬುದನ್ನು ಸುಲಭವಾಗಿ ಹೇಳಬಲ್ಲರು.

*

ನಾವು ದೈವವನ್ನು ಅರ್ಥಮಾಡಿಕೊಂಡರೆ, ನಮ್ಮ ಅಹಂಕಾರಭರಿತ ಮತ್ತು ಅಜ್ಞಾನಭರಿತ ಮಾನವರ ಮಾನದಂಡಗಳನ್ನು ತ್ಯಜಿಸಬೇಕು ಅಥವಾ ಅವುಗಳನ್ನು ಶ್ರೇಷ್ಠಗೊಳಿಸಿ ವಿಶ್ವಾತೀತಗೊಳಿಸಬೇಕು.

*

ಉತ್ತಮನಾದ ಮಾನವನು ಮರಣ ಹೊಂದುವನು ಅಥವಾ ಪರಾಜಯ ಹೊಂದುವನು ಮತ್ತು ದುಷ್ಟರು ಜೀವಿಸಿ ಜಯವನ್ನು ಹೊಂದುವರು ಎಂಬ ಕಾರಣದಿಂದ ಭಗವಂತನು ದುಷ್ಟನೇ? ಈ ಪರಿಣಾಮದ ತರ್ಕವು ನನಗೆ ಅರ್ಥವಾಗುತ್ತಿಲ್ಲ.

*

ಮರಣ ಮತ್ತು ಪರಾಭವಗಳು ದುಷ್ಟತೆ ಎಂಬುದನ್ನು ನನ್ನ ಮನಸ್ಸು ಮೊದಲು ಒಪ್ಪಬೇಕಾಗಿದೆ; ನಾನು ಕೆಲವೊಮ್ಮೆ ಯೋಚಿಸಿದಂತೆ ಅವು ಬಂದಾಗ, ಆ ಕ್ಷಣಕ್ಕೆ ಅವುಗಳು ಅತ್ಯುತ್ತಮವಾದವು ಎನಿಸುವದು. ಆದರೆ ನಾವು ನಮ್ಮ ಹೃದಯಗಳು ಮತ್ತು ಮನಸ್ಸಿನ ಗುಲಾಮರು. ನಮಗೆ ಪ್ರಿಯವಾಗದೆ ಇರುವದು ದುಷ್ಟತೆ ಎಂದು ವಾದ ಮಾಡುವೆವು! ಎಲ್ಲಾ ದೋಷ ಮತ್ತು ದುಃಖಗಳಿಗೆ ಉಪಶಮನ ನೀಡುವದು ಪರಿಪೂರ್ಣ ಬ್ರಹ್ಮಾಂಡದ ದರ್ಶನ ಮತ್ತು ಬ್ರಹ್ಮಾಂಡ ಮನೋಭಾವ ಆದರೆ ತಮ್ಮ ಅಹಂಕಾರದ ಪರಿಧಿಯನ್ನು ಹಿಗ್ಗಿಸಿಕೊಳ್ಳುವದರಲ್ಲೇ ಬಹುಪಾಲು ಜನರು ಸಫಲರಾಗುವರು.

*

ನಿನ್ನ ಜೀವವು ಭಿನ್ನತೆಗಳನ್ನು ಹೊಂದಿರುವವರೆಗೂ ದುಃಖಪಡುತ್ತಿರುವ ಪ್ರಾಣಿಗಳಿಗಾಗಿ ಕರುಣೆಯನ್ನು ಕಾದಿರಿಸಬಹುದು. ಆದರೆ ಮಾನವತೆಯು ಇನ್ನೂ ಹೆಚ್ಚಿನದೇನನ್ನೋ ನಿನ್ನಿಂದ ಬಯಸುವದು. ಅದು ಪ್ರೇಮವನ್ನು ಕೇಳುವದು, ಅರ್ಥಮಾಡಿಕೊಳ್ಳಬೇಕೆಂದು ಹೇಳುವರು, ಸಹಭಾಗಿತ್ವವನ್ನು ಕೇಳುವರು. ಸಮಾನತೆ ಮತ್ತು ಭ್ರಾತೃತ್ವದ ನೆರವನ್ನು ಅಪೇಕ್ಷಿಸುವದು.

*

ಉತ್ತಮತೆಯ ಕಡೆ ಅನುರಾಗವನ್ನು ಹೊಂದಿರುವ ಜೀವಕ್ಕೆ ಉತ್ತಮರಾದವರು ಕೆಲವೊಮ್ಮೆ ಉಂಟುಮಾಡುವ ತೊಂದರೆ ಮತ್ತು ದುಷ್ಟರು ಪ್ರಪಂಚವನ್ನು ಉತ್ತಮಗೊಳಿಸಲು ನೀಡುವ ಕೊಡುಗೆಗಳು ದುಃಖವನ್ನು ತರುವದು. ಆದರೇನು, ದುಃಖಿಸಬೇಡ ಅಥವಾ ಹಾಳಾಗಬೇಡ. ಆದರೆ ಅದಕ್ಕೆ ಬದಲಾಗಿ ಅಧ್ಯಯನ ಮಾಡಿ ಸಮಾಧಾನದಿಂದ ಮಾನವರೊಂದಿಗಿನ ಭಗವಂತನ ಹಾದಿಗಳನ್ನು ಅರ್ಥ ಮಾಡಿಕೋ.

*

ನಿನ್ನ ಜೀವದ ಬಲವಾದ ಪ್ರಯತ್ನ ಮತ್ತು ಪ್ರಗತಿಗಾಗಿಯೇ ರಚಿತವಾಗಿವೆ ಸದ್ಗುಣ ಮತ್ತು ದುರ್ಗುಣ; ಆದರೆ ಅವುಗಳ ಫಲವು ಭಗವಂತನಿಗೆ ಸೇರಿದ್ದು. ಆತನು ಅವುಗಳ ಆಚೆ ತನ್ನನ್ನು ತಾನು ತೃಪ್ತಿಗೊಳಿಸಿಕೊಳ್ಳುವನು.

*

ಆಂತರ್ಯದಲ್ಲಿ ಜೀವಿಸು; ಬಾಹ್ಯದ ಘಟನೆಗಳಿಂದ ವಿಚಲಿತನಾಗಬೇಡ.

*

ಅನುಕಂಪದ ಪ್ರದರ್ಶನಕ್ಕಾಗಿ ಎಲ್ಲೆಂದರಲ್ಲಿ ಎಲ್ಲಾ ಕಡೆ ದಾನ ಮಾಡಲು ಹೋಗಬೇಡ; ನಿನ್ನ ಸಹಾಯವು ಎಲ್ಲಿ ಅವಶ್ಯಕವೋ ಅದನ್ನು ಅರ್ಥಮಾಡಿಕೊಂಡು ಪ್ರೀತಿಸು. ಆಂತರ್ಯದಲ್ಲಿ ನಿನ್ನ ಜೀವವು ವೃದ್ಧಿಸಲಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/424–449 – ಶ್ರೀ ಅರವಿಂದರು**

## ಶ್ರೀ ಅರವಿಂದರ
## ‘ಗೀತಾ ಪ್ರಬಂಧಗಳು’

**– ಅನುವಾದ: ಜಾನ್ವಿ**

**42**

### ಎರಡನೆಯ ಸರಣಿ:
### ಅಧ್ಯಾಯ – 6
### ಕರ್ಮ, ಭಕ್ತಿ ಮತ್ತು ಜ್ಞಾನ (6/1)

ಇದೇ ಪರಮ ಗುಹ್ಯ, ಪರಮ ಶ್ರೇಷ್ಠ, ಜ್ಞಾನ, ಸಮಗ್ರ ಸತ್ಯ–ಈಶ್ವರನು ವಿಶ್ವೋತ್ತೀರ್ಣನಾಗಿದ್ದಾನೆ, ಪರಮ ಶಾಶ್ವತನಾದ ಪರಬ್ರಹ್ಮನು ದೇಶ ಕಾಲಾತೀತ ಅಸ್ತಿತ್ವವನ್ನು ತನ್ನೊಳಗೆ ಭರಿಸಿದ್ದಾನೆ. ವಿಶ್ವಾತ್ಮಕ ಪ್ರಕಟನೆ ಎಲ್ಲವೂ ಅವನೇ ಆಗಿದ್ದು ದೇಶ ಕಾಲ ಬದ್ಧ ಪ್ರಕೃತಿ ಕೂಡ ಅವನೇ ಆಗಿದ್ದಾನೆ. ಪರಮೋಚ್ಚ ಆತ್ಮೈಕ ವಸ್ತುವಾದ ಅವನು ವಿಶ್ವದಲ್ಲಿನ ಎಲ್ಲ ರೂಪ ಸಾರವುಳ್ಳ ವಸ್ತುಗಳಿಗೆ ಚಲನೆಗಳಿಗೆ ಆಧಾರನಾಗಿದ್ದಾನೆ. ಅವನೇ ಪರಮಾತ್ಮನೆನಿಸಿಕೊಳ್ಳುತ್ತಾನೆ. ಅವನೇ ಪರಮ ಪುರುಷೋತ್ತಮನು, ಎಲ್ಲ ಆತ್ಮ ಸತ್ತೆಗಳು, ಜೀವ–ಜೀವಿಗಳು, ಸಮಸ್ತ ಪ್ರಕೃತಿ, ಎಲ್ಲ ಸತ್ ಮತ್ತು ಸಂಭೂತಿ (becoming), ಈ ವಿಶ್ವದಲ್ಲಿನ ಅಥವಾ ಇನ್ನಾವುದೇ ವಿಶ್ವದಲ್ಲಿನ ಸಮಸ್ತ ಪ್ರಕಟನೆಗಳೆಲ್ಲವೂ ಆ ಪುರುಷೋತ್ತಮನ ಆತ್ಮ ಪರಿಕಲ್ಪನೆ ಹಾಗೂ ಆತ್ಮ–ಶಕ್ತಿಗಳೇ ಆಗಿವೆ. ಪುರುಷೋತ್ತಮನೇ ಸಮಸ್ತ ವಿಶ್ವದ–ಅಸ್ತಿತ್ವದ ಪ್ರಭು, ಸ್ವಾಮಿ; ತನ್ನ ಆಧ್ಯಾತ್ಮಿಕ ನಿಯಂತ್ರಣದ ಮೂಲಕ ಸಮಸ್ತ ಪ್ರಕಟಿತ ರೂಪಾಕಾರಗಳನ್ನು ವೈಶ್ವಿಕ ಚಾಕ್ರಿಕ ಆವರ್ತನಗಳಲ್ಲಿ ತಿರುಗಿಸುತ್ತ ಅವುಗಳ ವಿಕಾಸವನ್ನು ಸಂಪನ್ನಗೊಳಿಸುತ್ತಾನೆ. ಅವನನ್ನೇ ಪರಮೇಶ್ವರ, ಪರಮಾತ್ಮ ಎಂದು ನಾವು ಕರೆಯುತ್ತೇವೆ. ಅವನ ಮೂಲಕವೇ ಜೀವ, ಪ್ರತ್ಯೇಕ ಆತ್ಮ, ಪ್ರಕೃತಿಯಲ್ಲಿನ ಪೃಥನಾತ್ಮ, ಅವನ ಮೂಲಕವೇ ಅಸ್ತಿತ್ವ ಹೊಂದಿದ್ದು, ಅವನ ಚೈತನ್ಯದ ಬೆಳಕಿನ ಮೂಲಕವೇ ಪ್ರಜ್ಞೆ ಹೊಂದಿದ್ದು, ಅವನ ಜ್ಞಾನದ ಮೂಲಕವೇ ಜ್ಞಾನ ಸಂಪನ್ನವಾಗಿದ್ದು, ಅವನ ಶಕ್ತಿ, ಅವನ ಸಂಕಲ್ಪಗಳಿಂದಲೇ ಚಾಲಿತವಾಗಿದ್ದು, ಅವನ ಆನಂದದ ಮೂಲಕವೇ ಪ್ರಪಂಚದ ಆನಂದವನ್ನು ಅನುಭವಿಸುತ್ತಿದ್ದು, ಈ ಜಾಗತಿಕ ಚಕ್ರ ಭ್ರಮಣದಲ್ಲಿ ಸುತ್ತುತ್ತಿರುತ್ತವೆ.

ಮಾನವನಲ್ಲಿರುವ ಅಂತರಾತ್ಮನು inner soul / ಈಶ್ವರನ ಆಂಶಿಕ ಪ್ರಕಟನೆಯಾಗಿದ್ದಾನೆ. ಅವನು ಸ್ವಯಂ ಮಿತಿ ನಿರ್ಧರಿಸಿಕೊಂಡು ವಿಶ್ವದಲ್ಲಿನ ತನ್ನ ಕಾರ್ಯಗಳನ್ನು ನಿರ್ವಹಿಸುತ್ತಾನೆ. ಪ್ರಕೃತಿರ್ಜೀವಭೂತಾ ತನ್ನ ಆಧ್ಯಾತ್ಮಿಕ ಸತ್ವದಲ್ಲಿ ಪ್ರತ್ಯೇಕ ಜೀವಿಯಲ್ಲಿ ಪರಮಾತ್ಮನ ಜೊತೆ ಒಂದಾಗಿದ್ದಾನೆ. ದೈವಿ ಪ್ರಕೃತಿ ಕಾರ್ಯಗಳಲ್ಲಿ ಅವನು ಪರಮಾತ್ಮನ ಜೊತೆ ಏಕತೆ ಹೊಂದಿದ್ದಾನೆ; ಆದರೂ ಕಾರ್ಯಕಾರಿಣಿ ದೃಷ್ಟಿಯಿಂದ ಭಿನ್ನತೆ ಇದೆ, ಪ್ರಕೃತಿಯಲ್ಲಿನ ಭಗವಂತ ಹಾಗೂ ಪ್ರಕೃತಿಗಿಂತ ಎತ್ತರದಲ್ಲಿರುವ ಭಗವಂತನ ಜೊತೆಗಿನ ಸಂಬಂಧಗಳ ನಿರ್ವಹಣೆ ದೃಷ್ಟಿಯಿಂದ ಸಾಕಷ್ಟು ಭೇದ ಕೂಡ ಇದೆ. ನಿಮ್ನ ಪ್ರಕೃತಿಯ ಕಾರ್ಯಗಳಲ್ಲಿ ಅವನು ಅಜ್ಞಾನದ ಮೂಲಕ, ಅಹಂಕಾರ ಭೇದದ ಮೂಲಕ ಏಕೈಕನಾದ ಪರಮಾತ್ಮನಿಗಿಂತ ಬಹಳ ಬೇರೆಯಾಗಿ ತೋರುತ್ತಾನೆ; ವಿಚಾರ ಮಾಡುವಲ್ಲಿ, ಸಂಕಲ್ಪದಲ್ಲಿ, ಕಾರ್ಯ ಮಾಡುವಲ್ಲಿ, ಮತ್ತು ಭೋಗಾನುವೃತ್ತಿಯಲ್ಲಿ ಈ ರೀತಿಯ ಪ್ರವಿಭಕ್ತ ಪ್ರಜ್ಞೆಯಿಂದಾಗಿ ವೈಯಕ್ತಿಕ ಅಹಂಜನ್ಯ ಸಂತೋಷ ಹಾಗೂ ತನ್ನ ವೈಯಕ್ತಿಕ ಅಸ್ತಿತ್ವ–ಸತ್ತೆಯ ವಿಭಿನ್ನ ಸಂಬಂಧಗಳ, ಬೇರೆ ಬೇರೆ ಜಾಗತಿಕ ಸತ್ತೆ–ವ್ಯಕ್ತಿಗಳ ಸಂಬಂಧಗಳ ನಿರ್ವಹಣೆಯಲ್ಲಿ ಭಿನ್ನವಾಗಿಯೇ ವರ್ತಿಸುತ್ತಾನೆ, ತೋರಿಸುತ್ತಾನೆ. ಆದರೆ ವಾಸ್ತವವಾಗಿ ಅವನ ಎಲ್ಲ ಜೀವರಾಶಿ, ಅವನ ವಿಚಾರ, ಅವನ ಸಂಕಲ್ಪ ಮತ್ತು ಕಾರ್ಯ, ಸುಖ ಸಂತೋಷ ಎಲ್ಲವೂ ಕೇವಲ ಪ್ರತಿಫಲನಗಳೇ, ಎಲ್ಲವೂ ಮೂಲವಲ್ಲ ಎಲ್ಲವೂ ಕೇವಲ ತೋರಿಕೆ ಅಥವಾ ಅಹಂಜನ್ಯ ಪ್ರಕಟನೆಗಳೇ ಎಲ್ಲಿಯವರೆಗೆ ಅವನ ಅಜ್ಞಾನದ ಪರಧಿಯ ಒಳಗಡೆ ಇರುತ್ತಾನೊ ಅಲ್ಲಿಯವರೆಗೆ ಇವೆಲ್ಲವೂ ಭಗವಂತನ ಪ್ರತಿಫಲನಗಳೇ. ಪ್ರಕೃತಿಯ ಈ ಪ್ರತಿಫಲನಗಳಿಂದ ಬೇರ್ಪಟ್ಟು ತನ್ನ ಮೂಲ ಸತ್ಯಕ್ಕೆ ಮರಳಬೇಕಾದರೆ ಅವನಿಗಿರುವ ಏಕೈಕ ನೇರ ಮಾರ್ಗವೆಂದರೆ 'ಮೋಕ್ಷವೇ'. ಅವನ ವಿಶಾಲವಾದ, ಸಮೀಪವೆ, ಅಜ್ಞಾನದಿಂದ ಪಾರಾಗಿ ಪಲಾಯನ ಗೈಯಬಹುದಾದ ಏಕೈಕ ದಾರಿ 'ಮುಕ್ತಿ'ಯೊಂದೇ. ಜೀವನು ಆತ್ಮನೇ ಆಗಿದ್ದಾನೆ; ಮನಸ್ಸು ಮತ್ತು ತರ್ಕ ಶಕ್ತಿಯುಳ್ಳ, ಸಂಕಲ್ಪ ಹಾಗೂ ತದನು ಕಾರ್ಯ ಮಾಡಬಲ್ಲ, ಭಾವನಾತ್ಮಕ ಮತ್ತು ಸಂವೇದನಾತ್ಮಕವಾಗಿ ಜೀವನದಲ್ಲಿ ಸತ್ತೆಯ ಆನಂದವನ್ನು ಪಡೆಯಲು ಪ್ರಯತ್ನಿಸುವ, ಹಾಗೂ ತನ್ನೆಲ್ಲ ಶಕ್ತಿಗಳನ್ನು ಭಗವಂತನೆಡೆಗೆ ಉನ್ಮುಖಗೊಳಿಸಿ ಪರಮೋಚ್ಚ ಸತ್ಯವನ್ನು ಹೋಗಿ ತಲುಪುವುದು ಅಂತೆಯೇ ಅವನಿಗೆ

ನಿಜವಾಗಿಯೂ ಸಾಧ್ಯವಿದೆ. ತನ್ನ ಸಂಪೂರ್ಣ ಜ್ಞಾನದೊಂದಿಗೆ ಅವನು ಪುರುಷೋತ್ತಮನನ್ನು ಪರಬ್ರಹ್ಮನನ್ನು ಅರಿಯಬೇಕು. ತನ್ನೆಲ್ಲ ಭಕ್ತಿಯನ್ನು ಭಗವಂತನೆಡೆಗೆ ನೇರವಾಗಿ ತಿರುಗಿಸಬೇಕು. ತನ್ನ ಸಂಕಲ್ಪ, ಬಯಕೆ, ಭಕ್ತಿ, ಪ್ರೇಮ, ಕಾರ್ಯ, ಎಲ್ಲವನ್ನೂ ಭಗವಂತನಿಗೆ ಸಮರ್ಪಿಸಬೇಕು. ವಿಶ್ವ ಪ್ರಭುವಾದ ಭಗವಂತನಿಗೆ ಎಲ್ಲವನ್ನು ಅರ್ಪಣೆ ಮಾಡಬೇಕು. ಅಂದಾಗ ಮಾತ್ರ ಅವನು ನಿಮ್ನ ಪ್ರಕೃತಿಯಿಂದ ಉನ್ನತ ಪ್ರಕೃತಿಗೆ ಏರುತ್ತಾನೆ. ಅಜ್ಞಾನದ ವಿಚಾರ, ಇಚ್ಛೆ, ಕಾರ್ಯಗಳೆಲ್ಲವನ್ನೂ ತ್ಯಜಿಸಿ ದೈವೀ ವಿಚಾರ, ಸಂಕಲ್ಪ, ಕಾರ್ಯಗಳ ಮೂಲಕ ದೈವೀ ತಾದಾತ್ಮ್ಯವನ್ನು ಸಾಧಿಸುತ್ತಾನೆ. ದೈವಿ ಆತ್ಮದ ಜ್ಞಾನ, ಜ್ಯೋತಿ ಅಸ್ತಿತ್ವಗಳ ಜೊತೆ ಒಂದಾಗುತ್ತಾನೆ. ದೈವಿ ಅನಂತತೆಯನ್ನು ತನ್ನಂತರಂಗದಲ್ಲಿ ಅನುಭವಿಸುತ್ತ ಈ ಬಾಹ್ಯ ಸ್ಪರ್ಶ, ತೋರಿಕೆಗಳ ಜೊತೆ ಗೌಣ ಭಾವ ತಾಳುತ್ತಾನೆ. ಈ ರೀತಿ ದೈವಿಕವಾಗಿ ಬಾಳುತ್ತ ತನ್ನೆಲ್ಲ ಅಸ್ಮಿತೆ, ಆತ್ಮ ಮತ್ತು ಪ್ರಕೃತಿಯನ್ನು ಭಗವಂತನೆಡೆಗೆ ಉನ್ಮುಖಗೊಳಿಸಿ ಪರಮಾತ್ಮನ ಆಂತರಿಕ ಅಂತಃಸತ್ಯ–ಸತ್ಯದ ಜೊತೆ ಏಕೀಭವಿಸುತ್ತಾನೆ.

ಸಮಸ್ತ ಸೃಷ್ಟಿಯೇ ವಾಸುದೇವಮಯ ಎಂಬುದನ್ನರಿತು ಅದೇ ಜ್ಞಾನದಲ್ಲಿ ಜೀವಿಸುವುದೇ ನಿಜವಾದ ರಹಸ್ಯ ಅವನಿಗೆ ತಾನು ಆತ್ಮ ಎಂಬುದು ಗೊತ್ತು ತಾನು ಅವಿಕಾರಿ, ತಾನು ಎಲ್ಲವನ್ನು ಒಳಗೊಂಡಿರುವವನು ಮತ್ತು ಎಲ್ಲದರಲ್ಲೂ ಅಂತರ್ಯಾಮಿಯಾಗಿ ಇರುವವನು ಎಂಬುದು ಗೊತ್ತು ಗೊಂದಲ ಹಾಗೂ ವಿಕೃತಿಗಳ ಮಡು. ನಿಮ್ನ ಪ್ರಕೃತಿಯಿಂದ ಹಿಂದೆ ಸರಿದು ಸ್ವಯಂಭೂ ಆತ್ಮ ಚೈತನ್ಯದ ಬೆಳಕು ಸ್ಥಿರ ಹಾಗೂ ಪೂರ್ಣ ಶಾಂತಿಯಲ್ಲಿ ಜೀವಿಸುತ್ತಾನೆ. ಪರಮಾತ್ಮನ ಜೊತೆಗಿನ ಏಕತೆಯ ಅನುಭವವಾಧಾಗ, ಸರ್ವಾಂತರ್ಯಾಮಿಯಾದ ಪರಮಾತ್ಮನ ಜೊತೆಗೆ ಒಂದಾದಾಗ ಅವನು ವಿಶ್ವದಲ್ಲಿನ ಎಲ್ಲ ಚಲನೆ, ಕಾರ್ಯ ಹಾಗೂ ಸಂಗತಿಗಳಿಗೆ ಬೆಂಬಲ ನೀಡುತ್ತಾನೆ. ಈ ಅವಿಕಾರಿಯಾದ ಆಧ್ಯಾತ್ಮಿಕ ನೆಲೆಯಲ್ಲಿ ನಿಂತು, ಜಗತ್ತಿನ ಎಲ್ಲ ವಿಕಾರ ಹಾಗೂ ಬದಲಾವಣೆಗಳಿಗೆ ಅತೀತನಾಗಿ ಪರಮ ಶಾಶ್ವತನಾದ ವಿಶ್ವಾತೀತನಾದ ಸತ್ಯಕ್ಕೆ ಉನ್ಮುಖನಾಗುತ್ತಾನೆ. ಪರಮಾತ್ಮನೇ ನಿಜವಾಗಿ ಎಲ್ಲ ಜೀವಿಗಳ ಆತ್ಮದಲ್ಲಿ ವಾಸಮಾಡುವ ಚೈತನ್ಯವಾಗಿ, ಮಾನವನ ಹೃದಯದಲ್ಲಿ ಅದರ ಪ್ರಭುವಾಗಿ, ರಹಸ್ಯಮಯನಾದ ಈಶ್ವರನಾಗಿ

ಸಾಕ್ಷಾತ್ಕಾರವಾದಾಗ ತನ್ನ ಸಹಜ ಅಸ್ತಿತ್ವ ಹಾಗೂ ಅಂತರಂಗದಲ್ಲಿರುವ ಆಧ್ಯಾತ್ಮಿಕ ಪ್ರಭು ಇವರ ನಡುವಿನ ಪರದೆ ಸರಿದು ಹೋಗುತ್ತದೆ. ತನ್ನ ಎಲ್ಲ ಸಂಕಲ್ಪ, ವಿಚಾರ, ಚಿಂತನೆ, ಕಾರ್ಯ ಹಾಗೂ ಜ್ಞಾನದಲ್ಲಿ ಈಶ್ವರನ ಜೊತೆ ಒಂದಾಗುತ್ತಾನೆ, ಈಶ್ವರನ ಸಂಕಲ್ಪದ ಜೊತೆ ತನ್ನ ಸಂಕಲ್ಪ ಕಾರ್ಯಗಳನ್ನು ಜೋಡಿಸುತ್ತಾನೆ. ತನ್ನಂತರಂಗದಲ್ಲಿರುವ ಪರಮಾತ್ಮನ ಅನುಸಂಧಾನ ಅವನಿಗೆ ನಿರಂತರವಾಗಿ ಆಗುತ್ತದೆ, ಎಲ್ಲದರಲ್ಲೂ ಎಲ್ಲ ಬದಲಾವಣೆಗಳಲ್ಲೂ, ಮಾನವನ ಎಲ್ಲ ಕಾರ್ಯಗಳಲ್ಲೂ ಅವನು ಭಗವಂತನ ಉನ್ನತ ಅರ್ಥ ಉದ್ದೇಶವನ್ನೇ ಕಾಣುತ್ತಾನೆ. ತನ್ನ ಸುತ್ತಲಿನ ಪ್ರಪಂಚವೆಲ್ಲವೂ ಭಗವಂತನ ಮೂಲಕವೇ ಅಸ್ತಿತ್ವಕ್ಕೆ ಬಂದಿರುವುದನ್ನು ಅವನು ಬಲ್ಲನು. ಅವನು ನೋಡುವುದೇಲ್ಲವೂ ನಿಚ್ಚಳವಾಗಿ ಕಾಣುತ್ತ ಮೇಲಿನ (ಅಜ್ಞಾನದ) ಪರದೆ ಸರಿದು ಎಲ್ಲವೂ ಅಚಿಂತ್ಯ ಸತ್ಯದ ಸ್ವಯಂ ಪ್ರಕಟನೆಯ ಸಂಕೇತಗಳೆಂಬುದು ಅವನಿಗರಿವಾಗುತ್ತದೆ. ಎಲ್ಲೆಲ್ಲೂ ಅವನಿಗೆ ಆ ವಾಸುದೇವನೇ ಬ್ರಹ್ಮ–ಪುರುಷ ಆತ್ಮನೇ ಸಕಲ ಜೀವರಾಶಿಗಳಾಗಿರುವುದನ್ನು ಮನಗಾಣುತ್ತಾನೆ. ತನ್ನೊಳಗೆ ಏನೆಲ್ಲ ಇದೆಯೋ, ಸುತ್ತಲೂ ಏನೆಲ್ಲ ಇದೆಯೋ ಇಡೀ ಅಸ್ತಿತ್ವದ ಜೊತೆ ಅವನು ಸಮರಸದಿಂದ ಸ್ಪಂದಿಸುತ್ತಾನೆ, ಏಕೋಭಾವದಿಂದ ಮಿಡಿಯುತ್ತಾನೆ; ಎಲ್ಲವೂ ವಿಶ್ವದ ಉಪಕರಣಗಳಾಗಿ ತೋರುತ್ತವೆ. ತನ್ನ ಆತ್ಮದ ಮೂಲಕ ಅವನು ಪರಮಾತ್ಮನನ್ನು ಗುರುತಿಸುತ್ತಾನೆ, ಅವನೇ ಅಲ್ಲಿ–ಇಲ್ಲಿ ಎಲ್ಲೆಲ್ಲೂ ಒಬ್ಬನೇ ಆಗಿದ್ದಾನೆಂಬುದನ್ನು ಮನಗಾಣುತ್ತಾನೆ. ಸಕಲ ಜೀವರಾಶಿಗಳ ಹೃದಯದಲ್ಲಿರುವ ಸರ್ವಾಂತರ್ಯಾಮಿಯ ಮೂಲಕ ವಿಶ್ವೋಪರಿಯಾದ, ವಿಶ್ವಾತೀತನಾದ ಪುರುಷೋತ್ತಮನನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಪ್ರಕಟನಾದ ವಿಶ್ವಾತ್ಮನ ಮೂಲಕ ವಿಶ್ವಾತೀತ ಪುರುಷನನ್ನು ಅವನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಅಪಾರ, ಸೀಮಾತೀತ ಜ್ಞಾನದ ಮೂಲಕ ಹಾಗೂ ಊರ್ಧ್ವಮುಖ ದರ್ಶನ ಮತ್ತು ಅಭೀಪ್ಸೆಯ ಮೂಲಕ ನಿಮ್ನ ಪ್ರಕೃತಿಯಿಂದ ಮೇಲಕ್ಕೆರಿ ಸರ್ವಭಾವೇನ ತಾನು ಯಾವುದನ್ನು ಅನುಸಂಧಾನ ಮಾಡಲೆತ್ನಿಸಿದ್ದಾನೋ ಅದನ್ನು ಅವನನ್ನು ಪಡೆಯುತ್ತಾನೆ.

ಜೀವಾತ್ಮನ ಈ ವಿಧದ ಸಮಗ್ರ ದೈವೀ ಉನ್ಮುಖತೆಯು ಗೀತೆಯ ಜ್ಞಾನ ಭಕ್ತಿ ಮತ್ತು ಕರ್ಮಗಳ ಸಮನ್ವಯವನ್ನೇ ಆಧರಿಸಿದೆ. ಈ ರೀತಿ ಭಗವಂತನನ್ನು

ಸಮಗ್ರವಾಗಿ ನೋಡುವದೆಂದರೆ ಅವನು ಆತ್ಮದಲ್ಲಿ, ಸರ್ವ ಪ್ರಕಟಿತ ವಸ್ತುಗಳಲ್ಲಿ ಹಾಗೂ ಎಲ್ಲ ಪ್ರಕಟನೆಗಳನ್ನು ಮೀರಿಯೂ ಇದ್ದಾನೆ ಎಂಬುದನ್ನರಿಯುವುದೇ ಆಗಿದೆ, ಜೊತೆಗೆ ಇದೆಲ್ಲವನ್ನೂ ಒಳಗೊಂಡು ಎಲ್ಲದರಲ್ಲೂ, ಎಲ್ಲವನ್ನು ಮೀರಿಯೂ ಏಕಕಾಲದಲ್ಲಿ ಸರ್ವತ್ರ ಇದ್ದಾನೆಂದು ಭಾವಿಸುವುದೇ ಆಗಿದೆ. ಬರೀ ಇಷ್ಟೇ ತಿಳಿದುಕೊಂಡು ಬಿಟ್ಟರೆ ಸಾಲದು, ಅವನ ಹೃದಯ ಅವನ ಆತ್ಮ ಭಗವಂತನೆತ್ತರಕ್ಕೆ ತೀವ್ರತರವಾಗಿ ಉಧೃತವಾಗಬೇಕು. ಅವನಲ್ಲಿ ಸರ್ವ ಸಮಾಹಾರಕ ಪ್ರೇಮ, ಭಕ್ತಿ ಮತ್ತು ಅಭೀಪ್ಸೆಗಳು ಏಕೋಭಾವದಿಂದ ಕೇಂದ್ರಿತವಾಗಿ ತುಡಿಯಬೇಕು. ವಾಸ್ತವವಾಗಿ ಅಭೀಪ್ಸೆಯಿಂದ ಕೂಡಿರದ ಹಾಗೂ ಸಜೀವವಾಗಿ ಉನ್ನತೀಕೃತವಾಗದ ಜ್ಞಾನವು ಜ್ಞಾನವೇ ಅಲ್ಲ. ಏಕೆಂದರೆ ಅದು ಕೇವಲ ಭೌದ್ಧಿಕ ದರ್ಶನವಾಗಿರುವುದು ಬರಡು ಅರಿವಿನ ಸಿದ್ಧಿಯಾಗಿರುವುದು. ಭಗವಂತನ ದರ್ಶನವು ಅವಶ್ಯವಾಗಿ ಭಕ್ತಿಯನ್ನು, ಆರಾಧನೆಯನ್ನು ಹಾಗೂ ಭಾವಾವೇಶಪೂರಿತ ಭಗವತ್ ಶೋಧನೆಯನ್ನು ಹುಟ್ಟುಹಾಕುವುದು. ತನ್ನ ಸ್ವಯಂಭೂ ಆತ್ಮದ ಸತ್ತೆಯಲ್ಲಿ ಭಗವಂತನ ಬಗೆಗೆ ಉತ್ಕಟವಾದ ಪ್ರೇಮವನ್ನುಂಟು ಮಾಡುವುದಲ್ಲದೇ ನಮ್ಮಲ್ಲಿಯೂ ಎಲ್ಲರಲ್ಲಿಯೂ ಇರುವ ಭಗವಂತನೆಡೆಗೆ ಕೂಡ ಅಷ್ಟೇ ತೀವ್ರತರ ಸಂವೇದನೆ, ಪ್ರೀತಿಯನ್ನುಂಟು ಮಾಡುವುದು. ಬೌದ್ಧಿಕವಾಗಿ ಪರಮಾತ್ಮನನ್ನು ಅರಿತುಕೊಳ್ಳುವುದು ಮೊದಲ ಹೆಜ್ಜೆ, ಅದನ್ನು ಆರಂಭವೆಂದೂ, ಅದು ಒಳ್ಳೆಯದೇ ಎಂದೂ ಹೇಳಬಹುದು. ಅಲ್ಲಿ ಪ್ರಮಾಣಿಕ ಶ್ರದ್ಧೆ ಇಲ್ಲದೇ ಹೋದರೆ, ಆಂತರಿಕ ಸಾಕ್ಷಾತ್ಕಾರದ ಬಗೆಗೆ ಒಲವು ಇಲ್ಲದೇ ಹೋದರೆ, ಆತ್ಮದಲ್ಲಿ ಆ ಬಲ ಇಲ್ಲದೇ ಹೋದರೆ, ಆತ್ಮ ಚೈತನ್ಯದಲ್ಲಿ ನಿಜವಾದ ಕರೆ ಇಲ್ಲದೇ ಹೋದರೆ ಅದು ನಿರರ್ಥಕವಲ್ಲವಾದರೂ ಅದೊಂದು ಪರಿಣಾಮಕಾರಿಯಾದ ಮೊದಲ ಪ್ರಯತ್ನವೆಂದು ಹೇಳಬಹುದು. ಏಕೆಂದರೆ ಅಲ್ಲಿ ಮಿದುಳು ಬಾಹ್ಯತಃ ತಿಳಿದುಕೊಂಡಿದ್ದೇನೋ ನಿಜ ಆದರೆ ಆಂತರಿಕವಾಗಿ ಆತ್ಮವು ಏನನ್ನು ತಿಳಿದುಕೊಂಡಿರುವುದಿಲ್ಲ. ನಿಜವಾದ ಜ್ಞಾನವೆಂದರೆ ಮಿದುಳಿನಿಂದಲ್ಲ ಆತ್ಮದಿಂದ ತಿಳಿದುಕೊಳುವುದು; ಅಂತಃ ಸತ್ವಕ್ಕೆ ಈ ಜ್ಞಾನದ ಬೆಳಕಿನ ಸ್ಪರ್ಶವಾದರೆ, ತಾನೇನನ್ನು ಕಂಡಿದೆಯೋ ಅದನ್ನು ಅಲಂಗಿಸಿಕೊಳ್ಳಲು ಅದು ತುಡಿಯುವುದು. ಅದನ್ನು ಸ್ವಾಧೀನಪಡಿಸಿಕೊಳ್ಳಲು ಹವಣಿಸುವುದು. ಅದನ್ನು ತನ್ನಲ್ಲಿ ರೂಪಿಸಿಕೊಳ್ಳಲು ಪ್ರಯತ್ನಿಸುವುದು, ತಾನು ಕಂಡ ವೈಭವದ ಜೊತೆಗೆ ಒಂದಾಗಲು

ಪ್ರಯತ್ನಿಸುವುದು. ಜ್ಞಾನವು ನಿಜವಾಗಿ ಉತ್ಥಾನ ಹೊಂದಿದರೆ ಅದು ಈ ರೀತಿಯ ಎಲ್ಲವನ್ನೂ ತನ್ನ ವಶಕ್ಕೆ ತೆಗೆದುಕೊಳ್ಳಬಲ್ಲ ಪ್ರವೃತ್ತಿಯನ್ನು ಬೆಳೆಸುವುದು, ಇದೇ ನಿಜವಾದ ಪರಿಪೂರ್ಣ ಸಾಕ್ಷತ್ಕಾರವಾಗಿದೆ. ಇಲ್ಲಿ ಜ್ಞೇಯವೆಂಬುದು ಬಾಹ್ಯ ವಸ್ತುವಲ್ಲ, ಅದು ದೈವಿ ಪುರುಷ. ಆತ್ಮ ಮತ್ತು ನಮ್ಮೆಲ್ಲದರ ಪ್ರಭು. ಅವನಲ್ಲಿರುವ ಸರ್ವಗ್ರಾಹಿ ಆನಂದ, ಹಾಗೂ ತೀವ್ರತರವಾಗಿ ಸ್ಪಂದಿಸುವ ಪ್ರೀತಿ, ಭಕ್ತಿ, ಆರಾಧಾನೆ ಇವು ಅವಶ್ಯ ಪರಿಣಾಮಗಳಾಗಿರಬೇಕಲ್ಲದೇ ಇವೇ ನಿಜವಾದ ಜ್ಞಾನದ ಆತ್ಮವಾಗಿವೆ. ಈ ಆರಾಧನೆ ಅಥವಾ ಪ್ರೇಮವು ಹೃದಯದ ತೀವ್ರ ಶೋಧವಲ್ಲ. ಬದಲಾಗಿ ಇಡೀ ಸತ್ತೆಯ ಸಮರ್ಪಣೆಯಾಗಿದೆ. ಇದನ್ನೊಂದು ಯಜ್ಞ ಎಂದೇ ಪರಿಕಲ್ಪಿಸಬೇಕು. ಇಲ್ಲಿ ಈಶ್ವರನಿಗೆ ನಮ್ಮೆಲ್ಲ ಕರ್ಮಗಳನ್ನು ಸರ್ಮಪಿಸುತ್ತವೆ. ನಮ್ಮ ಎಲ್ಲ ಆಂತರಿಕ ಮತ್ತು ಬಾಹ್ಯ ಸಕ್ರಿಯ ಪ್ರಕೃತಿಯನ್ನು ಭಗವಂತನಿಗೆ ಅರ್ಪಿಸುತ್ತೇವೆ. ನಮ್ಮ ಪ್ರತಿಯೊಂದು ಚಲನೆ, ಅದರ ಉದ್ದೇಶ ಅದರ ಫಲ ಎಲ್ಲವನ್ನು ಈಶ್ವರನಿಗೆ ಅರ್ಪಿಸುತ್ತೇವೆ.

ನಮ್ಮೆಲ್ಲ ವೈಯಕ್ತಿಕ ಕರ್ಮಗಳು ಅವನಿಗೇ ಸಲ್ಲುತ್ತವೆ. ಎಲ್ಲದರ ಉದ್ದೇಶ ಮತ್ತು ಗುರಿ ಅವನೇ, ನಮ್ಮೊಳಗಿರುತ್ತಲೇ ಸಕಲ ಜೀವರಾಶಿ, ಸಕಲ ಜಗತ್ತನ್ನು ನಿಯಂತ್ರಿಸುವವನು. ಆಳುವವನು ಅವನೇ ಅವನೇ ಸಕಲ ವಿಶ್ವ, ಜೀವರಾಶಿ ಮತ್ತು ಬಾಹ್ಯಾಭ್ಯಂತರ ಸರ್ವಸ್ವದ ಪ್ರಭು–ಸಮಗ್ರ ಪ್ರಕೃತಿ ಮತ್ತು ಜೀವಾತ್ಮಗಳು ಅವನ ಬೆಳಕಿಗಿನಿಂದಲೇ ಬೆಳಗುತ್ತವೆ. ಎಲ್ಲವೂ ಅವನ ಆಂತರಿಕ ಮತ್ತು ಬಾಹ್ಯ ಶರೀರಗಳೇ ಆಗಿವೆ. ಹೀಗೆ ಪುರುಷೋತ್ತಮನ ಮನಸ್ಸು ಮತ್ತು ಹೃದಯ ಹಾಗೂ ಸಂಕಲ್ಪಗಳು ಏಕಮೇವ ಆತ್ಮನಲ್ಲಿ ಚೈತನ್ಯದಲ್ಲಿ ಒಂದಾಗುತ್ತವೆ ಸಮರಸವಾಗುತ್ತವೆ. ಹಾಗೂ ಈ ಸಮರಸತೆಯೊಡನೆ ಪೂರ್ಣ ಏಕತೆಯಲ್ಲಿ ಜ್ಞಾನ, ಭಕ್ತಿ, ಕರ್ಮಗಳ ಸಮನ್ವಯ–ವಾಗುತ್ತದೆ. ಈಶ್ವರನ ಸಾಕ್ಷಾತ್ಕಾರ ಅಥವಾ ದಿವ್ಯ ಯೋಗ ಅಂದರೆ ಇದೇ ಆಗಿದೆ.

ಆದರೆ ಅಹಂಕಾರಬದ್ಧವಾದ ಪ್ರಕೃತಿಯು ಈ ಚಲನೆಗೆ ಬರುವುದು ಸುಲಭವಲ್ಲ ತುಂಬ ಕಠಿಣ. ನಾವು ಈ ದಾರಿಯಲ್ಲಿ ಕ್ರಮಿಸಲು ಆರಂಭ ಮಾಡಿದರೆ ಅಥವಾ ಸದಾ ಇದೇ ದಾರಿ ತುಳಿಯತೊಡಗಿದಾಗಲೂ ಸಹ ಇದರ ಸಂಪೂರ್ಣ ಸಾಮರಸ್ಯ ಪೂರ್ಣ ವಿಜಯ ಸಾಧಿಸುವುದು ಸುಲಭವಲ್ಲ. ಮರ್ತ್ಯ ಮಾನವನ

ಮನಸ್ಸು ತೋರಿಕೆಗಳ ಮೇಲೆ ಪರದೆಗಳ ನಂಬಿಕೆ ಇಟ್ಟು ಮೋಸ ಹೋಗಿದ್ದರಿಂದ ಭಯಗ್ರಸ್ತವಾಗಿದೆ. ಅದು ಕಾಣುವುದು ಕೇವಲ ಬಾಹ್ಯ ಶರೀರವನ್ನು ಮಾತ್ರ ಬಾಹ್ಯ ಮನಸ್ಸು, ಮಾನವನ ಬದುಕು ಇವುಗಳನ್ನು ಮಾತ್ರ ನೋಡುವುದೇ ಹೊರತು ಜೀವಿಗಳ ಆಂತರ್ಯದಲ್ಲಿರುವ ಭಗವಂತನ ಮುಕ್ತಿದಾಯಕ ದರ್ಶನವನ್ನು ಕಿಂಚಿತ್ತಾದರು ಮಾಡುವುದಿಲ್ಲ. ತನ್ನೊಳಗೆಯೆ ಇರುವ ಈಶ್ವರನನ್ನೇ ಅದು ಅವಜ್ಞೆ ಮಾಡುತ್ತದೆ. ಇನ್ನು ಮತ್ತೊಬ್ಬರಲ್ಲಿರುವ ಈಶ್ವರನನ್ನು ಹೇಗೆ ನೋಡಲು ಸಾಧ್ಯ? ಈಶ್ವರನು ಅವತಾರ ಪುರುಷನ ರೂಪದಲ್ಲಿ ಧರೆಗಿಳಿದು ಬಂದಾಗಲೂ ಸಹ ಭೂಮಿ ಅವನನ್ನು ಗುರುತಿಸಿಲ್ಲ. ಮುಸುಕುಧಾರಿಯಾದ ಭಗವಂತನನ್ನು ಕಾಣುವುದಿಲ್ಲ. ಯಾವಾಗ ಅದು ಸರ್ವಾಂತರ್ಗತ ದಿವ್ಯ ಪರಮಾತ್ಮನನ್ನು ಜೀವಂತ ಪ್ರಾಣಿಗಳಲ್ಲಿ ಕಾಣದೇ ಹೋದರೆ ಭೌತಿಕ ಪ್ರಪಂಚದ ಯಾವ ವಸ್ತುವಿನಲ್ಲೂ ಕಾಣಲಾರದು. ಏಕೆಂದರೆ ಅದು ತನ್ನ ಅಹಂನ ಸೆರೆಯಲ್ಲಿ ಬಂಧಿಯಾಗಿ ಕೇವಲ ಸಾಂತ ಮಾನಸದ ಕಿಟಕಿಯೊಳಗಿಂದ ಈ ಜಗವನ್ನು ಕಾಣುವುದರಿಂದ, ಅಂತರ್ಗತನಾಗಿರುವ ಪರಮಾತ್ಮನನ್ನು ಕಾಣಲು ಸಾಧ್ಯವಿಲ್ಲ. ವಿಶ್ವದಲ್ಲಿ ಎಲ್ಲಿಯೂ ಭಗವಂತ ಅದಕ್ಕೆ ಕಾಣುವುದಿಲ್ಲ; ಈಶ್ವರನು ಪ್ರಪಂಚದ ಎಲ್ಲ ಸ್ತರಗಳಿಗೂ ಪ್ರಭುವಾಗಿದ್ದು ಎಲ್ಲ ಸ್ತರಗಳಲ್ಲೂ ಅಂತರ್ಗತನಾಗಿ ವಾಸಮಾಡುತ್ತಾನೆ. ಮನಸ್ಸಿಗೆ ಅವನ ಬಗ್ಗೆ ಇನಿತೂ ಅರಿವಿಲ್ಲ. ಅದೊಂದು ರೀತಿಯ ಕುರುಡುತನ, ಜಗತ್ತಿನಲ್ಲಿ ಏನೆಲ್ಲ ಇದೆಯೋ ಅದೆಲ್ಲವೂ ದೈವಿಕವಾಗಿ ಬೆಳೆಯುತ್ತಲಿದೆ. ಆತ್ಮವು ತಾನಾಗಿಯೇ ಜಾಗೃತವಾಗಿ ತನ್ನ ದಿವ್ಯತೆಯನ್ನು ಗುರುತಿಸುವುದು ಮತ್ತು ದಿವ್ಯತೆ ಪಡೆಯುವುದು, ದೇವತೆಯಂತಾಗುವುದು. ಸದ್ಯಕ್ಕೆ ತನಗೆ ಏನೋ ಕಾಣುತ್ತದೆಯೋ ಅದನ್ನೇ ಪರಮ ಸತ್ಯವೆಂದು ನಂಬಿ, ಅದನ್ನೆ ನೆಚ್ಚಿಕೊಂಡು ಬಿಡುತ್ತದೆ. ಇದು ಕೇವಲ ಅಹಂನ ಬದುಕು, ಅಹಂ ಯಾವಾಗಲೂ ಸಾಂತ ವಸ್ತುಗಳನ್ನೆ ಬಯಸುವುದು, ತನ್ನ ಪಾರ್ಥಿವ ಬಯಕೆಗಳಿಂದ ಬುದ್ಧಿ ಹಾಗೂ ಇಂದ್ರಿಯಗಳ ತೃಪ್ತಿಯನ್ನು ಮಾತ್ರ ಅರಸುವುದು. ಯಾರು ಇಂಥ ಕೇವಲ ಬಾಹ್ಯ ಮನದ ಪ್ರವೃತ್ತಿಗಳಿಗೆ ದಾಸರಾಗಿ, ಅವುಗಳಿಗೇ ಸಂಪೂರ್ಣ ಶರಣಾಗಿದ್ದಾರೋ ಅವರು ನಿಮ್ನ ಪ್ರಕೃತಿಯ ಬಲೆಯಲ್ಲಿ ಸಿಕ್ಕು ಬೀಳುತ್ತಾರೆ. ಅದೇ ಅವರ ಬದುಕಿನ ಆಧಾರವಾಗಿ ಬಿಡುತ್ತದೆ. ಅವರು ಮಾನವರಲ್ಲಿರುವ ರಾಕ್ಷಸತ್ವಕ್ಕೆ ಅಹುತಿಯಾಗುತ್ತಾರೆ. ಕೇವಲ ಪ್ರಾಣಿಕ ಅಹಂ ಹಾಗೂ ಅದರ ತಮತ್ವವನ್ನೇ (ಕಪ್ಪು ದೈವತ್ವವನ್ನೇ) ತನ್ನ ಆರಾಧ್ಯ ದೈವತವನ್ನೇ

ಮಾಡಿಕೊಂಡು, ಅದನ್ನೇ ತನ್ನ ನಡೆ, ನುಡಿ, ಸ್ವಭಾವ ಎಲ್ಲದರಲ್ಲೂ ಅವಾಹಿಸಿಕೊಂಡು ಬಿಡುತ್ತದೆ. ಅವರು ಸ್ವಯಂ ಬಯಕೆಯೆಂಬ ವಿಷ ವರ್ತುಲದಲ್ಲಿ ಸಿಕ್ಕು ಬಿದ್ದು ಸ್ವಾತ್ಮ ತೃಪ್ತಿ ವಿಚಾರ, ಸ್ವಯಂ ಬಣ್ಣನೆಯ ಕಾರ್ಯ, ಸ್ವಯಂ ತೃಪ್ತ ಎಂದು ತೋರಿದರೂ ವಾಸ್ತವವಾಗಿ ಎಂದಿಗೂ ತೃಪ್ತಿಯಾಗದ ಬೌದ್ಧಿಕ ಹಸಿವಿಗೆ ಬಲಿಯಾಗಿ ಆಸುರೀ ಕೃತ್ಯಗಳಲ್ಲಿ ಸಂತೃಪ್ತಿ ಕಾಣುತ್ತ ಹೋಗುತ್ತಾರೆ. ಆದರೆ ಇದೇ ಪ್ರತ್ಯೇಕತೆಯ ಅಹಂ ಪ್ರಜ್ಞೆಯಲ್ಲಿಯೇ ಸದಾಕಾಲ ಇರತೊಡಗಿದರೆ ಹಾಗೂ ಅದನ್ನೇ ನಮ್ಮೆಲ್ಲ ಕೆಲಸಗಳ, ಕರ್ಮಗಳ ಕೇಂದ್ರವನ್ನಾಗಿ ಮಾಡಿಕೊಂಡರೆ ನಿಜವಾದ ಆತ್ಮ ಜಾಗೃತಿಯಿಂದ ಬಹು ದೂರ ಹೋದಂತಾಗುವುದು. ಅದು ಆತ್ಮದ ಎಲ್ಲ ಉಪಕರಣಗಳ ಮೇಲೆ ತನ್ನ ಮಾಂತ್ರಿಕ ಪ್ರಭಾವ ಬೀರಿ, ನಿಷ್ಫಲವಾಗಿ, ಬರಿದೇ ಜನ್ಮಾಂತರಗಳ ಚಕ್ರದಲ್ಲಿ ಸುತ್ತುವಂತೆ ಮಾಡುವುದು. ದೈವಿ ಮತ್ತು ಶಾಶ್ವತದ ಲೆಕ್ಕಾಚಾರಲ್ಲಿ ನೋಡಿದರೆ ಅದರ ಆಶೆ, ಕೃತಿ, ಜ್ಞಾನ ಎಲ್ಲವೂ ವ್ಯರ್ಥವೇ. ಏಕೆಂದರೆ ಅದು ನಿಜವಾದ ಭರವಸೆಯನ್ನು ಕಿತ್ತು ಹಾಕಿ ಮುಕ್ತಿಯ ಕರ್ಮಗಳನ್ನೇ ನಿಷೇಧಿಸಿದಂತೆ ಮಾಡಿ ಪ್ರಕಾಶಮಾನವಾದ ಜ್ಞಾನವನ್ನು ಪ್ರತಿರೋದಿಸುವುದು. ಈ ದೃಶ್ಯ ಪ್ರಪಂಚವನ್ನೆಲ್ಲ ಕಂಡರೂ ಅದರ ಅಂತರಾಳದಲ್ಲಿರುವ ಸತ್ಯವನ್ನು ಕಾಣದೇ ಹೋದರೆ ಕೇವಲ ಬಾಹ್ಯ ಪ್ರಪಂಚವನ್ನೇ ಅದರ ಸತ್ಯವನ್ನೇ ಕಡೆಗಣಿಸಿಬಿಟ್ಟರೆ, ಕ್ಷಣಿಕವಾಗಿರುವುದನ್ನೇ ನೆಚ್ಚಿಕೊಂಡು ಶಾಶ್ವತವಾಗಿರುವುದನ್ನೇ ಮರೆತು ಬಿಟ್ಟರೆ ಎಲ್ಲ ಪ್ರಯತ್ನವೂ ನಿರರ್ಥಕವಾಗುವುದು. (9/11–12)

ದೈವೀ ಪ್ರಕೃತಿಯ ಪ್ರಕಾಶ ಮತ್ತು ವೈಶಾಲ್ಯಗಳಿಗೆ ತಮ್ಮನ್ನು ತಾವು ತೆರೆದುಕೊಂಡ ಮಹಾತ್ಮರು ಮಾತ್ರ ಮುಕ್ತಿಯ ಮತ್ತು ಪರಿಪೂರ್ಣತೆಯ ದಾರಿಯನ್ನು ಅನುಸರಿಸುತ್ತಾರೆ. ಈ ದಾರಿ ಮೊದಮೊದಲು ತೀರ ಸಂಕುಚಿತವಾಗಿದ್ದರೂ ಬರಬರುತ್ತ ಹೇಳತೀರದಷ್ಟು ವಿಶಾಲವಾಗುವುದು. ಪ್ರತಿ ಮಾನವ ಜೀವಿಗೂ ಇದನ್ನೂ ಕ್ರಮಿಸುವ ಕ್ಷಮತೆ, ಸಾಮರ್ಥ್ಯ ಗುಪ್ತವಾಗಿ ಇದ್ದೇ ಇರುತ್ತದೆ. ತನ್ನಲ್ಲಿರುವ ದೇವತೆಯನ್ನು ಪೋಷಿಸಿ ಬೆಳೆಸುವುದೇ ಮಾನವ ನಿಜವಾದ ಕರ್ತವ್ಯ. ನಿಮ್ಮ ಆಸುರೀ ಹಾಗೂ ರಾಕ್ಷಸೀ ಪ್ರವೃತ್ತಿಗಳನ್ನು ಭಗವಂತನೆಡೆಗೆ ತಿರಿಗಿಸಿ ದೈವಿ ಪ್ರಕೃತಿಯನ್ನಾಗಿ ಮಾಡುವುದೇ ಮಾನವನ

ಜೀವನದ ರಹಸ್ಯ ಕರ್ತವ್ಯವಾಗಿದೆ. ಈ ಬೆಳವಣಿಗೆ ವೃದ್ಧಿಸಿದಂತೆ ಅಡ್ಡಪರದೆ ಬಿದ್ದು ಹೋಗುತ್ತದೆ ಮತ್ತು ತನ್ನ ಅಸ್ತಿತ್ವದ ನಿಜವಾದ ಸತ್ಯವನ್ನು ವಿಶೇಷತೆಯನ್ನು ಅರಿಯಲು ಮಾನವನಿಗೆ ಸಾಧ್ಯವಾಗುತ್ತದೆ. ಅವನು ತನ್ನಲ್ಲಿರುವ ಮಾನವ ಜೀವಿಯಲ್ಲಿರುವ ಹಾಗೂ ಜಗತ್ತಿನ ಎಲ್ಲೆಡೆ ಇರುವ ಭಗವಂತನನ್ನು ಕಾಣಲು ಸಮರ್ಥನಾಗುತ್ತನೆ. ಅಂತರಂಗದಲ್ಲಿ ಗುರುತಿಸುವುದು ಮಾತ್ರವಲ್ಲ ಬಾಹ್ಯದಲ್ಲಿಯೂ ಸಹ ಅನಂತ ಚೈತನ್ಯವನ್ನು ಅವನಿಗೆ ಸಾಧ್ಯವಾಗುತ್ತದೆ. ಅವಿನಾಶಿಯಾದ ಪರಮ ಚೈತನ್ಯ ಸ್ವರೂಪನಿಂದಲೇ ಈ ವಿಶ್ವ ರೂಪಗೊಂಡಿದೆ. ಅವನೇ ಎಲ್ಲದರಲ್ಲೂ ಅದರ ಆತ್ಮನಾಗಿ ಇದ್ದಾನೆ. ಎಲ್ಲವೂ ಅವನಿಂದಲೇ ಅವನ ಒಳಗೇ ಇವೆ ಎಂಬ ಸ್ಪಷ್ಟ ಜ್ಞಾನ ಅವನಿಗೆ ಆಗುತ್ತದೆ. ಇಂಥ ದರ್ಶನ, ಇಂಥ ಜ್ಞಾನ ಜೀವಾತ್ಮನಿಗೆ ಆದಾಗ, ಜೀವನದ ಸಮಗ್ರ ಎಲ್ಲವನ್ನೂ ಮೀರಿದ ಪ್ರೇಮವಾಗಿ ಅನಂತನಾದ ಭಗವಂತನ ಅಪಾರ ನಿರಕಾರ ಭಕ್ತಿಯಾಗಿ ಪರಿವರ್ತನೆ ಹೊಂದುತ್ತದೆ. ಅವನ ಮನಸ್ಸು ಕೇವಲ ಭಗವಂತನ ಜೊತೆ ಅನು ಸಂಧಾನ ಮಾಡುತ್ತದೆ, ಪರಮ ಶಾಶ್ವತ ಜೀವಂತ ಸತ್ಯದ ಜೊತೆಗೆ ಅನುಸಂಧಾನ ಮಾಡುತ್ತದೆ. ಉಳಿದಂತೆ ಎಲ್ಲವೂ ಅದಕ್ಕೆ ಗೌಣವಾಗುತ್ತದೆ, ಸರ್ವಾಂಗ ಆನಂದಮಯನಾದ ಪರಮ ಪುರುಷನಲ್ಲಿ ಅದು ರಮಿಸುತ್ತದೆ. ಎಲ್ಲ ಶಬ್ದಗಳು, ಎಲ್ಲ ವಿಚಾರಗಳು ಅವನ ವಿಶ್ವಾತ್ಮಕ ಮಹತಿಯ ಸ್ತೋತ್ರ ಗೀತೆಯಾಗುತ್ತವೆ. ಸತ್ಯ, ಸೌಂದರ್ಯ, ಶಕ್ತಿ ಮತ್ತು ಪ್ರಕಾಶ, ಜ್ಞಾನಗಳು ತಾವಾಗಿ ಅವನಿಗೆ ಪ್ರತ್ಯಕ್ಷವಾಗುತ್ತವೆ. ಏಕಮೇವ ಅನಂತ ಪುರುಷನ ಆರಾಧನೆಯಾಗುತ್ತವೆ. ಜೀವಮಾನವಿಡೀ ಅವನ ಅಂತರಾತ್ಮವು ಬಾಹ್ಯ ವಸ್ತು ಪ್ರಪಂಚದೆಡೆಗೇ ಮುಖ ಮಾಡಿ ನಡೆಸಿದ ಪ್ರಯತ್ನ ಸಾಧನೆಗಳು ಆಧ್ಯಾತ್ಮಿಕ ಸಾಧನೆಯಾಗಿ ಬದಲಾಗುತ್ತವೆ. ಪರಮಾತ್ಮನನ್ನು ತನ್ನೊಳಗೆ ಆವಾಹಿಸಿಕೊಂಡು ಪ್ರತಿಷ್ಠಾಪನೆ ಮಾಡಿ, ತನ್ನ ವೈಯಕ್ತಿಕ ಆತ್ಮದಲ್ಲಿ ಹಾಗೂ ವಿಶ್ವ ಸ್ತರದಲ್ಲಿ ಅವನನ್ನು ಸಾಕ್ಷಾತ್ಕರಿಸಿಕೊಳ್ಳುವ ಪ್ರಯತ್ನವಾಗುತ್ತದೆ. ಜೀವನವೇ ಒಂದು ಯೋಗವಾಗಿ ಬಿಡುವುದು. ಮಾನವನ ಆತ್ಮ ಹಾಗೂ ಪರಮಾತ್ಮ ಇವುಗಳ ಸಮ್ಯಕ್–ಸಮ್ಮಿಲನದ ಯೋಗವಾಗುವುದು. ಇದು ಸಮಗ್ರ ಭಕ್ತಿಯ ಆರಾಧನೆಯ ದ್ಯೋತಕನಾಗುವುದು. ಪುರುಷೋತ್ತಮನಿಗೆ ತನ್ನನ್ನೇ ಅರ್ಪಿಸಿಕೊಂಡು ಸಮಗ್ರ ಸತ್ತೆಯನ್ನು ಹಾಗೂ ಪ್ರಕೃತಿಯನ್ನು ಭಗವಂತನೆಡೆಗೆ ಒಯ್ಯುವುದೇ ಆಗಿದೆ. (9/13–14)

ಯಾರು ಜ್ಞಾನದ ಮಾರ್ಗದ ಮೇಲೆ ಒತ್ತು ನೀಡುತ್ತಾರೋ, ಅವರೂ ಕೂಡ ನಿರಂತರವಾಗಿ ವರ್ಧಿಸುವ ಸಮಾವೃತ ಮಾಡಿಕೊಳ್ಳುವ ಭಗವಂತನ ಸಾಕ್ಷಾತ್ಕಾರದಿಂದಾಗಿ ಆತ್ಮ ಮತ್ತು ಪ್ರಕೃತಿಯ ಮೇಲಾಗುವ ಪರಿಣಾಮದಿಂದ ಅದೇ ಬಿಂದುವಿಗೆ ಬಂದು ತಲುಪುತ್ತಾರೆ. ಜ್ಞಾನ ಯಜ್ಞ ಮೂಲಕ ಅವರು ಪುರುಷೋತ್ತಮನ ಅನನ್ಯ ಆರಾಧನೆಗೇ ಬಂದು ಮುಟ್ಟುತ್ತಾರೆ. ಜ್ಞಾನಯಜ್ಞೇನ ಯಜತೋಂ ಮಾಂ ಉಪಾಸತೇ (9/15) ಇದು ಭಕ್ತಿಯನ್ನು ಒಳಗೊಂಡ ಜ್ಞಾನವು ಏಕೆಂದರೆ ಇದು ತನ್ನ ಪರಿಕರದಲ್ಲಿ ಸಮಗ್ರವಾಗಿರುತ್ತದೆ. ಉದ್ದೇಶದಲ್ಲಿ ಸಮಗ್ರವಾಗಿರುತ್ತದೆ. ಇದು ಪರಮಾತ್ಮನನ್ನು ಅಮೂರ್ತ ಏಕತೆ ಅಥವಾ ಅನಿರ್ದೇಶ್ಯವಾದ 'ಕೇವಲ' ಎಂದು ಶೋಧನೆಗೆ ತೋಡಗಿಕೊಳ್ಳುವದಿಲ್ಲ. ಇದು ಕೃದಂತರಾಳದ ಸಂಶೋಧನೆ, ಹುಡುಕಾಟ, ವಿಶ್ವಾತ್ಮನ, ಎಲ್ಲ ಸಾಂತಗಳಲ್ಲಿಯೂ ಇರುವ ಅನಂತ ಅಸ್ತಿತ್ವದ, ಪರಿಶುದ್ಧ ಏಕತೆಯಲ್ಲಿ ಅದ್ವೈತ ಏಕನನ್ನು ಅನೇಕ ತತ್ವಗಳಲ್ಲಿ ಸತ್ತೆಗಳಲ್ಲಿ ವಿಭಿನ್ನ ವೇಷಗಳಲ್ಲಿ, ಶಕ್ತಿ, ಬಲ, ರೂಪ, ಆಕಾರ, ಇಲ್ಲಿ, ಅಲ್ಲಿ, ಎಲ್ಲೆಲ್ಲೂ ಇರುವ ಕಾಲಾತೀತನೂ ಕಾಲ ಸ್ವರೂಪನೋ ಆಗಿರುವ ಅನಂತ ಸ್ವರೂಪನನ್ನು ಹುಡುಕುವ ಪ್ರಯತ್ನವಾಗಿದೆ. ಏಕತ್ವೇನ ಪ್ರಥಕ್ತ್ವೇನ ಬಾಹುಧಾ ವಿಶ್ವತೋ ಮುಖಮ್ (9/15). ಈ ಜ್ಞಾನವು ಅವಶ್ಯವಾಗಿ ಭಕ್ತಿಯೆಡೆಗೇ ಒಯ್ಯುವುದು. ಪರಮ ಭಕ್ತಿ ಸಂಪೂರ್ಣ ಶರಣಾಗತಿ, ಸಂಪೂರ್ಣ ಆತ್ಮ ನಿವೇದನೆಯೆಡೆಗೆ ಕರೆದೊಯ್ಯುವುದು. ಏಕೆಂದರೆ ಇದು ಆತ್ಮ ಚೈತನ್ಯದ ಜ್ಞಾನ, ಪರಮ ಸತ್ತೆಯ ಸಂಪೂರ್ಣ ಜ್ಞಾನ, ಪರಮೋಚ್ಚ ವಿಶ್ವಾತ್ಮಕ ಆತ್ಮನ ಸಾಕ್ಷಾತ್ಕಾರ, ನಾವಿರುವುದೆಲ್ಲವನ್ನು ಅರ್ಪಿಸಿ ಬಿಟ್ಟಾಗ ನಮ್ಮ ಮೇಲೆ ಆ ಪರಮ ಸತ್ತೆಯ ನಿತ್ಯ ಆನಂದದ ವೈಭವದ ಮಳೆಗರೆವ ದಿವ್ಯ ಅಪ್ಪುಗೆಯ ಜ್ಞಾನವಾಗುವುದು.

(ಸಶೇಷ)

## ಮುಖಪುಟದ ಕವನಗಳು

**– ಪುಟ್ಟು ಕುಲಕರ್ಣಿ**

**2**

ವಿಸ್ತಾರ ಕ್ಷಿತಿಜ ನೆಲೆಯರಿಸಿ ಅವಳ ಅನಂತದ ಅಕ್ಷಿಯಾಗಿ

ಭಾವ ಭವ್ಯತೆಯ ಬೀಜ ಹುದುಗಿಸುತ ನಡೆದಂತೆ ಬೆಳಕ ಹೆಜ್ಜೆ
ಸತ್ಯದೇವತೆಯು ನಿತ್ಯ ತೋರುತಿಹ ಆ ಚಣದ ಕಡೆಗೆ ಗೆಜ್ಜೆ
ಬಲು ನವಿರು ಅಂಚು ಬದುಕೆಲ್ಲ ಮಿಂಚು ಚಣಕಾಲ ಕಣಸು ಕುಣಿದು
ಬುವಿಯ ಭ್ರೂಮಧ್ಯದೆಡೆಗೆ ಬಾಗಿತ್ತು ಮನನದಲಿ ಮಾಗಲೆಂದು

ಗಹನಾತಿ ಗಹನ ಸೌಂದರ್ಯ – ಹರಕೆ ವಿವರಣೆಯ ವರದ ವ್ಯಾಪ್ತಿ
ಗೂಢಗರ್ಭಿತದ ವರ್ಣವಿನ್ಯಾಸ ಆ ಚಿತ್ರ–ಲಿಪಿಯ ಜ್ಞಪ್ತಿ
ಲಿಖಿಸಿ ತಂದಿತ್ತು ಸಾಲು–ಸಾಲಿನಲಿ ಆ ಮಹತ್ –ಭಾವ ಪ್ರಜ್ಞ
ಬೋಧಿಸುತ ನಿತ್ಯ ಪರಮಪಾವನದ ಹೊಂಬೆಳಗ ದೈವ–ಯಜ್ಞ

ಗಗನದೆದೆಯಲ್ಲಿ ಉದಿತ ದಿವ್ಯ ಲಿಪಿ ಅದ್ಭುತದ ಪ್ರತಿಭೆಯಂದು
ತನ್ನ ತಾನರಿಯೆ ರೂಹುವಡೆದಿತ್ತು ತನ್ನಿರುವ ಕಂಡುಕೊಂಡು
ನಮ್ಮ ಚಿದ್ಭಾವ ಜೊತೆಗೆ ಬಯಕೆಗಳ ಸಂಕೇತ ಭವ್ಯ ಬೆಡಗು
ಹೃತ್ಕಮಲ ಅರಳಿ ದರ್ಶನವ ತೋರಿತಾಕ್ಷಣದಿ ದಿವ್ಯ ಬೆಳಗು

ಘನಕಪ್ಪು ರಿಕ್ತ ಜೊತೆಯಲ್ಲಿ ಕುಳಿತ ಬಹುತೇಕ ಭಾರ ಹೃದಯ
ಕಾಣದಲೆ ಇರುವ ತಾಣದೆದೆಯಿಂದ ವೈಭವದ ಬೆಳಕಿನುದಯ
ಮತ್ತೆ ಮರುಕಳಿಸಿ ಹೆಜ್ಜೆಯುದ್ವೇಗ ಹರಡಿರುವ ಹರವಿನಲ್ಲು
ಮಣದಲಿ ಮೂಡಿ ವೃದ್ಧಿಸಿತು ಬಿಂದು ಆ ಗಗನದೊಡಲಿನಲ್ಲು

ದಿವ್ಯ ರೆಪ್ಪೆಗಳು ತೆರೆಯೆ ತಾನಾಗ ಅರಳಿತ್ತು ಸ್ವರ್ಗ ದ್ವಾರ
ಸಚ್ಚಿದಾನಂದ ರೂಹು ತಾನೊಂದು ಬಂದಿತ್ತು ಸನಿಹ ತೀರ
ವಿಶ್ವದಾದ್ಯಂತ ದೇವಿ ಸರ್ವಜ್ಞೆ ತೋರುತಲಿ ಒಲವು ಹರಡಿ
ಅಲ್ಲಿ ಮಧ್ಯದಲಿ ರಾಯಭಾರಿಣಿಯು ನಿತ್ಯತ್ವ ಚಲನೆ ಮೂಡಿ

ಪೂರ್ವ ನಿರ್ಧರಿತ ಯಾನದಲಿ ತಾರೆ –ಮೇಳಗಳು ಸುತ್ತುವರೆದು
ಅವಳ ಪಾದಗಳಿಗಲ್ಲಿ ಅವಕಾಶ ಅವತರಿಸಿ ಮೂಡಿತಂದು
ಅರೆತೆರೆದು ದಿಟ್ಟಿ ಮರುಮರುಗಿ ಒಮ್ಮೆ ಗಮನಿಸುತ ತೆರೆಯ ಸೂರ್ಯ
ಮತ್ತೆ, ಪರಿಪಕ್ವ ಕ್ರಿಯೆಯ ಆರಂಭ ಅಮರತತ್ವದೆಡೆಯ ಕಾರ್ಯ

ಅವಿನಾಶಿಯಾದ ಪಥದೆಡೆಗೆ ಸನಿಹ, ಬುವಿಯಿಂದು ಪಡೆದು ಸಖ್ಯ
ಪ್ರಕೃತಿಸೂಕ್ಷ್ಮತೆಯ ಶ್ರವಣ ಜಾಗ್ರತದಿ ಆಲಿಸಿತು ಪದದ ವಾಕ್ಯ
ಮುಚ್ಚಿರುವ ಗೌಪ್ಯದಾಳಗಳ ಮೇಲೆ ಉಜ್ವಲದ ಸ್ಮಿತದಿ ತಾಗಿ
ವಿಸ್ತಾರ ಕ್ಷಿತಿಜ ನೆಲೆಯರಿಸಿ ಅವಳ ಅನಂತದ ಅಕ್ಷಿಯಾಗಿ

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 1 ಪುಟ 4)**

**3**

ಅಲ್ಲಿರುವದೆಲ್ಲ ಆತ್ಮ ತಾನೀಗ, ಇಲ್ಲದಿರೆ ಪೂರ್ಣಗೊಳಲು
ಪರಿಪೂರ್ಣವದುವು ಪರಿಪಕ್ವಗೊಂಡು ಚೈತ್ಯಾತ್ಮ–ದ್ರವ್ಯವಿರಲು,
ಚಿದಾಕಾಶವದು ಆತ್ಮಕವಕಾಶಗೊಳ್ಳುತಲಿ ವ್ಯಾಪ್ತ ಒಪ್ಪಿ
ಗೂಢಾತಿಗೂಢ–ಪರಮಾತ್ಮ ತಾಣ–ಪರಾಕಾಶವನು ಅಪ್ಪಿ

ಸಂವೇಗಗೊಂಡ ರಾಗದಾವೇಗದಾ ಅಗ್ನಿ–ಜ್ವಾಲೆಯೊಂದು
ಜೀವಾಂತರಾಳಗಳಲೀಗ ಭಾವ ಪ್ರಜ್ವಲನದಲ್ಲಿ ಇಂದು,
ಮಾಧುರ್ಯದುಂಬಿ ಕೋಮಲದ ಸ್ಪರ್ಶವದು ನಿರತ ನಿತ್ಯದೊಳಗು
ಸರ್ವ ಹೃದಯಗಳ ಸಮ್ಮಿಲನಗೊಳಿಸೆ ಸಂಪರ್ಕ ಸಂಘ ಬೆಳಗು

ಸಾವಿರದ ತಾವಿನೆಡೆಯಲ್ಲಿ ತೇಜದಾಕಾಶ ದ್ರವ್ಯದಲ್ಲಿ
ನಿರ್ಮಾಯ ಘನದ ತಲ್ಲೀಯದಲ್ಲಿ ಅಮರತ್ವ ಪ್ರೇಮದಲ್ಲಿ
ಅಮೃತತ್ವ ತುಂಬಿ ಅವಕಾಶವಾದ ಶಾಶ್ವತದ ತಾಣದಲ್ಲಿ
ಅರ್ಚನೆಯ ಸ್ಪಂದದೇಕೈಕ ಶುಭ್ರತೋಷವದು ಅದಿತಿಯಲ್ಲಿ,

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 14 ಪುಟ 291)**

# ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್
## ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀ ಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವ್ಹೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶ್ರೀಮಾತಾ (ದೇಹಧಾರಣ ಮಾಡಿದ ಅವರ ಆಧ್ಯಾತ್ಮಿಕ ಜೀವನಯಾತ್ರೆ ಹಾಗೂ ದೇಹದ ಯೋಗ) |
| 18 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 19 | ಶ್ರೀ ಅರವಿಂದ ದರ್ಶನ |
| 20 | ಶ್ರೀಮಾತೆ ಭಾರತಮಾತೆ |
| 21 | ದುರ್ಗಾಸ್ತೋತ್ರ |
| 22 | ಚಿಂತನಗಳು ಮತ್ತು ಸೂಕ್ತಿಗಳು |
| 23 | ಯೋಗ ಸಮನ್ವಯ |
| 24 | ಶ್ರೀ ಅರವಿಂದಾಶ್ರಮ |
| 25 | ಪ್ರಸೂತಿ ಪೂರ್ವದ ಶಿಕ್ಷಣ ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 26 | ಮಗುವನ್ನು ಪೋಷಿಸುವುದು ಹೇಗೆ? |
| 27 | ಸುಪ್ರಮಾನಸದ ಶ್ರೀಮಾತೆ |
| 28 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 29 | ಪೂರ್ಣಯೋಗದ ಪಥದಲ್ಲಿ |
| 30 | ಬೆಳಕಿನ ಕಿರಣಗಳು |
| 31 | 24th November 1926 (Descent of Overmental Consciousness) |
| 32 | ಶ್ರೀ ಅರವಿಂದರ ಸಾವಿತ್ರಿ |
| 33 | ಮಾನುಷ ಚಕ್ರ |
| 34 | ಚೈತ್ಯ ಪುರುಷ |
| 35 | ಭವಾನಿ ಭಾರತಿ |
| 36 | ಶಿಕ್ಷಣ |
| 37 | ಯೋಗಾರಂಭ |
| 38 | ಶ್ರೀ ಅರವಿಂದರು |
| 39 | ಶ್ರೀ ಅರವಿಂದರ ‘ಪ್ರೇಮ ಮತ್ತು ಮೃತ್ಯು’ |



ಫೋಟೊ: ಇಮೇಜಿಂಗ್ ಸಾವಿತ್ರಿ

**RNI No. 22511/1971**
No. of Pages **64 + 4 (Cov. Page)**
KAR Reg No.: RNP/KA/BGS/368/2024-2026
Licensed to post without prepayment License No.PMG BG/WPP-409/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



ಫೋಟೊ: ಇಮೇಜಿಂಗ್ ಸಾವಿತ್ರಿ

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.